The Babukodi B.V. Karanth Ranga Pratisthana


ಬಾಬುಕೋಡಿ ಬಿ.ವಿ. ಕಾರಂತ ರಂಗ ಪ್ರತಿಷ್ಠಾನ(ರಿ.)ದ ಎರಡನೆಯ ಕೃತಿ

ಪಾತ್ರಗಳು

ರಚನೆ : ಶಿರಗಾನಹಳ್ಳಿ ಶಾಂತನಾಯ್ಕ

ದೇವರಿಲ್ಲದ ಗೋಡೆ

ರಚನೆ : ದಮಯಂತಿ ನರೇಗಲ್ಲ





ಸಂಪಾದಕಿ : ಪ್ರೇಮಾ ಕಾರಂತ

ಸುಂದರ ಪ್ರಕಾಶನ
43, ಚಿತ್ರಶ್ರೀ ಕಲಾಮಂದಿರ 5ನೇ ತಿರುವು
ಅ.ನ. ಸುಬ್ಬರಾವ್‌ರಸ್ತೆ, ಹನುಮಂತನಗರ, ಬೆಂಗಳೂರು 560 019

ಬಾಬುಕೋಡಿ ಬಿ.ವಿ. ಕಾರಂತ ರಂಗ ಪ್ರತಿಷ್ಠಾನದ ಎರಡನೆಯ ಕೃತಿ

ಪಾತ್ರಗಳು

ರಚನೆ : ಶಿರಗಾನಹಳ್ಳಿ ಶಾಂತ ನಾಯ್ಕ

ದೇವರಿಲ್ಲದ ಗೋಡೆ

ರಚನೆ : ದಮಯಂತಿ ನರೇಗಲ್ಲ

(ಎರಡು ನಾಟಕಗಳು)

ಸಂಪಾದಕಿ : ಪ್ರೇಮಾ ಕಾರಂತ

ಸುಂದರ ಪ್ರಕಾಶನ,
ಚಿತ್ರಶ್ರೀ - ಕಲಾಮಂದಿರ - 5ನೇ ಅಡ್ಡರಸ್ತೆ
ಹನುಮಂತನಗರ - ಬೆಂಗಳೂರು- 560 019

Patragalu (Drama)
Written by : Shiraganahally Shanta Naik

Devarillada Gode (Drama)
Written by : Damayanthi Naregalla

Published by :
Sundara Prakashana,
Chitrasri-Kalamandira
A.N.S. Road- 5th Cross
Hanumanthanagar
Bangalore- 560 019

© B.V.Karantha Ranga Prathishtana-2004

ಗೌರವಾನ್ವಿತ ಸಲಹೆಗಾರರು :

ಪ್ರೊ॥ ಜಿ. ವೆಂಕಟಸುಬ್ಬಯ್ಯ	ಶ್ರೀ ಸಿ.ಆರ್. ಸಿಂಹ
ಪ್ರೊ॥ ಎಲ್.ಎಸ್. ಶೇಷಗಿರಿರಾವ್	ಡಾ. ವಿಜಯಾ
ಶ್ರೀ ವ್ಯಾಸರಾಯ ಬಲ್ಲಾಳ	ಶ್ರೀ ಎಚ್.ಜಿ. ಸೋಮಶೇಖರ ರಾವ್
ಶ್ರೀ. ಚಂದ್ರಶೇಖರ ಕಂಬಾರ	ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್

Phone : 26675998/57623165

Price : Rs. 60/-

Pages : XV + 47+ 63=125

First Edition : 2004

Cover Page :

Printed: Shakthi Printers & Publishers,
No. 277, 5th Cross,
Vidhana Soudha Extn.,
Kavidhama Nagar, Laggere
Bangalore-560 058.
Phone : 080-22712264, 22712299

ಕಾರಂತ ಮತ್ತು ಪ್ರತಿಷ್ಠಾನ

ಬಿ.ವಿ. ಕಾರಂತರ ಬಗ್ಗೆ, ಅವರ ಸಾಧನೆಗಳ ಬಗ್ಗೆ ಹಾಗೂ ಅವರ ಅಸಾಧಾರಣ ವ್ಯಕ್ತಿತ್ವದ ಬಗ್ಗೆ ನಾನು ಯಾರಿಗೂ ವಿಶೇಷವಾಗಿ ಹೇಳಬೇಕಾದ್ದೇನೂ ಇಲ್ಲ. ಬದುಕಿನಲ್ಲಿ ಯಾವ ಸುಖವನ್ನೂ ಅಪೇಕ್ಷಿಸದ ಕಾರಂತರಿಗೆ, ರಂಗಕಲೆ, ರಂಗಸಂಗೀತ, ರಂಗಸಾಹಿತ್ಯ, ರಂಗ ಪ್ರದರ್ಶನಗಳು ಇವೇ ಮಹಾಮಂತ್ರಗಳಾಗಿದ್ದುವು.

ಕಾರಂತರ ರಂಗಭೂಮಿಯ ಸುಪ್ತಚೇತನವನ್ನು ಸಕ್ರಿಯವಾಗಿಸುವ ಉದ್ದೇಶದಿಂದ **"ಬಾಬುಕೋಡಿ ಬಿ.ವಿ. ಕಾರಂತ ರಂಗ ಪ್ರತಿಷ್ಠಾನ"** ಸ್ಥಾಪಿಸಿ ನಮ್ಮಲ್ಲಿರುವ 12000 ಕ್ಕೂ ಹೆಚ್ಚು ಪುಸ್ತಕಗಳನ್ನೂ, 600 ನಾಟಕಕ್ಕೆ ಸಂಬಂಧಿಸಿದ ಭಾವಚಿತ್ರಗಳನ್ನೂ, ದೇಶದ ಮೂಲೆ ಮೂಲೆಯಿಂದ ಸಂಗ್ರಹಿಸಿರುವ ವೈವಿಧ್ಯಮಯ ವಾದ್ಯಗಳನ್ನೂ, ವಿಶ್ವದಾದ್ಯಂತ ಸಂಗ್ರಹಿಸಿರುವ ಪೋಸ್ಟರುಗಳನ್ನೂ, ಎರಡು ಸಾವಿರಕ್ಕೂ ಹೆಚ್ಚು ಆಡಿಯೋ, ವಿಡಿಯೋ, ಸಿ.ಡಿ., ವಿ.ಸಿ.ಡಿ , ಡಿ.ವಿ.ಡಿಗಳನ್ನೂ, ಸಾವಿರಾರು ಪತ್ರಿಕಾ ಹೇಳಿಕೆಗಳನ್ನೂ, ಪ್ರೊಜೆಕ್ಟರ್, ರೆಕಾರ್ಡಿಂಗ್ ಮಷಿನ್‌ಗಳನ್ನೂ, ವೇಷಭೂಷಣಗಳು, ರಂಗಪರಿಕರಗಳನ್ನೂ ರಂಗ ಪ್ರತಿಷ್ಠಾನಕ್ಕೆ ಒಪ್ಪಿಸಿದ್ದೇವೆ. ಕಾರಂತರ ಕಲಾ ಕನಸುಗಳೆಲ್ಲಾ 'ರಂಗ ಪ್ರತಿಷ್ಠಾನದ' ಮೂಲಕ ನನಸಾಗಲೆಂದು ಬಯಸುತ್ತೇವೆ.

ಕಳೆದ ವರುಷವಷ್ಟೇ ಈ ಕಾರ್ಯಕ್ರಮವನ್ನು ಹಮ್ಮಿಕೊಂಡ ಪ್ರತಿಷ್ಠಾನ, ಮೊದಲನೆಯ ಕಾರ್ಯಕ್ರಮವಾಗಿ "ನಾಟಕ ರಚನಾ ಸ್ಪರ್ಧೆ" ಏರ್ಪಡಿಸಿತ್ತು. ರಾಷ್ಟ್ರೀಯ ಮಟ್ಟದಲ್ಲಿ ಕಾರಂತರ ನಾಟಕಗಳ ನಾಟಕೋತ್ಸವ, ವಿಚಾರ ಸಂಕಿರಣ, ಕಾರಂತರ ಪೋಸ್ಟರುಗಳೂ, ವಾದ್ಯಗಳ ವಸ್ತು ಪ್ರದರ್ಶನ, ಕಾರಂತರ ಆತ್ಮಚರಿತ್ರೆ ಗ್ರಂಥ ಬಿಡುಗಡೆ ಮುಂತಾದ ಕಾರ್ಯಕ್ರಮಗಳನ್ನು ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಸಹಕಾರದಿಂದ ಕಾರ್ಯಗತಗೊಳಿಸಲಾಯಿತು.

ನಾಟಕ ರಚನಾ ಸ್ಪರ್ಧೆಗೆ ಬಂದ ನಾಟಕಗಳ ಸಂಖ್ಯೆ 52. ಅವುಗಳಲ್ಲಿ ಸ್ಪರ್ಧೆಯ ನಿಯಮಾವಳಿಗೆ ಒಳಪಟ್ಟವು 41 ಮಾತ್ರ. ಇವುಗಳಲ್ಲಿ ಹಲವು ನಾಟಕಗಳು ರಂಗಭೂಮಿಯ ಚಿಕಿತ್ಸಕ ಗುಣಗಳನ್ನು ಅರಿತಿದ್ದರೂ, ಕೇವಲ ಘೋಷಣೆ, ರಚನೆ ಏಕಮುಖವಾಗಿ, ಸಮಗ್ರ ರಂಗಾನುಭವ ಕೊಡುವಲ್ಲಿ ಸೋತಂತೆ ಇತ್ತು. 'ನಾಣಿ ಭಟ್ಟನ ಸ್ವರ್ಗದ ಕನಸು' ಮತ್ತು 'ನಾವು ಓದಬೇಕು' ಸ್ಪರ್ಧೆಗೆ ಬಂದ ಎರಡು ಮಕ್ಕಳ ನಾಟಕಗಳು.

ನಾಣಿ ಭಟ್ಟನ ಸ್ವರ್ಗದ ಕನಸು, ಇಹದಲ್ಲಿ ಸಾರ್ಥಕ್ಯ ಪಡೆಯುವ ಕ್ರಿಯಾಶೀಲತೆ ನಮ್ಮದಾಗಬೇಕೆಂಬ ಮಕ್ಕಳಿಗೆ ತಿಳಿ ಹೇಳುವ ರಂಜನೀಯ ಕಲ್ಪನಾ ಸಾಮರ್ಥ್ಯವಿರುವ ಮಕ್ಕಳ ನಾಟಕ.

ಈ ನಾಟಕಗಳನ್ನು ಓದಿ, ಚರ್ಚಿಸಿ, ವಿಮರ್ಶಿಸಿ, ಅಂಕಹಾಕಿ ತೀರ್ಪು ನೀಡಿದವರು ಸಾಗರದ ಎಸ್. ಮಾಲತಿ ಹಾಗೂ ನೀನಾಸಂ ಸಂಸ್ಥೆಯ ವೆಂಕಟರಮಣ ಐತಾಳರು. ''ಬಹಳಷ್ಟು ನಾಟಕಗಳು ಘೋಷಣೆ, ಬಂಡಾಯದ ರೀತಿಯದಾಗಿದ್ದು, ಅವು ಸೃಜನಾತ್ಮಕತೆಯನ್ನು ಮೊಂಡುಗೊಳಿಸಿವೆ. ಸ್ಪರ್ಧೆಗೆ ಬಂದ ನಾಟಕಗಳ ಗುಣಮಟ್ಟ ಆಶಾದಾಯಕವಾಗಿಲ್ಲ'' ಎಂಬುದು ಐತಾಳರ ಅಭಿಪ್ರಾಯವಾದರೆ ''ಬಹುಮಾನ ಪಡೆದ ಎರಡು ನಾಟಕಗಳ ಹೊರತಾಗಿಯೂ ಸುಮಾರು 10, 12 ನಾಟಕಗಳು ಉತ್ತಮ ಮಟ್ಟದಾಗಿದೆ'' ಎಂಬುದು ಮಾಲತಿಯವರ ಅಭಿಪ್ರಾಯ.

ಇದೆಲ್ಲ ಸ್ಪರ್ಧೆಯಲ್ಲಿ ನಡೆಯುವುದು ಸಾಮಾನ್ಯ. ನನ್ನ ದೃಷ್ಟಿಯಲ್ಲಿ ದೇವರ ಕಣ್ಣು, ಯುದ್ಧ ಭಾರತ, ಕಲಿವೀರ ಜುಂಜಪ್ಪ, ಡ್ರೀಂ ಹೌಸ್, ಸೂರ್ಯ ಸಖಿಯ ಒಕ್ಕಲು, ಮತ್ತೊಂದು ಮಹಾಭಾರತ, ಗೊಂಬೆ ಸಿಂಹಾಸನ, ಬಿಡಿ ನಾನು ದೇವರಾಗಬಲ್ಲೆ, ವೀರ ಕದಂಬ, ರಂಗ ಪುರಂದರ, ವೃಕ್ಷ ಪಾರಿಜಾತ, ಸಖ್ಯಿವಾಖ್ಯಾನ, ಉರ್ವಿ, ಚೆರು ವಸುಧಾಳ ಮದುವೆ, ಈ ನಾಟಕಗಳು ಉತ್ತಮ ಸಂವಿಧಾನವನ್ನು ಹೊಂದಿದ್ದು ದೃಶ್ಯದಿಂದ ದೃಶ್ಯಕ್ಕೆ ಸಾಗುವ ನಡೆ, ಆಸಕ್ತಿದಾಯಕವಾಗಿದ್ದು ನಮ್ಮ ಗಮನವನ್ನು ಸೆಳೆಯುತ್ತವೆ.

ತೀರ್ಪುಗಾರರಿಂದ ಮೊದಲ ಬಹುಮಾನಕ್ಕೆ ಅರ್ಹವೆನಿಸಿಕೊಂಡ ನಾಟಕ, ಮೈಸೂರು ಶಾಂತಾ ನಾಯ್ಕ ಅವರ ''ಪಾತ್ರಗಳು'' ಬದುಕು ಬರ್ಬರವೆನಿಸಿದ ಮೂರು ಪಾತ್ರಗಳು, ಸಾಯಲು ಒಂದೇ ಮರದ ಬುಡಕ್ಕೆ ಬಂದು, ಸಾಯಲು ಹಿಂಜರಿದು, ಪರಸ್ಪರ ತಮ್ಮ ಕಥೆಗಳನ್ನು ಬಿಚ್ಚಿಡುತ್ತಾ, ಹಂಚಿಕೊಳ್ಳುತ್ತಾ, ಕೊನೆಗೆ ತಮ್ಮ ತಮ್ಮ ಸ್ಥಿತಿಗೆ ಕಾರಣಗಳೇನು? ಎಂದು ಯೋಚಿಸುತ್ತಾ, ಮತ್ತೆ ಬದುಕಿನಸತ್ತ ಹೊರಳುತ್ತಾರೆ.

ಎರಡನೆಯ ಬಹುಮಾನಕ್ಕೆ ಪಾತ್ರವಾದ ನಾಟಕ ದಮಯಂತೀ ನರೇಗಲ್ ಅವರ ''ದೇವರಿಲ್ಲದ ಗೋಡೆ'' ಒಂದು ಪರಂಪರೆಯ, ಒಟ್ಟು ಕುಟುಂಬದ, ಒಂದು ಸಂಸ್ಕೃತಿಯ ವಿನಾಶ. ಇಂದಿನ ಜಾಗತೀಕರಣದ, ವ್ಯಾಪಾರೀಕರಣದ ಸಮ್ಮುಖದಲ್ಲಿ ಆಗುವುದನ್ನು ದೇಸಾಯರ ಕುಟುಂಬದ ವಾಡೆಯ ವಿನಾಶ ಹಾಗೂ ದೇಸಾಯರ ಸಾವಿನಲ್ಲಿ ಪ್ರತಿಧ್ವನಿಸುತ್ತ ಪ್ರತಿಪಾತ್ರಗಳ ಒಳತೋಟಿಯನ್ನು ಬಹಳ ಸೂಕ್ಷ್ಮವಾಗಿ ಬಿಡಿಸುತ್ತದೆ.

ಈ ವರುಷವೂ ನಾಟಕ ಸ್ಪರ್ಧೆ ಏರ್ಪಡಿಸಬಹುದೆಂದು- ಕುತೂಹಲದಿಂದ ದೂರವಾಣಿ ಕರೆಗಳು ಬರುತ್ತಿವೆ. ಈ ವರುಷದ ಕಾರ್ಯಕ್ರಮಗಳ ರೂಪರೇಷೆ ಬೇರೆಯೇ ಇರುವುದರಿಂದ ಮುಂದಿನ ವರುಷ ನೋಡೋಣ! ಈ ಎರಡು ನಾಟಕಗಳ ಸಂಯುಕ್ತ ಪುಸ್ತಕವನ್ನು ಕಲಾಭಿಮಾನಿಗಳು ಆದರದಿಂದ ಸ್ವಾಗತಿಸಬೇಕೆಂದು ಆಶಿಸುತ್ತೇನೆ.

ಮಾನ್ಯ ಗೌರಿಸುಂದರ್, ನನಗೂ, ಕಾರಂತರಿಗೂ 1963 ರಿಂದಲೂ ಪರಿಚಯಸ್ಥರೂ ಅಲ್ಲದೆ ಆಪ್ತಮಿತ್ರರೂ ಕೂಡ. ಕಾರಂತರನ್ನು ಕಂಡರೆ ಅಪಾರವಾದ ಪ್ರೀತಿ ವಿಶ್ವಾಸ. ಆಗಲೇ ಕಾರಂತರಿಗೊಂದು ಪುಟ್ಟ ಮ್ಯಾಗ್ನೆಟಿಕ್ ಸ್ಪೂಲ್‌ನ ರೆಕಾರ್ಡರ್ ಕೊಟ್ಟಿದ್ದರು. ಈಗಿರುವ ಟೇಪ್ ರೆಕಾರ್ಡರ್‌ಗಳು ಆಗಿನ್ನೂ ಬಂದಿರಲಿಲ್ಲ. ಕಾರಂತರು ಆ ಟೇಪ್‌ರೆಕಾರ್ಡರನ್ನು ಎಷ್ಟು ಪ್ರೀತಿಯಿಂದ ಕಾಪಾಡಿಕೊಂಡು ಬಂದಿದ್ದರೆಂದರೆ ಕೆಲವು ವರುಷಗಳ ಹಿಂದೆಯೂ ಇತ್ತು. ಅದರ ಪುಟಾಣಿ ಸ್ಪೂಲ್ ಎಲ್ಲೂ ಸಿಕ್ಕುತ್ತಿರಲಿಲ್ಲವಾದ್ದರಿಂದ ಅದೀಗ ಮ್ಯೂಸಿಯಂ ಪೀಸ್ ಆಗಿದೆ. ನಾನದರಲ್ಲಿ ನನ್ನ ನಾಟಕದ ಸಂಭಾಷಣೆಗಳನ್ನು ರೆಕಾರ್ಡ್‌ಮಾಡಿ ಮತ್ತೆ ಮತ್ತೆ ಕೇಳಿ ತಪ್ಪುಗಳನ್ನೆಲ್ಲಾ ತಿದ್ದಿಕೊಳ್ಳುತ್ತಿದೆ.

ಯಾವಾಗಲೂ ಏನಾದರು ಮಾಡುತ್ತಿರುವುದು ಗೌರಿಸುಂದರ್ ಅವರ ಸ್ವಭಾವ. ಪ್ರಮುಖವಾದ ಹಲವಾರು ಪುಸ್ತಕಗಳನ್ನು ಅವರು ತಮ್ಮ ಸುಂದರ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಪುಸ್ತಕ 'ಬಿಡುಗಡೆ' ಕಾರ್ಯಕ್ರಮವನ್ನು ಅವರಷ್ಟು ಅದ್ಧೂರಿಯಾಗಿ ಮಾಡುವವರು ಬಹಳ ಕಡಿಮೆ. 'ಎರಡು ನಾಟಕಗಳು' ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟು ಬಿಡುಗಡೆ ಮಾಡುವ ಹೊಣೆಯನ್ನು ಹೊತ್ತಿರುವ ಸುಂದರ ಪ್ರಕಾಶನಕ್ಕೆ ಪ್ರತಿಷ್ಠಾನದ ಪರವಾಗಿ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

- ಪ್ರೇಮಾ ಕಾರಂತ

ಅಭಿಪ್ರಾಯ

"ಪಾತ್ರಗಳು" ನಾಲ್ಕು ದೃಶ್ಯಗಳ ನಾಟಕ. ಸ್ವಲ್ಪ ಹೆಚ್ಚೇ ಅನ್ನುವಷ್ಟು ಪಾತ್ರಗಳಿರುವ ಈ ನಾಟಕ ಕೊಂಚ 'Loud' ಆಗಿಯೇ ಆತ್ಮಹತ್ಯೆಗಾಗಿ ಪ್ರಯತ್ನಿಸುವ ಮೂರು ವ್ಯಕ್ತಿಗಳ ಕಥೆಯ Flash -Back ಮೂಲಕ ಬಡತನ, ಶೋಷಣೆ, ಬಂಡಾಯಗಳನ್ನು ಮತ್ತು ಕೆಲವು 'ಸಂದೇಶ' ಗಳನ್ನು ಹೇಳುವುದಾಗಿದೆ. ನಾಟಕದ ಒಟ್ಟು ಬಂಧ ಹಾಗೂ ವಸ್ತು ವಿಶ್ಲೇಷಣೆ ಮತ್ತಷ್ಟು ಸಂಕೀರ್ಣವಾಗಿದ್ದು, ಘಟನೆಗಳನ್ನು ಮತ್ತಷ್ಟು Chisel ಮಾಡಿದ್ದರೆ ನಾಟಕ ಈಗಿರುವುದಕ್ಕಿಂತ ಹೆಚ್ಚು ಪ್ರಭಾವಶಾಲಿಯಾಗ ಬಹುದಾಗಿತ್ತು. ಸಾಮಾಜಿಕ ಸಮಸ್ಯೆಗಳು, ಅದರ ಬಗ್ಗೆ ಕಾಳಜಿಗಳಿಂದ ಕೂಡಿರುವ 'ಪಾತ್ರಗಳು' ಒಂದು ಒಳ್ಳೆಯ ಪ್ರಯತ್ನ

'ದೇವರಿಲ್ಲದ ಗೋಡೆ' ನಾಟಕ ಕಾದಂಬರಿಗೆ ಒಳ್ಳೆ ವಸ್ತುವಾಗು ವಂಥದ್ದು. ವಂಶಪಾರಂಪರ್ಯವಾಗಿ ಬಂದದು ಮೈಗೆ ಹತ್ತಿರುವ ಚರ್ಮ ದಂತೆ; ಅದರಿಂದ ಬಿಡಿಸಿಕೊಳ್ಳುವುದು ಎಷ್ಟೊಂದು ಕಷ್ಟಕರ, ಬೇರುಗಳ ಸಮೇತ ವೃಕ್ಷವನ್ನು ಕಿತ್ತುಹಾಕಿದಂತೆ. ಅಂತಹ ಸಂದರ್ಭಕ್ಕೆ ಸಿಕ್ಕಿ ನಾಟಕದ ಮುಖ್ಯ ಪಾತ್ರದಲ್ಲಿ ಬರುವ ದೇಸಾಯಿಯರ ವೇದನೆ ಸಂವೇದನೆಗಳು ನಾಟಕದಲ್ಲಿ ಬಂದರೂ, ಎರಡು ದೃಶ್ಯಗಳಲ್ಲಿ ಪಾತ್ರಗಳು ತಮ್ಮ ಚಿಕ್ಕ ವಯಸ್ಸಿಗೆ ಹೋಗಬೇಕಾಗಿರುವ ಪ್ರಸಂಗಗಳು ತಾಂತ್ರಿಕ ದೃಷ್ಟಿಯಿಂದ ಸಮಸ್ಯೆಗಳನ್ನು ಒಡ್ಡಬಹುದಾಗಿದೆ. ಹಾಗೆಯೇ ನಾಟಕದಲ್ಲಿ ರಚನಾಕಾರರು ಸೂಚಿಸಿರುವಂತಹ 'ambience' ರಂಗಭೂಮಿಯ ಮೇಲೆ ತರುವುದು ತ್ರಾಸದಾಯಕ ಹಾಗೂ ಖರ್ಚಿನ ಬಾಬ್ತು ಆಗ ಬಹುದಾಗಿದೆ. ಆದರೂ ಈ ಪ್ರಯತ್ನ ಪ್ರಶಂಸನೀಯ ಎಂದು ಹೇಳಬೇಕು.

ಈ ಎರಡೂ ನಾಟಕಗಳು ಉತ್ತರ ಕರ್ನಾಟಕದ ಭಾಷೆಯಲ್ಲಿವೆ. ನಾಟಕಗಳ ರಚನೆಯೇ ಸ್ಥಗಿತವಾಗಿದ್ದು 'ಚರ್ವಿತ ಚರ್ವಣ' ದಲ್ಲೇ ತೃಪ್ತಿರಾಗಬೇಕಾಗಿರುವ ಪ್ರಸ್ತುತ ಸಂದರ್ಭದಲ್ಲಿ ಇಂಥ ಪ್ರಯೋಗಶೀಲ ನಾಟಕಗಳು ಸ್ವಾಗತಾರ್ಹ.

- ಎಚ್.ಜಿ. ಸೋಮಶೇಖರ ರಾವ್

ಅಭಿಪ್ರಾಯ

ಈಚೆಗೆ ಕನ್ನಡದಲ್ಲಿ ಉತ್ತಮ ನಾಟಕಗಳು ಪ್ರಕಟವಾಗುವುದೇ ನಿಂತು ಹೋಗಿದೆ. ಓದುವ ನಾಟಕಗಳು ಹೆಚ್ಚಾಗಿವೆ; ರಂಗಭೂಮಿಯ ಮೇಲೆ ಪ್ರದರ್ಶಿಸಬೇಕಾದ ನಾಟಕಗಳು ಕಡಿಮೆಯಾಗಿವೆ. ಇಂಥ ಸಾಂಸ್ಕೃತಿಕ ಸನ್ನಿವೇಶದಲ್ಲಿ ಶಾಂತಾ ನಾಯ್ಕ ಅವರ 'ಪಾತ್ರಗಳು' ಮತ್ತು ದಮಯಂತಿ ನರೇಗಲ್ಲ ಅವರ 'ದೇವರಿಲ್ಲದ ಗೋಡೆ' ಪುಸ್ತಕ ರೂಪವಾಗಿ ಬರುತ್ತಿವೆ. ನಾನು ಇವೆರಡು ನಾಟಕಗಳನ್ನೂ ಓದಿದ್ದೇನೆ. ಇವೆರಡು ಪ್ರದರ್ಶನ ದೃಷ್ಟಿಯಿಂದ ಉತ್ತಮ ನಾಟಕಗಳೇ ಸರಿ. ನಮ್ಮ ರಂಗಭೂಮಿಗೆ ಉತ್ತರ ಕರ್ನಾಟಕದ ಭಾಷೆ, ಸಂಸ್ಕೃತಿ, ಸಾಮಾಜಿಕ ಸನ್ನಿವೇಶಗಳಿಂದ ಕೂಡಿರುವ ನಾಟಕಗಳು ಕಡಿಮೆಯೇ. ಕಂಬಾರರ ನಾಟಕಗಳು ತಮ್ಮ ಅಸೀಮ ಶಕ್ತಿಯಿಂದ ನಮ್ಮನ್ನು ಸೆಳೆಯುತ್ತವೆ. ಇವೆರಡು ನಾಟಕಗಳು ತಾಂತ್ರಿಕ ದೃಷ್ಟಿಯಿಂದ ಮತ್ತು ವಸ್ತು ದೃಷ್ಟಿಯಿಂದ ನನ್ನ ಮನಸಸ್ಸನ್ನು ಸೆಳೆದುವು. ಮೊದಲನೆಯದು ಜೀತ-ದಬ್ಬಾಳಿಕೆಗಳ ಮೂಲಕ ಸಾವನ್ನು ಅರಸಿಕೊಂಡು ಹೋಗಿ ತಮ್ಮ ಬದುಕಿನ ಇತಿವೃತ್ತಗಳನ್ನು ತೆರೆದು ಕೊಳ್ಳುತ್ತವೆ. ಸಾವು-ಬದುಕು ಇವೆರಡನ್ನು ಬದುಕಿನ ಸಾಕ್ಷಾತ್ಕಾರಾದ ಮೂಲಕ ನೋಡಲು ಪ್ರಯತ್ನಿಸುತ್ತದೆ. 'ದೇವರಿಲ್ಲದೆ ಗೋಡೆ' ನಾಟಕವು ಬದುಕಿಗಾಗಿ ಬದುಕುತ್ತಿರುವವರ ಒಳನೋಟ ಮತ್ತು ಅವರ ಮಾನಸಿಕ ಸ್ಥಿತಿ-ಗತಿಗಳನ್ನು ಹೇಳುತ್ತದೆ. ಇವೆರಡು ತಾಂತ್ರಿಕ ದೃಷ್ಟಿಯಿಂದ ಉತ್ತಮ ನಾಟಕಗಳೇ ಸರಿ. ವಸ್ತು, ಪಾತ್ರ, ಭಾಷೆ, ಪರಿಕರಗಳೆಲ್ಲವೂ ಕಾರ್ಯೈಕ್ಯ, ಶ್ರೆಯೈಕ್ಯ, ಸ್ಥಳೈಕ್ಯಗಳ ಜತೆ ಬೆರೆತು ಒಂದನ್ನೊಂದು ಕೈ ಹಿಡಿದು ನಡೆಯುತ್ತವೆ. ಈ ಇಬ್ಬರು ನಾಟಕಕಾರರನ್ನು ನಾನು ಅಭಿನಂದಿಸಬೇಕು. ಕನ್ನಡಕ್ಕೆ ಎರಡು ಉತ್ತಮ ನಾಟಕಗಳು ಬರುವಂಥಾದದ್ದು ಮಾತ್ರವಲ್ಲ ಇವೆರಡು ಪ್ರಯೋಗಕ್ಕೆ ದೊರಕಬೇಕೆಂಬುದು ನನ್ನ ಆಸೆ.

- ಪ್ರೊ. ಮಲ್ಲೆಪುರಂ. ಜಿ. ವೆಂಕಟೇಶ್.

ಅಭಿಪ್ರಾಯ

ಬಿ.ವಿ. ಕಾರಂತ ಅವರು ಕನ್ನಡ ಮಾತ್ರವಲ್ಲ, ಇಡೀ ಭಾರತ ರಂಗಭೂಮಿಯಲ್ಲೇ ತಮ್ಮ ವಿಶಿಷ್ಟವಾದ ಛಾಪು ಮೂಡಿಸಿದವರೆ ದಕ್ಷಿಣ ಕನ್ನಡದ ಬಾಬುಕೋಡಿಯ ಈ ಬಾಲಕ ಈ ಬಾಲಕ ಗುಬ್ಬಿ ನಾಟಕ ಕಂಪೆನಿ ಸೇರಿ, ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ವಿದ್ಯಾರ್ಥಿಯಾಗಿ, ಮುಂದೇ ಅದೇ ಸಂಸ್ಥೆಯ ನಿರ್ದೇಶಕರೂ ಆಗಿ ಬೆಳೆದರು. ಭೋಪಾಲದಲ್ಲಿ ರಂಗಮಂಡಲ, ಮೈಸೂರಿನಲ್ಲಿ ರಂಗಾಯಣ ರೆಪರ್ಟರಿಗಳ ಸ್ಥಾಪನೆಗೆ ಕಾರಣ ಪುರುಷರು.

ಬಿ.ವಿ. ಕಾರಂತರ ನೆನಪನ್ನು ಹಸಿರಾಗಿಡಲು ಪ್ರತಿಷ್ಠಾನದ ವತಿಯಿಂದ ನಾಟಕ ರಚನಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಬಹುಮಾನ ಪಡೆದ ಎರಡು ನಾಟಕಗಳು ಇಗೋ ನಿಮ್ಮ ಕೈಯಲ್ಲಿವೆ.

'ಪಾತ್ರಗಳು'-ಹಳ್ಳಿಗಾಡಿನ ಬಡತನದ ಬವಣೆಯ ವಿವಿಧ ಮುಖಗಳನ್ನು ಅನಾವರಣಗೊಳಿಸುವ ನಾಟಕ. ಇಬ್ಬರು ಗಂಡಸರು ಒಂದು ಮರಕ್ಕೆ ನೇಣುಹಾಕಿಕೊಂಡು ಸಾಯಲು ಸಿದ್ಧವಿದ್ದಾರೆ. ಅಲ್ಲಿಗೆ ಅದೇ ಉದ್ದೇಶಕ್ಕೆ ಮತ್ತೊಬ್ಬ ಬಡಮಹಿಳೆಯ ಪ್ರವೇಶ. ನಂತರ ಮೂವರೂ ತಮ್ಮ ದಟ್ಟ ದಾರಿದ್ರ್ಯದ ಕತೆಗಳನ್ನು ನಿರೂಪಿಸುತ್ತಾರೆ. ಮೂರೂ ಸನ್ನಿವೇಶಗಳು ಕರುಣಾಜನಕವಾಗಿವೆ. ಬಡತನ, ಶೋಷಣೆಗಳನ್ನು ಕಣ್ಣ ಮುಂದೆ ನಿಲ್ಲಿಸುತ್ತವೆ. ಇಂಥ ಬದುಕಿಗೆ ಕೊನೆಯೆಲ್ಲಿ? ಪರಿಹಾರವೆಲ್ಲಿ? ಎಂಬ ಪ್ರಶ್ನೆಯಲ್ಲಿ ನಾಟಕ ಮುಕ್ತಾಯ.

'ದೇವರಿಲ್ಲದ ಗೋಡೆ'- ಉತ್ತರ ಕರ್ನಾಟಕದ ದೇಸಗತಿಯ, ಒಂದು ವಾಡೆಯ ಸುತ್ತ ಕಟ್ಟಿರುವ ನಾಟಕ. ಒಂದು ಕಾಲಕ್ಕೆ ಶ್ರೀಮಂತಿಕೆಯಿಂದ ಬೀಗಿದ್ದು, ಈಗ, ಅವನತಿಯ ಹಾದಿ ಹಿಡಿದ ವಾಡೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಹಿರಿಯ ದೇಸಾಯಿ ಮತ್ತು ಅವನ ಸಂಸಾರದ ಕತೆ ಇದೆ. ಇಲ್ಲಿ ಆತನ ಸಂಗಡ ಇದ್ದಾರೆ ಹೆಂಡತಿ, ಮಗ, ಸೊಸೆ, ಮಗಳು, ಮೊಮ್ಮಕ್ಕಳು, ಮುಂಬೈಯಿಂದ ಬರುವ ಮತ್ತೊಬ್ಬ ಮಗ, ಅವನ ಕುಟುಂಬದ ಹುನ್ನಾರದಿಂದ ವಾಡೆಯು ಹಣಕ್ಕಾಗಿ ಒಬ್ಬ ಮುಂಬೈವಾಲ ವ್ಯಾಪಾರಿಯ ಕೈಗೆ ಹಸ್ತಾಂತರ ಆಗುತ್ತದೆ. ಹಳೆಯ ನೆನಪುಗಳು, ವಾಡೆಯ ಮಂದಿಯನ್ನು ಕಾಡುತ್ತವೆ. ಸಂಸಾರದಲ್ಲಿ ಬಿರುಕು, ವೈಮನಸ್ಯ, ವಾಡೆಯ ಗೋಡೆಗಳು, ಕಂಬಗಳು ವ್ಯಾಪಾರಿಯ ದೆಸೆಯಿಂದ ಒಂದೊಂದಾಗಿ ಮುರಿದು ಬೀಳುತ್ತವೆ. ಹಳೆಯ ಮತ್ತು ಹೊಸ ಮೌಲ್ಯಗಳ ಘರ್ಷಣೆ ಈ ನಾಟಕದ ವಸ್ತು.

ಬಹುಮಾನ ಪಡೆದ ಈ ಎರಡೂ ನಾಟಕಗಳ ಪ್ರಕಾಶಕರು, ಸುಂದರ ಪ್ರಕಾಶನದ ಶ್ರೀ ಗೌರಿಸುಂದರ್.

-ಸಿ.ಆರ್. ಸಿಂಹ

ಅಭಿಪ್ರಾಯ

ರಂಗಭೂಮಿಯ ಮಾಂತ್ರಿಕ ಎನ್ನಬಹುದಾದ ಬಿ.ವಿ. ಕಾರಂತ್ ಕನ್ನಡ ನಾಟಕದ ನೀಲಿ ನಕಾಶೆಯಲ್ಲಿ ಹೊಸತನದ ಅರಳಿಸಿದ ಗಾರುಡಿಗ. ಮಹತ್ವಾಕಾಂಕ್ಷೆಯ ಈ ನಿರ್ದೇಶಕ ಪ್ರತಿ ಪ್ರಯೋಗಗಳಲ್ಲಿ ಹೊಸತನ ಕಸಿಮಾಡುತ್ತ- ರಂಗ ಸಂಗೀತದಲ್ಲೂ ಹೊಸ ಸವಾಲುಗಳನ್ನೇ ಎದುರಿಸಿ-ಗೆದ್ದವರು. ಇವರ ಕಲಾತ್ಮಕ ಸ್ಪರ್ಶದಿಂದ ಕಲಾವಿದರಾಗಿ ರೂಪುಗೊಂಡ ಕಲಾವಿದರು ಇಂದು ಹೇರಳವಾಗಿದ್ದಾರೆ.

ರಂಗಭೂಮಿ-ಸಿನಿಮಾ ಹಾಗೂ ಮಕ್ಕಳ ರಂಗಭೂಮಿಗೆ ಅಪಾರ ಸೇವೆಗೈದ ಕಾರಂತ್ ನಾಟಕ ರಂಗಕ್ಕೆ ವಿಮರ್ಶನಾ ಲೋಕಕ್ಕೆ ಹೊಸ ನೀರು ಹರಿದು ಬರಬೇಕೆಂದು ಹಂಬಲಿಸಿದವರು. ಅವರು ದೆಹಲಿಯಿಂದ ಬೆಂಗಳೂರಿಗೆ ಬಂದಾಗ ಮೊದಲು ನಮ್ಮ ಚಿತ್ರಕಲಾವಿದರೊಂದಿಗೆ ಅಭಿನಯಿಸಿದ ಅ.ನ.ಸು. ಅವರ 'ಒಂದೇ ಒಂದು' ನಾಟಕ ನಾನಿನ್ನೂ ಮರೆತಿಲ್ಲ. ಅನಂತರ ಅವರು ಅಭಿನಯಸಿದ 'ಸಾಹಿತ್ಯ ಸ್ಟಾಕಿಂಗ್ ಕಂಪನಿ' ಇಂದಿಗೂ ಪ್ರಸ್ತುತವೆನಿಸುವ ವಿಡಂಬನೆ. ತುಂಬ ಸರಳ ರಂಗ ಸಂಚಿಕೆಯಲ್ಲಿ ಅಭಿನಯಿಸಲ್ಪಟ್ಟರೂ- ಎಲ್ಲರೂ ಬೆಕ್ಕಸಬೆರಗಾಗಿ ನೋಡುವಂತೆ ಮಾಡಿದ ನಾಟಕ 'ಏವಂ ಇಂದ್ರಜಿತ್'

ನನ್ನ ಜಂಬೂ ಸವಾರಿ ಮಕ್ಕಳ ನಾಟಕ ಗೌರಿ ಸುಂದರ್, ಕಾರಂತರ ನಿರ್ದೇಶನದಲ್ಲಿ ರಂಗಕ್ಕೆ ತಂದು ಒಂದೇ ದಿನ ಕಲಾಕ್ಷೇತ್ರದಲ್ಲಿ ಐದು ಪ್ರದರ್ಶನಗಳನ್ನೇರ್ಪಡಿಸಿದಾಗ ಜೀವಂತ ಆನೆಯೇ ರಂಗಕ್ಕೆ ಬಂತೇನೋ ಎನಿಸುವಂತ ಬೃಹದಾಕಾರದ ಬಿದುರಿನ ಆನೆ ಮಹದಾನಂದಕ್ಕೆ ಕಾರಣವಾಗಿತ್ತು....

ಕಾರಂತ್‌ಗೆ ಯುವ ಪ್ರತಿಭೆಗಳಲ್ಲಿ ಅಪಾರ ಒಲುವಿದ್ದರಿಂದಲೇ ನಮ್ಮ ಅಭಿನಯ ತರಂಗದಲ್ಲಿ ಒಳ್ಳೆ ವಿಮರ್ಶೆ ಬರೆಯುವವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ನೀಡುತ್ತ ಬಂದಿದ್ದರು. ಈಗ ಬಿ.ವಿ. ಕಾರಂತ ಪ್ರತಿಷ್ಠಾನದ ಮೂಲಕ ನಾಟಕ ಸ್ಪರ್ಧೆಯೊಂದನೇರ್ಪಡಿಸಿ ಬಹುಮಾನಿತ ನಾಟಕಗಳನ್ನೇ ಅಚ್ಚಿಸುವ ಮೂಲಕ ಶ್ರೀಮತಿ ಪ್ರೇಮಾ ಕಾರಂತ್, ಕಾರಂತರಿಗೆ ತೃಪ್ತಿಯಾಗುವಂತ ಕೆಲಸ ಮಾಡಿ ಯುವ ನಾಟಕಕಾರರ ಬೆಳೆ ಹುಲುಸಾಗಲು ಕಾರಣವಾಗಿದ್ದಾರೆ ಎಂಬುದು ಅತ್ಯಂತ ಸಂತೋಷ ತರುವ ಅಂಶ.

- ಎ.ಎಸ್. ಮೂರ್ತಿ

ಕಾರಂತ ಗೀತೆ

೧೯೭೦ ರಲ್ಲಿ ಬಿ.ವಿ. ಕಾರಂತರ ಪರಿಚಯ. ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಗುತ್ತಿಗೆರೆ ಮಾನಪ್ಪ, ಎನ್.ಕೆ.ಮೋಹನರಾಂ, ಎ.ಎಸ್. ಮೂರ್ತಿ, ಚಂದ್ರಶೇಖರ್ ಕಂಬಾರ, ಹೆಚ್.ಜಿ. ಸೋಮಶೇಖರ ರಾವ್ ಇವರೊಂದಿಗೆ ಅಂದು ನನ್ನ ಓಡಾಟ ದಿನಂಪ್ರತಿಯ ಕಾಯಕವಾಗಿತ್ತು. ಹಾಲಿಡೆ ಇನ್ ಎಂಬ ಹೊಟೆಲ್‌ನಲ್ಲಿ ಕಾರಂತ, ನಾನು, ಲಂಕೇಶ್ ಕನಿಷ್ಟ ವಾರಕ್ಕೆ ಮೂರು ದಿನ ವಾದರೂ ಸೇರುತ್ತಿದ್ದೆವು. ಎ.ಎಸ್. ಮೂರ್ತಿ ಅವರ ಅದ್ಭುತ ಮಕ್ಕಳ ನಾಟಕ 'ಜಂಬೂಸವಾರಿ' ರಂಗದ ಮೇಲೆ ತರಬೇಕೇಂದಾಗ ಸಂತಸದಿಂದ ಒಪ್ಪಿದವರು ಕಾರಂತ. ಕಾರಂತರ ನಿರ್ದೇಶನದಲ್ಲಿ ಈ ಜನಪ್ರಿಯ ನಾಟಕ ಜನಮೆಚ್ಚುಗೆ ಗಳಿಸಿತು. ಆ ಕಾಲದ ಈ ಅದ್ದೂರಿ ನಾಟಕದ ನಿರ್ಮಾಪಕ ನಾನಾಗಿದ್ದೆ. ಅನಂತರ ಈ ನಾಟಕ ಕೆ.ಎಸ್.ಎಲ್. ಸ್ವಾಮಿ (ರವೀ) ಅವರ ನಿರ್ದೇಶನದಲ್ಲಿ ಚಿತ್ರವೂ ಆಗಿ ರಾಷ್ಟ್ರಪ್ರಶಸ್ತಿ ಪಡಯಿತು.

ಮಕ್ಕಳೊಂದಿಗೆ ಅಲ್ಲದೆ ಹಿರಿಯರೊಂದಿಗೂ ಮಗುವಿನಂತೆ ಸ್ಪಂದಿಸುತ್ತಿದ್ದ ಕಾರಂತ ನಾಟಕಗಳ ಹೊಸ ಅಲೆಯನ್ನೇ ಸೃಷ್ಟಿಸಿದ ಬ್ರಹ್ಮ. ಜಾಸ್ತಿ ಮಾತಿಲ್ಲದೆ ನಗುತ್ತಲೆ, ಕೆಲವೊಮ್ಮೆ ಸಂಜೆಯ ಗುಂಗಿನಲ್ಲಿ ಹಾಡಿ ಮನಸು ಬಿಚ್ಚಿ ಮಾತನಾಡುವ ಕಾರಂತರಿಗೆ ಮಿತ್ರ ಸಮೂಹವೇ ಆಸ್ತಿ. ಜಿ.ವಿ. ಅಯ್ಯರ್ ಅವರ ಹಂಸಗೀತೆಯಲ್ಲಿ ಕಾರಂತ-ಪ್ರೇಮಾ ಕಾರಂತರ ಒಡನಾಟ ನನ್ನನ್ನು ಇನ್ನಷ್ಟು ಹತ್ತಿರಕ್ಕೆ ತಂದಿತು. ಮಾತುಗಾರ್ತಿ ಪ್ರೇಮ, ಸ್ನೇಹಮಯಿ. ಅನವಶ್ಯಕ ಮಾತನಾಡದ ಪ್ರೇಮ ಮಾತನಾಡಿದರೆ ತಿಳಿದುಕೊಳ್ಳುವ ವಿಷಯ ಬಹಳ ಇತ್ತು. ಅದೇ ನಗುಮುಖದ ಪ್ರೇಮ ಅಂದಿನ ಅದೇ ವಿಶ್ವಾಸವನ್ನು ಇಂದಿಗೂ ತೋರುತ್ತಿರುವುದು ನನಗೆ ಒದಗಿ ಬಂದ ಭಾಗ್ಯ. ಹಲವಾರು ಪಾರ್ಟಿ, ಪುಸ್ತಕ ಬಿಡುಗಡೆ ಸಮಾರಂಭಗಳಿಗೆ, ಜಸ್ಟ್ ಒಂದು ಫೋನ್ ಕಾಲ್ ಹೋದರೆ ಪ್ರೇಮಾ ಹಾಜರ್. ಬಾಯ್ತುಂಬ ಹೊಗಳುವುದೇ! ಎಂದೂ ಯಾರನ್ನು, ಏನನ್ನು ಯಾಚಿಸಿದ ಪ್ರೇಮಾ ಸಿಂಪ್ಲಿ ಗುಡ್!.

ಕಾರಂತರ ರಂಗ ಪ್ರತಿಷ್ಠಾನದ ಬಹುಮಾನಿತ ಎರಡೂ ನಾಟಕಗಳನ್ನು ನನ್ನ ಸುಂದರ ಪ್ರಕಾಶನಕ್ಕೆ ನೀಡಿ ಸಹಕರಿಸಿದ್ದಾರೆ.

ಅನಿಸಿಕೆಗಳನ್ನು ಬರೆದ ಗೆಳೆಯರಾದ ಶ್ರೀ ಸಿ.ಆರ್. ಸಿಂಹ, ಶ್ರೀ ಹೆಚ್. ಜಿ. ಸೋಮಶೇಖರ ರಾವ್, ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್ ಶ್ರೀ ಎ.ಎಸ್. ಮೂರ್ತಿ ಮತ್ತು ಅಂದವಾಗಿ ಪುಸ್ತಕ ವನ್ನು ಮುದ್ರಿಸಿ ನಮಗೆ ನೀಡಿದ ಶ್ರೀ ಸೀತಾರಾಮ ಹೆಗಡೆಗೆ ನನ್ನ ಕೃತಜ್ಞತೆಗಳು.

- **ಗೌರಿ ಸುಂದರ್**

ಪಾತ್ರಗಳು

ರಚನೆ : ಶಿರಗಾನಹಳ್ಳಿ ಶಾಂತ ನಾಯ್ಕ

ಪಾತ್ರವರ್ಗ

ನಿರೂಪಕ

ಪ್ರೇಕ್ಷಕ

ಖೂನ

ಅಸಣು

ಸುವಾಲಿ

ಹನುಮ

ಲಚಮ

ಗೊರಜ್ಜಿ

ಹೆಂಗಸು

ಗಂಡಸು

ಕೊರಮ

ಕೋಟಿ

ಖರನ

ಆಳು

ಜಮಿನ್ದಾರ

ಆನಂದಶೆಟ್ಟಿ

ಕಿನ್ನರಿ

ದೃಶ್ಯ ಒಂದು

ಸನ್ನಿವೇಶ ೧

(ಬೆಳಕು ಪ್ರಖರಿಸಿದಾಗ, ಒಬ್ಬ ವ್ಯಕ್ತಿ ಇದ್ದಕ್ಕಿದ್ದಂತೆ ಪ್ರವೇಶಿಸುವನು. ಬಂದವನೆ ತೊಟ್ಕೊಂಡಿರೋ ಜುಬ್ಬಾ ಸರಿಮಾಡಿಕೊಂಡು ಅವನ ಮುಂದಿದ್ದ ಮೈಕನ್ನು, ಆನ್ ಆಫ್ ಮಾಡಿ, ಕೈಯ ಬೆರಳುಗಳಿಂದ ಟಿಕ್ ಟಿಕ್ ಬಡಿದು ಟೆಸ್ಟ್ ಮಾಡಿದವನೆ ಮಾತಾಡಲು ಆರಂಭಿಸುವನು)

ನಿರೂಪಕ : (ಪ್ರೇಕ್ಷಕರನ್ನುದ್ದೇಶಿಸಿ) ನೋಡ್ರಪ್ಪ ಇವತ್ತು ನೀವು ನಾಟಕ ನೋಡಾಕ ಬಂದಿರಾ, ಮನಿಯೊಳಗೆ ಕುತ್ಕೊಂಡು ನೂರೆಂಟು ಚಾನಲ್‌ಗಳನ್ನು ನಿಮ್ಮ ಕೈಯೊಳಗಿನ ರಿಮೋಟಬಟನ್‌ಗಳನ್ನು ಒತ್ತಿ, ಅದು ಇದು, ಸುಡುಗಾಡು ಸೊಂಟಿಕೊಂಬು ಅಂತೇಳಿ ಮೂರ್ಖರಪೆಟ್ಟಿಗೆ ಮುಂದ ಕುಂದ್ರೋದ ಬಿಟ್ಟು ಬಂದೀರಿ. ನಂಗೊತ್ತು ಲೇ ನೀ ಯಾವಾನಯ್ಯ ಅದನ್ನ ಕೇಳಾಕ? (ಕೈ ಬೆರಳು ಮಾಡಿ ಏನೋ ಗುಸುಗುಸು ಮಾತಾಡ್ತಿರೋರ ಕಡೀಗ ತೋರಿಸಿ) ಅಂತ ಅಂತಿದ್ದಿರಾ. ಕ್ಲಬ್ಬಿಗ ಹೋಗಿ ಭಜನಿ ಮಾಡೋರು (ಇಸ್ಪೀಟ ಆಟದ ಅಣಕ ಮಾಡುತ್ತ) ಇನ್ನ ಪಾರ್ಕಿಗೆ (ಹಲ್ಲು ಗಿಂಜುತ್ತಾ) ಅವರು ಬರ್ತಾರಂತ ಇವರು, ಇವರು ಬರ್ತಾರಂತ ಅವರು ಅದೇ ದೇವರ ಹೆಸರು ಹೇಳ್ಕೊಂಡು ಕೈ ಮುಗಿಯೋಕೆ , ಹೂ...... ಹೋಗೋದನ್ನ ಬಿಟ್ಟು ಬಂದೀರಿ ಪಾಪ.....

ಪ್ರೇಕ್ಷಕ : ಎ, ಗಡಾನೆ ಸುರುಹಚ್ಕೊಳ್ಳಯ್ಯ ನಿನ್ನ ನಾಟಕ, ನಿಂದೇನು ದೊಡ್ಡ ರಗಳಿ ಹಚ್ಚಿಯಾ

ನಿರೂಪಕ : ಆಯ್ತು ಮಾರಾಯ, ಅಷ್ಟ್ಯಾಕ ಗಡಬಡ ಮಾಡ್ತೀಯ, ಅಲ್ಲಾ, (ಜನರ ಕಡೀಗ ಹೋಗಿ) ಎಷ್ಟು ಕಷ್ಟ ಪಟ್ಟು ನಾಟಕದ ತಾಲೀಮು ನಡೆಸಿ, ನಾಟಕ ಕಲ್ತು ಬಂದೀವಿ ನೀವು ಹಿಂಗ ಗಲಾಟೆ ಮಾಡಿದ್ರ ಹ್ಯಾಗಂತೀನಿ

ಪ್ರೇಕ್ಷಕ : ಸುರುಮಾಡ್ರಿ.......

ನಿರೂಪಕ : ಆಯ್ತು ಮಾರಾಯ, ನಿನ್ನ ಮಾತನಂಗೇಯ ನಾಟ್ಕ ಸುರು ಹಚ್ಕೊಂತೀವಿ. ಆದ್ರ ಒಂದು ಕಂಡೀಷನ್ನು. ನಾಟಕ ನೋಡಾಕ ಬಂದಿರೋ ನೀವುಗಳು (ಸ್ಟೇಜಿನ ಎಡಗಡೆ ನಿಂತಿದ್ದ ನಾಟಕಕಾರರನ್ನ ನೋಡ್ತಾ) ಈ ನಾಟಕ ಬರೆದಿರೋ ನಾಟಕಕಾರರನ್ನ ನೋಡ್ಲೇಬೇಕು. (ಬಲಕ್ಕೆ ತಿರುಗಿ ಸೈಡ್‌ವಿಂಗ್‌ಗೆ ಹೋಗಿ) ನಮ್ಮ ನಿರ್ದೇಶಕ ಪಾಪ, ಸೀನುಗಳ ನಡುವೆ ತಲಿಕೆಡಿಸಿಕೊಂಡು ಚಾದಮ್ಯಾಲ ಚಹಾ ಕುಡಿದು ದಾಡಿತಗಿಯಾಕೂ ಟೈಮಿಲ್ದಕ್ಕ ಆಲದಮರಕ್ಕ ಬಿಳಲು ಬಂದಂಗ ಬಂದಿರೋವನ್ನು ಬಿಟ್ಕೊಂಡು, ಆದ್ಯಾವಾಗ (ಮೂಗುಮುಚ್ಚಿ) ತೊಳದಿದ್ನೋ, ಆಯಪ್ಪ ಜುಬ್ಬಾ, ಹೂಂ ನಮ್ಮ ಪ್ರೊಡ್ಯೂಸರ್ ಸಾಹೇಬರು ಪಾಪ ಅವರೂ ಬಂದಾರ ಇವರ ಪರಿಚಯ ಆಗಲಿ ಆಟು.

ನಿರೂಪಕ : ಮಾನ್ಯರೇ, ಹ್ಯಾಗೂ ನಾಟಕಕಾರ್ರು ಬಂದಿದ್ದಾರೆ. ಅವರು ಯಾಕ ಬರೆದರು ಅಂತ ಕೇಳಿಬಿಡೋನು.(ಆತನ ಪಕ್ಕ ಹೋಗಿ) ಅಣ್ಣೋರು, ತಾವು ಈ ನಾಟಕವನ್ನು ಯಾಕ ಬರದಿರಿ.

ನಾಟಕಕಾರ : ಹೌದಲ್ಲ, (ಅವನಿಗೆ ಪ್ರಶ್ನೆ ಮಾಡಿ) ನಾನು ಯಾಕ ಬರದೆ? ಹಾಂ, ನೆಪ್ಪಾತು.(ತತ್ವಜ್ಞಾನಿಯಂತೆ) ಜೀವನಕ್ಕೂ ಸಮಾಜಕ್ಕೂ ಬೆಸೆದು ಕೊಂಡಿರುವ ನಂಟಿನ ಕಗ್ಗಂಟನ್ನು ಬಿಚ್ಚಿಡಲು (ನಿರೂಪಕ ಹಣೆ ಹಣೆ ಬಡಿಕೊಳ್ಳುವನು) ಅನ್ಯಾಯವನ್ನು ನ್ಯಾಯಯುತವಾಗಿಯೇ ಪ್ರತಿಭಟಿಸಿ ನ್ಯಾಯ ಅನ್ಯಾಯವನ್ನು ಸರಿದೂಗಿಸಲು.(ಕರ್ಮ) ಮನುಷ್ಯ ಭೂಮಿ ಮೇಲೆ ಹುಟ್ಟಿದೊಡನೆಯೇ ನೂರಾರು ಸಮಸ್ಯೆಗಳ ಸುಳಿಯೊಳಗೆ ಸಿಲುಕಿ ಹಾಕಿಕೊಳ್ಳುತ್ತಾನೆ. ಅವುಗಳಿಂದ ಹ್ಯಾಂಗ ಬಿಡಿಸಿಕೋಬೇಕು ಅನ್ನೋದು ಅವನಿಗೆ ತಿಳಿಯುವುದಿಲ್ಲ. ಅಜ್ಞಾನ, ಅಸಹಾಯಕತೆ, ದಾರಿದ್ರ್ಯ ಒಂದ- ಎರಡ, ಸಾವಿರಾರು ಸಮಸ್ಯೆಗಳ ನಡುವೆ ನರಳುತ್ತಿರುವ ಈ ಬದುಕು....

ನಿರೂಪಕ : (ನಡುವೆ ಬಾಯಿ ಹಾಕಿದವನೆ) ರೀ.... ನಾಟಕಕಾರರೆ, ನಿಲ್ಲಿಸಿ ಬಿಡ್ರ ಹೋಗಲಿ. ನೀವು ನಾಟಕಕಾರರಾಗೋದಕ್ಕಿಂತ ರಾಜಕಾರಣಿಗಳಾಗಿದ್ರೆ ಪಾಡಿತ್ತು.

ನಾಟಕಕಾರ: (ಹುಡುಕಿ ಅಲ್ಲಿ ಇಲ್ಲಿ ನೀರು ತಂದು ಕುಡಿದು)ಇವತ್ತು ಏನಾಗಿದೆ ಅಂತಂದ್ರ, ನಮ್ಮ ಪರಿಸ್ಥಿತಿ, ಹೊಟ್ಟ ಹಸದವರಿಗೆ ಉಣ್ಣಾಕ ಕೂಳಿಲ್ಲಾ, ಮತ್ತೊಂದ ಕಡೀಗ ಮಂದಿ ತಿಂದುಂಡು ಹೆಚ್ಚಾಗಿ ಕಸದ ಡಬ್ಬಕ

ಹಾಕ್ತಾರ ಪರಿಸ್ಥಿತಿಯೊಳಗೆ ಎಲ್ಲೋ ಹಳಿತಪ್ಪತಿ ಅದನ್ನ ನಾವು ಅಸಮಾನತೆ ಅಂತೀವಿ. ಹಳ್ಳಿ ಹೆಂಗಸರು ಕೈಯಾಗ ರೊಟ್ಟಿ ಹಸಿಖಾರದ ಚಟ್ನಿ ಹಾಕ್ಕೊಂಡು ಮೈಲಿಗಟ್ಟಲೆ ತಿನ್ಕೊಂತ. ಹೊಕ್ಕಾರ ನಡಕ್ಕ ನೀರ ಕುಡಿಯಾಕ ಸಿಗೋದಿಲ್ಲ.

ನಿರೂಪಕ : (ಸ್ವಗತ) ಇಂವ ನಮ್ಮ ಪ್ರೇಕ್ಷಕರನ್ನು ಮನಿಗೋಡಿಸೋ ಪ್ರತಿಜ್ಞೆ ಮಾಡಿರೋ ಹಂಗ ಕಾಣತೈತಿ, (ಅವನ ಸಮೀಪ ಬಂದು) ಮುಗಸಬಿಡ್ರಿ, ಇಲ್ಲಾಂದ್ರ ಮಂದಿ ಕಲ್ಲ ಹಚ್ಚತಾರನೋಡ್ರಿ.

ನಾಟಕಕಾರ : ಅವಕ್ಕೆಲ್ಲಾ ತಲೆಕೆಡಿಸೊಬ್ಯಾಡಪ್ಪ, ನೀ ಹೋಗಿ ನಿಲ್ಲು. (ಮತ್ತೆ ತನ್ನ ಹಳೆ ಧಾಟಿಯೊಳಗ) ಇದೇ ಮೊದಲ ಸಾರಿ ಸ್ಟೇಜು ಸಿಕ್ಕಿದ್ದು. ಅಂತಾದ್ರಾಗ ನೀ ಹಿಂಗ ರಾಗ ಏಳದ್ರ ಹ್ಯಾಂಗಂತೀನಿ. ನೀ ಏನು ಅಂಜೋದ ಬ್ಯಾಡ. ನಾ ಅಲ ನೋಡ್ಕೋಂತೀನಿ ಸುಮ್ಕಿರು. ಯಾಕಂತಂದ್ರ ಈ ನಾಡಿನೊಳಗಿರೊ ನನ್ನ ಮಂದಿ ಬದುಕು ಇಲ್ಲ ಕುಂತಾರಲ್ಲಾ ಈ ಮಂದಿಗ ತಿಳಿಬೇಕು. ಒಂದಹೊತ್ತಿನ ಊಟಕ್ಕೆ ಪರದಾಡೊ ಮಂದಿ, ದುಡಿಯಾಕ ಹೋಗೋ ಹರೆಯದ ಹುಡುಗಿಯರನ್ನ ಬಳಸಿಕೊಳ್ಳೋ ಬೇವರ್ಸಿ ಭೂಮಾಲೀಕರು ಬಡವರ ಬದುಕಿನ ಖಳನಾಯಕರು. ಅವರನ್ನ......

ನಿರೂಪಕ : ಛೇ, ನೀವು ಬಾಯಿ ಮಾತಿಂದ ಹೋಗೋರಲ್ಲಾಂತ ಕಾಣುತ್ತೆ. ನಿಮ್ಮ ಭಾಷಣ ಯಾರಿಗ ಬೇಕು? ದರಿದ್ರ ರಾಜಕಾರಣಿಗಳು ಸುಳ್ಳು ಆಶ್ವಾಸನೆ ಕೊಡೋ ಭಾಷಣ ಮಾಡಿ ನಂಬಿಸಿ ಬೋರ್ ಹೊಡಿಸಿ ಬಿಟ್ಟಾರ ಮಂದಿಯನ್ನ.

ನಾಟಕಕಾರ : ಅದನ್ನೇ ಹೇಳ್ತಿರೋದು ಹೇಳಕಿಮಾತ ಕೇಳಬ್ಯಾಡ್ರಪ್ಪ ಅಂತ.

ನಿರೂಪಕ : ಆಮ್ಯಾಲ ಹೇಳಿರಂತ ನಾನು ವ್ಯವಸ್ಥೆ ಮಾಡ್ತಿನಿ ನಡಿರಿ. (ಕೈ ಹಿಡಿದು ಎಳೆದು ಮುಂದೆ ಬಿಟ್ಟ ದೂಡುತ್ತಾ ಹೊರಡಿಸಿಕೊಂಡೆ ಪಕ್ಕಕ್ಕೆ ತರುವನು.) ದೊಡ್ಡ ಅನಾಹುತ ತಪ್ಪತು. ಅಲ್ಲಾ, ಕೆಲಮಂದಿ ಕೈಯಾಗ ನಾಕಾಣೆಕೊಟ್ಟು ಸುರುಮಾಡಿಸಿದ್ರ ಎಂಟಾಣೆ ಕೊಟ್ಟ ನಿಲ್ಲಿಸಬೇಕು......ಪ್ರೇಕ್ಷಕ ಬಂಧುಗಳೆ ಈಗ ನೀವು ನಿರಾತಂಕದಿಂದ ನಾಟಕ ನೋಡಬಹುದು. (ನಮಸ್ಕರಿಸಿ ಹೊರಡುವನು)

ಹಾಡು : ಯಾರಿಲ್ಲವೋ , ನಮಗ್ಯಾರಿಲ್ಲವಯ್ಯ,
ಯಾರಿಗೆ ಯಾರಿಲ್ಲ ಎರವಿನ ಸಂಸಾರ
ನೀರ ಮ್ಯಾಲಿನ ಗುಳ್ಳೆ ನಿಜವಲ್ಲೊ
ಹರಿಯೇ ಯಾರಿಲ್ಲವೋ ಯಾರಿಲ್ಲವೋ

(ಹಾಡು ಮುಗಿದಾಗ, ರಂಗದ ಮೇಲೆ ಮರ, ಮರದ ಕೆಳಗಡೆ ಎರಡು ಕಲ್ಲುಗಳು, ಒಬ್ಬ ವ್ಯಕ್ತಿ, ಜೀವನ ಬ್ಯಾಸರಾಗಿ ಸಾಯಾಕ ಹವಣಿಸುತ್ತಿದ್ದಾನೆ, ಮತ್ತೊಬ್ಬ ಅನುಮಾನದಿಂದಲೇ ಪ್ರವೇಶಿಸುತ್ತಾನೆ.)

ಖೂನ : (ನಗುತ್ತಾ) ಹೋಗೊ ಮಾರಾಯ, ನಿನ್ನ ಮಂದ ದೆವ್ವ ನಿಂತಂಗ ನಿಂತೀನಿ ಗಡದ್ದಾಗಿ, ಗುರ್ತು ಹಿಡಿಯಾಕ ಆಗವಲ್ದು ಅಂದ್ರ ಇನ್ನೇನ ಹೇಳ್ಲಿ.

ಅಸಣು : (ಹೆದರುತ್ತಾ) ಹಾಂ, ದೆವ್ವಾನ

ಖೂನ : ಏ....ಮನುಷ್ಯ ನೀ ಏನು ಹೆದ್ರಾಕ ಹೋಗಬ್ಯಾಡ

ಅಸಣು : (ಸ್ವಗತ) ಇವ ನನ್ನ ಮನುಷ್ಯ ಅಂತಾನ, ಹಂಗಾರ ಇವ್ನೇನು?

ಖೂನ : ನಾನು ನಿನ್ನ ಹಂಗ ಸಾಯಾಕ ಬಂದೋನು.

ಅಸಣು : (ಧೈರ್ಯದಿಂದ) ಹೌದಾ, ಹಂಗಾರ ಯಾಕ ಸಾಯಲಿಲ್ಲಾ.

ಖೂನ : ಸಾಯೋದು ಸುಲಭ ಆಗಿದ್ರ, ನಾ ಒಂದ ಇಪ್ಪತ್ತ ಸರ್ತಿ ಹೊಕ್ಕಿದ್ದೆ. ಸಾಯೋದು ಬಹಳ ಕಷ್ಟ.

ಅಸಣು : ಹಂಗಂತಿಯ

ಖೂನ : ಅನ್ನೋದ ಏನ ಬಂತು. ನೋಡಿಲ್ಲಿ.(ಅವನ ಕೈಯೊಳಗಿದ್ದ ಒಂದು ಹಗ್ಗದ ತುಂಡನ್ನ ತೋರಿಸುವನು ಅದು ಮರಕ್ಕೂ ಸಾಲದು ಅವನ ಕುತಗಿಗೂ ಸಾಲದಂತಹದ್ದು)

ಅಸಣು : (ಗೊಳ್ಳಂತ ನಗುವನು) ಅದಕ್ಕೆ ನಿನಗ ಸಾಯಾಕ ಹೆದರಿಕೆ ಆಗಿರೋದು. ಸಾಯಾಕ ದೊಡ್ಡ ಹಗ್ಗ ಬೇಕು. ಮನಸು ಗಟ್ಟಿ ಮಾಡ್ಕೊಂಡು ಒಂದೇ ಸಲ ಕುತಗೀಗ ಹಗ್ಗ ಬಿಕ್ಕೊಂಡು ಇಳಿಬಿದ್ದ ಬಿಡಾಕು.

ಖೂನ : (ಆಶ್ಚರ್ಯದಿಂದ) ಹೌದಾ, ಹಂಗೆ ಖಾಲಿ ಪುಕ್ಕಟ್ಟೆ ಹೇಳ್ತಾ ಹೋಗಬ್ಯಾಡೇ, ಮಂದಿ ಸಾಯೋ ತಂತ್ರ ಕಲ್ತಾರ ಮತ್ತ.

ಅಸಣು : ಹೋಗ್ಲಿಬಿಡು, ಈಗ ಹೇಳು ನೀ ಯಾಕ ಸಾಯಾಕ ಬಂದಿದ್ದೆ.

ಖೂನ : (ಬಹಳ ಹೊತ್ತಿನವರಿಗ ಸುಮ್ನೆ ನಿಲ್ಲುವನು, ಏನೋ ವಿಚಾರ ಮಾಡಿಕೊಂಡು ಓಡಿ ಬಂದವನೆ) ಅದೊಂದು ದೊಡ್ಡ ಕತಿ ಐತಿ. ಈಗಂತು ಇಬ್ಬರಾದ್ವಿ ಅಮ್ಯಾಲ ಹೇಳ್ತಿನಂತ ಬಿಡು.

ಅಸಣು : ಸರಿ, ನೀ ಆಕಡೀಗ ಹೋಗು, ನಾನು ಒಂದು ಸಾರಿ ಸಾಯೋ ಪ್ರಯತ್ನ ಮಾಡ್ತೀನಿ. (ಹಗ್ಗ ತಗೊಂಡು ಮರದ ತುದಿಗೆ ಬೀಸುವನು)

ಹಾಡು : ಯಾರಿಲ್ಲವೊ ನಮಗ್ಯಾರಿಲ್ಲವಯ್ಯೋ

ಯಾರಿಗೇ ಯಾರಿಲ್ಲ ಎರವಿನೇ ಸಂಸಾರೇ

ಖೂನ : ಏ, ನಿಲ್ಲು ಮಾರಾಯ, ಇಷ್ಟೇನು ಅವಸರ ಸಾಯಕ. ಸಾಯೋನು ಯಾವಾಗಾರು ಸಾಯಬಹುದು. ಯಾಕ ಸಾಯಕಹತ್ತಿ ಅನ್ನೋದನ್ನ ಹೇಳಿ ತಣ್ಣಗ ಸತ್ತ ಹೋಗು. ನಿನ್ನ ಆತ್ಮಕ ಶಾಂತಿ ಸಿಗತೈತಿ. (ಅವನ್ನ ಹಿಡ್ಕೊಂಡು ಬರುವನು)

[redacted] : ಹೋಗ್ಲಿಬಿಡು, ಯಾಕ ಸಾಯ್ತಿ ಅಂತೇಳಿ ಹೇಳದಿದ್ರೂ ಪರವಾಯಿಲ್ಲ. ಈ ಮರ ಯಾವುದು ಅಂತ ಹೇಳಿಬಿಡು.(ಗಂಭೀರವಾಗಿ)

ಅಸಣು : (ವಿಚಾರ ಮಾಡದೆ) ಸಾಯೋಮರ.

ಖೂನ : ಥು, ನಿನ್ನ,ಯಾಕ ಹಂಗ ಸುಳ್ಳು ಹೇಳ್ತಿ, ಗೊತ್ತಿಲ್ಲಾಂದ್ರೆ ಗೊತ್ತಿಲ್ಲಾ ಅಂದ ಬಿಡು. ನ್ನನ ಜೀವನದಾಗೇ ಇವತ್ತಿನಮಟ, ನೀ ಹೇಳಿದ ಹೆಸರನ್ನ ಕೇಳೆ ಇಲ್ಲಬಿಡು.

ಅಸಣು : (ಮರವನ್ನ ಕುತೂಹಲದಿಂದ ನೋಡಿದ, ಯಾವಮರ ಅಂತ ಗೊತ್ತಾಗದೇ ಒಂದು ಸುತ್ತು ಹೊಡೆಯುವನು)

ಖೂನ : (ಸದ್ದು ಮಾಡದೆ ಯಾವದೋ ಧ್ವನಿ ಪರಿಚಯ ಮಾಡೋಹಂಗೆ ಸೂಕ್ಷ್ಮದಿಂದ ಕೇಳುವನು) ಅದನ್ನೇನು ನೋಡ್ತಿ ಬಾ ಇಲ್ಲಿ.

ಅಸಣು : (ಅವನ ಕಡೀಗ ನೋಡದೆ, ಮರವನ್ನ ದಿಟ್ಟಿಸತೊಡಗಿದ) ಜಾಲಿಮರ, ಹೌದು ಬಳ್ಳಾರಿ ಜಾಲಿ ಮರಾನೋ ಮಾರಾಯ. ಈಗ ಕಂಡಹಿಡಿದೇ ನೋಡು.

ಖೂನ : ಶ್....ಶ್...(ಸುಮ್ಮನಿರುವಂತೆ ಸೂಚಿಸುತ್ತಾ) ಯಾರಿರಬಹುದು?

ಅಸಣು : (ಅವನಿಗೂ ಕುತೂಹಲ ಹುಟ್ಟಿದ್ದೇ, ಅವನ ಹಿಂದೆ ಹೋಗಿ ಅವಿತುನಿಂತು) ಯಾರೋ ಅಪರಿಚಿತರು ಬರ್ತಿರೋದನ್ನ ಗಮನಿಸಿದಂತೆ ಸಂಜ್ಞೆ ಮಾಡುವನು. ಹೆಂಗಸು ಇತ್ಲಾಗ ಯಾಕ ಬರಾಕ ಹತ್ಯಾಳ, ಅಂತ.

ಖೂನ : ಇನ್ಯಾಕ ಸಾಯಾಕ.

ಅಸಣು : ಏನಂದೆ, (ಅವನ ಮಾರಿ ನೋಡಿ) ಅಕೀಗ ಏನಾಗಿರಬೇಕು ಸಾಯೋ ಅಂತಹದ್ದು.

ಖೂನ : ನಿನಗೇನ್ನಾಗಿತ್ತು? ಆಕೀಗೂ ಅಂತದ್ದೆ ಆಗಿರೋದು ಬಾಯಿಮುಚ್ಚಿ ಆಟು, ಇನ್ನೇನ್ಮಾಡ್ತಾಳಂತ ನೋಡಾನು. ~~ಅಸಣು~~ (ಸಿಟ್ಟಿನಿಂದ ಚೀರುವನು) ಏ, ನಂದು ಕೇಳಬೇಡಾ ನೀನು.

ಖೂನ : ಹಂಗಾರ ಬಾಯಿ ಮುಚ್ಕೊಂಡು, ಇನ್ನಷ್ಟು ಮರದ ಹಿಂದಕ ನಡಿ. ನೋಡಾನು. ಆಕಿ ಸಾಯಿತಾಳೊ ಇಲ್ಲಾ ಮತ್ತೇನಾರು ಮಾಡ್ತಾಳಂತ.

ಸನ್ನಿವೇಶ -೨

(ಇಬ್ಬರು ಮರದೇ ಹಿಂದಕ್ಕೆ ಹೋಗಿ ಅವಿತುಕೊಂಡು ನಿಲ್ಲುವರು, ಹರಕು ಸೀರೆ, ಹರಕು ರವಿಕೆ, ಕೆದರಿದ ಕೂದ್ಲು ಬಿಟ್ಕೊಂಡು ಮುವತ್ತರ ಹರೆಯದ ಹೆಂಗಸೊಬ್ಬಳು ಅತ್ಕೊಂತ ಯಾರನ್ನೋ ಬಯ್ಕೊಂತ ಪ್ರವೇಶಿಸುವಳು)

ಸುವಾಲಿ : (ಬಡವರು ಸತ್ತರೆ ಸುಡಾಕ ಸೌದಿಲ್ಲಾ.

ಹಾಡು ಒಡಲ ಬೆಂಕೀಲಿ ಹೆಣ ಬೆಂದೋ ದೇವರೇ...

ಬಡವರಿಗೆ ಸಾವ ಗೊಡಬ್ಯಾಡೇ.)..(ಹಾಡ ಮುಗದಿದ್ವೆ)

ಅದರ ಒಸಡಗಲಿ, ಕದಕಟ್ಟಿ, (ಲಟಗಿ ಮುರಿಯುತ್ತ) ಬಂದದಾರಿಗೆ ಹೋಗದಂಗಾಗ್ಲಿ (ಒಂದ ಬಗಸಿ ಮಣ್ಣು ತಗೊಂಡೇ ತೂರಿ) ಲೇ ಲೌಡಿ ನೀ ಉದ್ದಾರ ಆಗಂಗಿಲೇ, ಉದ್ದಾರ ಆಗಂಗಿಲ್ಲಾ ಹೂಂ.. ... ಹೂಂ...(ಅಳುವನು ಎಡಗೈಯಿಂದ ಸಿಂಬಳ ಸೀಟಿ ಬಿಸಾಕಿ ಹರದ ಸೀರಗ ಒರೆಸಿ.) ಸಾಯೋದಂತ ಯೋಚ್ನೇ ಮಾಡೇ ಮನಿಮಂದಿ ಬಿಟ್ಟೆ ಈಗ. ಇಲ್ಲಾ ನಾ ಸಾಯಾಕ ಬೇಕು.(ತಲೇ ಕೆರಮುಕೊಂಡು ಕೈಗ ಏನೋ ಸಿಕ್ಕಿದನ್ನ ಉಗರಮೇಲಿಟ್ಟು ಹೊಡೆದು)ಹೂಂ, ಸಿಗ್ತು ಹಗ್ಗ, ನೇಣಬಿಕ್ಕೊಂಡು ಒಂದೇ ಎಟಿಗ ಬಿದ್ರ ಆತು ಪ್ರಾಣಪಕ್ಷಿ ಹಾರಿ ಹೊಕೈತಿ. (ಹಗ್ಗದ ತುದಿ

ಹಿಡಿದು ಜಗ್ಗುವಳು ಮೈಯಾನ ಕಸುಕಿತ್ತು ಎಳೆಯುವಳು) ಇದರ ಮನಿ ಹಾಳಾಗ, ಎಲ್ಲ ಸಿಕ್ಕೊಂಡೈತೇ ನಮ್ಮವ್ವ ಹೂ...

ಇಬ್ಬರು : (ಒಂದೇ ಸಾರಿ) ಯಾರದು?

ಸುವಾಲಿ : (ಒಂದೇ ಹೊಡೆತಕ್ಕೇ, ನೆಲಬಿಟ್ಟೇ ಮ್ಯಾಲ ಜಿಗಿದಾಕಿನ) ಸತ್ತೆಯಪ್ಪಾ, ಏನೋಐತಿ. ಈ ಹಾಳ ಜಾಗದಾಗ (ಓಡಾಕ ಹವಣಿಸುವಳು)

ಖೂನ : ನೀನು.... ಸಾಯಾಕ ಬಂದಿ ಹೌದೋ ಅಲ, (ಚೆಂಡ ಅಳಿಗಾಡಿಸುತ್ತಾ ವ್ಯಂಗದಿಂದ ಕೇಳುವನು)

ಸುವಾಲಿ : (ಅವನ್ನ ಕೆಳಗಿನಿಂದ ಮ್ಯಾಲಿನ ತನಕ ಅನುಮಾನದಿಂದ ನೋಡಿ ಹೆದರಿ)

ನೀ.......ನು......ಮತ್ತ ಅ....ವನು.

ಖೂನ : (ಅಸಣು ಕಡೀಗ ನೋಡ್ತ) ನಾವು....

ಅಸಣು : (ಅವನ ಮಾತು ಮುಗಿಸಾಕ ಮದ್ಲ ತತ್ವಜ್ಞಾನಿಯಂತೆ) ನೋಡು ಹುಟ್ಟಿಬಂದ ಮ್ಯಾಲೆ ಸಾಯಬಾರ್ದು ಸಾಯೋದು ಮುಂದ ಐತೆ ಐತಲ್ಲಾ.(ಆಕಿ ಹತ್ರ ಬಂದು ಕೀನ ನೋಡಿ) ಅಲ್ಲಾ ಸಾಯೇ ಅಂತದ್ದು ಏನಾಗೈತೇ ನಿನಗೆ.

ಖೂನ : (ಸ್ವಗತ)ಅಲ್ಲಾ ,ಬಡ್ಡೀ ಮಗ ಈಗ ಸ್ವಲ್ಪ ಹೊತ್ತಿನ ಮುಂಚೆ ಹಗ್ಗ ಕುತ್ತಿಗ ಬಿಕ್ಕೊಂಡು ಸಾಯಾಕ ಹೊಂಟಿದ್ದೋನು. ಹಿಂಗೇ ಮಾತಾಡಕ ಹತ್ಯನಲ್ಲ. ಈ ಮಂದಿಹಂಗ, ತಮ್ಮದ ತಮಗ ಮುಟ್ಟತ್ತಿರಂಗಿಲ್ಲ ಮಂದೀದ ನೋಡಾಕ ಹೊಕ್ಕಾರ.ಏ, ಮುಚ್ಚೋ ಬಾಯಿ, ನೀ ಸಾಯಾಕ ಬಂದಿದ್ದಿಲ್ಲಾ ಈಗ ಒಂದತಾಸಿನ ಮುಂಚೆ.

ಅಸಣು : ಅದು ಆವಾಗ

ಖೂನ : ಮತ್ತ ಈಗ.

ಅಸಣು : (ಆಕಿ ಕಡೀಗ ನೋಡ್ತಾ) ಜೀವನಾನೆ ಕಾಣದ ನನಗೆ ಬದಕಬೇಕು ನಿಸಾಕ ಹತ್ಯತಿ.

ಖೂನ : (ಅವನಕಡೀಗ ಒಮ್ಮೆ ಆಕಿ ಕಡೀಗ ಇನ್ನೊಮ್ಮ ನೋಡಿದವನೆ ಆಕಿ ಪಕ್ಕದಾಗ ಹೋಗಿ ನಿಂತ್ಕೊಂಡು) ನೀನು, ಬದುಕ್ತಿಯಾ....

ಸುವಾಲಿ : (ಏನನ್ನ ನಿರ್ಧಾರ ಮಾಡಿರದ ಆಕಿ ಒಮ್ಮೆ ಹೂಂ, ಅಂತೇಳಿ ಹೇಳಿ ಮತ್ತೊಮ್ಮೆ ಊ ಹೂಂ ಎನ್ನುವಳು) ನಾನು, ಯೋಚ್ನೆ ಮಾಡ್ತೀನಿ.

ಖೂನ : (ನಕ್ಕು) ಹೆದರಿದ್ರಪ್ಪೊ, ಇಬ್ಬರೂನು ಹೆದರಿದ್ರು, ನಾ ಹೇಳ್ಲಿಲ್ಲಾ. (ಅವನ ಹತ್ರ ಹೋಗಿ) ಸಾಯೋದು ಸುಲಭ ಅಲ್ಲಾ ಅಂತ.

ಅಸಣು : (ತಡಿಯಾಕ ಆಗದೆ) ಮುಚ್ಕೊಬಾಯಿ. ನಮ್ಮನ್ನ ಸಾಯಿ ಅನ್ನಾಕ ನೀ ಯಾರು ಸಾಯೋದು ಬಿಡೋದು ನಮ್ಮ ಇಷ್ಟ. ಯಾಕ್ಷಣದಾಗ ಈ ಭೂಮಿಗೇ ಬಂದಿವ್ರೋ ಅವತ್ತೆ ಈ ಸ್ಥಿತಿಯೊಳಗೆ ಸಿಕ್ಕೊಂಡು ಸತ್ತ ಹೋಗೀವಿ. ಸಾಯಾಕ ನಮ್ಮ ತಾವ ಉಳ್ಕೊಂಡಿರೋದಾದ್ರೇನು? ಬರಿ, ಈ ಜೀವಮಾತ್ರ (ಅವನ ಹತ್ರ ಹೋಗಿ) ಬಂದ ಬಿಟ್ಟ ಹೇಳಾಕ.

ಸುವಾಲಿ : (ಸ್ವಲ್ಪ ಧೈರ್ಯದ ತಂದ್ಕೊಂಡು) ಅಲ್ಲಾ ನಾವು ಮೂವರು, ಸಾಯೋ ಉದ್ದೇಶದಿಂದಲೇ ಬಂದರು. ಯಾಕ ನಾವು ಹಿಂಗೇ ಹಿಂಜರಿಯಾಕೇ ಹತ್ತೀವಿ.

ಅಸಣು : (ಖೂನನ್ನೆ ದಿಟ್ಟಿಸಿ ನೋಡ್ತಾ) ಒಂದ ಸಲ ಅಂದ್ಕೊಂಡಿದ್ದನ್ನ ಅದೇ ಹುರುಪಿನ್ಯಾಗ ಮಾಡಿ ಮಗಿಸಿಬಿಡಬೇಕು.

ಖೂನ : (ಗೇಲಿ ಮಾಡುವಂತೆ) ನಿನಗ ಬ್ಯಾಡ ಅಂದ ಮಗ ಯಾರು?

ಅಸಣು : (ಓಡಿ ಹೋದವನೆ, ಅವರಟ್ಟಿ ಹಿಡದು) ನೀ ಅದಿಯಲ್ಲಾ, ಹೇಡಿ ಮನುಷ್ಯ. ನೀನು ಸಾಯಲಿಲ್ಲಾ ನನ್ನೂ ಬಿಡಲಿಲ್ಲಾ.

ಖೂನ : ನಾ ಏನು ಸಾಯಿಬೇಡಾ ಅಂತ ನಿನ್ನ ಬಿಡಿಸಿದೆ. ನೀನೆ ಹೇಡಿಹಂಗ ಹಗ್ಗ ಬಿಸಾಕೋದು ಎಳೆಯೋದೇ ಮಾಡ್ತಿದ್ದೆ. ಸಾಯೋರು ಹಂಗ ಮಾಡೋದಿಲ್ಲಾ.

ಅಸಣು : ನಾನು ಸಾಯಕಂತೇಳಿ ಬಂದಿದ್ದೆ.

ಸುವಾಲಿ : (ಅವರಿಬ್ಬರ ನಡಕ ಬಂದು ಬಿಡಿಸಿ ದೂರ ಸರಿಸಿ) ಯಾಕ ಹಿಂಗೇ ಕಚ್ಚಾಡಾಕ ಹತ್ತೀರಿ. ನನಮಾತ ಕೇಳ್ರಿ. ನಾನು ನೀನು (ಖೂನನ ಸಮೀಪೇ ಹೋಗಿ)ಮತ್ತ ನೀನು ಒಂದೇ ಕೆಲ್ಸಕ ಬಂದೋರು. ಇಡೀ ಜೀವನದಾಗೇ ಹಿಂಗೆ ಗುದ್ದಾಡಿ ಗುದ್ದಾಡಿ ಬ್ಯಾಸರಾಗಿ ಇಲ್ಲಿ ಬಂದೀವಿ, ಇಲ್ಲೂ ಗುದ್ದಾಡೋದು ಪಾಡಲ್ಲಾ ಅಂತ ನನಗ ಅನಿಸಾಕ ಹತ್ಯತಿ(ವಯಸ್ಸಿನಲ್ಲಿ ಸಣ್ಣವನಿರೋ ೯ ಸಣು ಹತ್ರ ಹೋಗಿ) ನೀ ಏನಂತಿ.

ಖೂನ : ಬಂದ ತಕ್ಷಣ ಅಂದಕೊಂಡಿದ್ದೆ. ಆದ್ರ ಸಾಯೋದ ಕೊನೆ ಅಂತ ಅನಿಸಲಿಲ್ಲ. ಯೋಚನೆ ಮಾಡಿದೆ. ನಿಚ್ಚಳ ಬೆಳಕು ಕಂಡಂಗಾತು.

ನನ್ನ ನಿಶ್ಚಯವನ್ನ ಕೈಬಿಟ್ಟೆ. (ಇಬ್ಬರ ಕಡೀಗ ನೋಡಿ) ಇಷ್ಟೊತ್ತಿನಿಂದ ಸಾವು ಅನ್ನೋ ಶಬ್ದವನ್ನ ನೀವಿಬ್ಬರೂ ವರ್ಣಿಸುತ್ತಿರೋದು ಕೇಳಿ ತಲಿ ಚಿಟ್ಟ ಆಗ್ಯೆತಿ.(ಮತ್ತೊಮ್ಮೆ ನೋಡಿ) ನೀವು. ಯಾಕ ಬದುಕಬಾರದು?

ಸುವಾಲಿ : (ಸಾಯೋ ನಿರ್ಧಾರ ಮಾಡಿದವಳಂತೇ ಖೂನನ ಕಡೀಗ ಬೆನ್ನ ಮಾಡಿ ನಿಂತು) ನನ್ನ ಕತಿ ನೀ ಕೇಳಿದ್ರ ಹಿಂಗ ಅನ್ನೊದಿಲ್ಲಾ.

(ಇಬ್ಬರು ಆಕಿ ಕಡೀಗ ನೋಡುವರು)

ಅಸಣು : (ಗಂಭೀರವಾಗಿ) ಅಂದ್ರ....... ನೀ ನನಗಿಂತೇ ಹೀನಾಯವಾದ ಕೆಳಗಿನ ಬದುಕನ್ನ ಬದುಕಿರೋಳು ಅನ್ನು.

ಖೂನ : (ಅಸಣು ನನ್ನ ಕುರಿತು) ಹಂಗಾರ ನೀಸು ನನಗಿಂತ ಇನ್ನೂ ಕೆಳಗಿನ ಬದುಕನ್ನ ಬದುಕಿರೋದು.

ಸುವಾಲಿ : (ಇಬ್ಬರ ಕಡೀಗು ವಿಚಿತ್ರವಾಗಿ ನೋಡಿ) ನಮ್ಮ ಬದುಕಿನ್ಯಾಗ, ಕೆಳಗ ಮ್ಯಾಲ, ಪ್ರಶ್ನೇನ ಬರೋದಿಲ್ಲ. ಬದಕು ಒಂದೇ ಆದ್ರ ಪಟ್ಟಪಾಡುಗಳು ಮಾತ್ರ ಬ್ಯಾರೆ.

ಖೂನ : (ಕುತೂಹಲದಿಂದ) ನೀ ಹ್ಯಂಗ ಬದುಕಿದ್ದೆಅನ್ನೋದ ಆಟು ಹೇಳ್ತೀಯಾ.

ಸುವಾಲಿ : (ತಿರಸ್ಕಾರದಿಂದ) ಅದನ್ನ ಕಟ್ಕೊಂಡು ನೀ ಏನ ಮಾಡ್ತೀ ಬಿಡು. ನಿಂದೆ ನಿನಗೆ ರಗಡ ಆಗಿರೋ ಹೊತ್ನಾಗ.

ಖೂನ : ಅದು ಖರೆ ಅನ್ನು. ಆದ್ರೂ ಬದುಕಿನ ಒಂದು ಘಳಿಗೆಯನ್ನು ನೀನು ಹೇಳಬೇಕು.

ಅಸಣು : ನಮ್ಮೊಳಗ ಸತ್ತ ಹೋಗಿರೋ ನಿನ್ನೆಗಳನ್ನ ಇವತ್ತು ಕೆದಕಬೇಕು. ನಾಳೆ ನಾವು ಉಳತೀವೊ ಇಲ್ಲೋ ಯಾ ನನಮಗನಿಗ ಗೊತ್ತು. ಅದಕ್ಕ ನಿನ್ನ ನಿನ್ನೆಗಳನ್ನ ಹೇಳಾಕ ಬೇಕು.

ಸುವಾಲಿ : (ಖೂನನ ಹತ್ರಕ ಹೋಗಿ ಅವನ್ನ ನೋಡಿ)

ನಾ ಹ್ಯಾಗೂ ಒಂದ ನಿರ್ಧಾರಕ್ಕ ಬಂದಾಕಿ.

ಖೂನ : (ಏನು ತಿಳಿಯದವನಂತೆ) ಏನ ನಿನ್ನ ನಿರ್ಧಾರ?

ಅಸಣು : ಇನ್ನೇನ ಇರ್ತತಿ, ಅದೇ......

ಸುವಾಲಿ : (ಅಸಣುಕಡೀಗ ಒಂದ ಸಾರಿ ನೋಡಿ) ನೀ ಹೇಳೋದೆಲ್ಲಾ ಅಮ್ಯಾಲಿರಲಿ ನನ್ನ ನಿರ್ಧಾರ ಏನಪ್ಪ ಅಂದ್ರ.

ಇಬ್ಬರು : (ಒಂದೇ ಸಲ) ಏನು?

ಸುವಾಲಿ : ಹಗಲು ರಾತ್ರಿ ಅನ್ನದೇ ಕುಂತ್ರು ನಿಂತ್ರು ಬೆನ್ನ ಬಿಡದಂಗ ಕಾಡ್ತಿರೊ ನೆನಪನ್ನೋ ಈ ಭೂತದಿಂದೇ ಬಿಡುಗಡೇ ಪಡಿಬೇಕು.

ಖೂನ : (ಹಲ್ಲು ಕಿರಿದು) ಅಂದ್ರ ನೀ ಸನ್ನ ಕತಿಯನ್ನ ಹೇಳ್ತಿ ಅನ್ನು.

ಸುವಾಲಿ : (ಬೇಸರದಿಂದ) ನಾನು ಹೇಳಲಿಲ್ಲಾಂದ್ರೇ ಅದು ನನ್ನ ಬದುಕಾಕ ಬಿಡೋದಿಲ್ಲಾ. ನಾನು ಹೇಳ್ತೀನಿ. ಹೇಳಾಕಬೇಕು. ನನ್ನ ಗೊಳಕೇಳೋ ಮಂದಿಗಂತ ನಾ ಹುಡುಕಾಡ ಹತ್ತಿದ್ದೆ.

ಅಸಣು : (ಆಕಿ ಮಾತ ಹೋಗಿ) ನೀ ಕಲ್ಲ ಹಾಕ ಬ್ಯಾಡೇ. ಮುಚ್ಕೊಂಡು ಕೇಳು. ಇವತ್ತು ಮಂದಿಗ ಕೇಳೋ ವ್ಯವಧಾನ ಹೊಂಟ ಹೋಗ್ಯೈತಿ. ಮಗನ ಮಾತು ಅಪ್ಪಗೆ ಆಗೋದಿಲ್ಲ ಅಪ್ಪ ಹೇಳಿದ್ದು ಅವನಪ್ಪಗ ಆಗೋದಿಲ್ಲಾ . ಎಲ್ಲಾ ಹಗಲಲೇ ಕೆಡವಿಕೊಂಡು ಹೊಂಟು ಹೋಗಾಕ ಹತ್ಯಾರ.

ಸುವಾಲಿ : (ಖೂನನ ಹತ್ರ ಹೋಗಿ) ನಿನ್ನ ಭಾಷಣ ಬಂದ್ ಮಾಡು. ಹಿಂಗ ಮಾತಾಡ್ಕೊಂತ ಜಾರ್ಕೊಂಡ ಹೋದ್ರಿ ಅಂದ್ರ. ನಾನು ನೆನಪ ಹೆಣ ಹೊತ್ತು ಹುಚ್ಚಿ ಆಗಬೇಕಾದೀತು. ಹಂಗಾರ.... ಸುರುಮಾಡ್ಲ.

ಅಸಣು : (ಅನುಮಾನದಿಂದ) ಬಹಳ ಉದ್ದೋನು ಇಲ್ಲಾ ಅಲ್ಲಾ..

ಖೂನ : (ಅವನನ್ನೆ ದಿಟ್ಟಿಸಿನೋಡುವನು)....... ಕೇಳ ಮಾರಾಯ.

ಸುವಾಲಿ : (ಮರದ ಬುಡಕ್ಕ ಹೋಗಿ, ನೆಲದ ಮ್ಯಾಲಿನೇ ಮುಳ್ಳ ಸರಿಸಿ ಕುಂತ್ಕೊಳ್ಳುವಳು ಕತೆ ಹೇಳಾಕ ಅಣಿ ಅಗಿ) ಅವತ್ತ ಮುಂಜಾನಿ.....

ದೃಶ್ಯ ಎರಡು
ಸನ್ನಿವೇಶ -೧

(ಸುವಾಲಿ ಕುಟುಂಬ, ರಾತ್ರಿ ಹೊತ್ತು ಬೆಳಗಾಮುಂಜಾನಿ ಎದ್ದು ಕೆಲಸ ಮಾಡಲು ಸುರುಮಾಡುವಳು. ಆಕಿ ಮೂರೇ ಮಕ್ಕಳು, ಹನುಮ, ನಾಗ, ಮೂಗಿ ಆಕಿ ಗಂಡ ಲಚಮ. ಪಕ್ಕದ ಗುಡಿಸಲಲ್ಲಿ ಗೊರಜ್ಜಿ ವಾಸಿಸುತ್ತಿರುವಳು)

ಸುವಾಲಿ : (ಎದ್ದವಳೆ, ಎರಡು ಕೈ ಉಜ್ಜಿಕೊಂಡು, ಶಿವಶಿವ ಹನ್ಮಪ್ಪ ತಾಳಿ ಮರದ ದುರ್ಗವ ಕಾಪಾಡವ್ವ ನನ್ನವ್ವ ನನತಾಯಿ ಅಂದ್ಕೊಂಡೇ, ಒಮ್ಮೆ ಆಕಳಿಸಿ ಬೆಂಕಿಪೆಟ್ಟಿಗೆ ಸಲುವಾಗಿ ತಡಕಾಡುವಳು. ಹನಮ ಎದ್ದೇ ತೂಕಡಿಸುತ್ತಿರುವನು)ಎಲ್ಲಿಟ್ಟೊ ಹಾಳಮನಿಯೋನು. ಬೆಂಕಿ ಪೆಟ್ಟಿಗಿಯನ್ನ (ಹುಡಕೊವುಂದ ಯಾರದೋ ಕಾಲು ತುಳಿಯುವಳು)

ಹನಮ : ಯಪ್ಪಾ ಸತ್ನೋ... ಯಾರೊ ತುಳದಬಿಟ್ರೇ ಯವ್ವಾ..... ಎಲ್ಲದಿಯೇ..... ಸತ್ನೋಯಪ್ಪಾ...ಸತ್ತೆ...

ಸುವಾಲಿ : (ಗಾಬರಿಯಿಂದ, ತಡಕಾಡಿ) ಎಲ್ಲಿ ಹೋತು, ಯಾರದು, ಹನ್ಮಣ್ಣ, ಏ ಹನ್ಮಣ್ಣ, ಸುಮ್ಮನಾಗು. ಕತ್ಲು ಕಾಣಲಿಲ್ಲಾ ಕಾಲಿಟ್ಟಬಿಟ್ಟೆ.(ಅವನು ಮತ್ತೆ ಜೋರಾಗಿ ಅಳುವನು) ಏ ಸುಮ್ಮನಾಗೊ ಬೇವರ್ಸಿ ನನಮಗನೇ (ಗದರಿಸುವಳು)ನಿಮ್ಮಪ್ಪೇನಾರ ಎದ್ದನಂದ್ರೇ ಗುದ್ದತಾನ ನೋಡು (ಪಕ್ಕಕ್ಕ ಎಳ್ಕೊಂಡು ತಲಿ ಸವರುವಳು)

ಹನಮ : ಹೂಂ... ಹೂಂ... ಸತ್ನೆಯವ್ವಾ...ಕಾಲಮುರ್ಕೊಂಡು ಹೋಗೈತೀ (ಜೋರಾಗಿ ಅಳಾಕ ಸುರುಮಾಡುವನು)

ಸುವಾಲಿ : ಏ ಬಾಯಿಮುಚ್ಕೊ ಭಾಡಕೌವೇ ನನಮಗನ (ಸಿಟ್ಟು ತಡಿಯಾಕೇ ಆಗದೆ ಬೆನ್ನಮ್ಯಾಲ ದಬಾದಬಾ ನಾಕು ಹೇರುವಳು) ನಾ ಏನು ಬೇಕಂತ್ಲೇ ತುಳದ್ನೇನು. ಅವನದಲ್ಲ ಏಳ ಪಾಪದೋನು. ಬೀಡಿಸೇದಿ ಕಟ್ಟಿಪೆಟ್ಟಿಗೇ ಎಲ್ಲಟ್ನೋ. ಸಿಗವಲ್ದು ಆಟ ದೀಪ ಹಚ್ಚಿ ಒಲಿ ಹಚ್ಚಬೇಕು.

ಹನಮ : (ಬಿದ್ದ ಹೊಡತಕ್ಕೆ ಗಪಾದ್ರೂ ಮುಸಿ ಮುಸಿ ಅಳುವನು) ....ಊಂ.......

ಲಚಮ : ಏ... ಯಾವನ್ಲೇ ಅವನು. ಅಳಾಕ ಹತ್ತಿರೋದು (ಎದ್ದು ಬರುವನು) ಏನಾತ್ಲೇ, ಹನವು. ಸತ್ತೋರ ಮನಿಯಾಗ ಲಬಲಬ ಹೊಯ್ಕೊಂಡಂಗೇ ಹೊಯ್ಕಳ್ಳಾಕ ಹತ್ತಿಯಲ್ಲ.

ಸುವಾಲಿ : (ಸಿಟ್ಟನಿಂದ ಗಂಡನ ಕಡೀಗ ನೋಡಿ. ಆ ಕಡೆಯಿಂದ ಈಕಡೀಗ ತಿರುಗಾಡಿ) ಹೂಂ, ಎದ್ದ ಬಂದ, ಬಾಜಿರಾಯ, ಹೇಳೋ ಏನಾತಂತ

ಲಚಮ : (ಆಕಿ ಸಿರಿ ಸೆರಗ ಹಿಡದು ಎಳೆಯುತ್ತ) ಏ, ದೆವ್ವಗೆ ಹುಟ್ಟಿದ್ಯಾಕಿ ನಿಮ್ಮಪ್ಪಂದ ನೂರ ಕೂರಗಿ ಕಮತ ಐತಿ ನೋಡಿ. ಅದಕ್ಕ ದೆವ್ವಾ ಅಡ್ಡಾಡೊ ಹೊತ್ನಾಗ ಎದ್ದ ಬಡದಾಡಾಕ ಹತ್ತಿ. ಮಕ್ಕೊ ಬಾ.

ಸುವಾಲಿ : (ಸಿಟ್ಟನಿಂದೇ ವನ ಕೈ ಕೊಸರಿಕೊಂಡೇ) ಥು, ನಿನ್ನ ಹೆಣ ಎತ್ಲಿ, ಹರದು ಗಂಟಹಾಕಿದ ಸೀರಿ ಹರದಬಿಟ್ಟೆಯಲ್ಲಾ. ಭಾರಿ ತಂದ ಉಡಸೋ ಗಂಡ್ಸು ನೀನು.

ಲಚಮ : (ಏನ ಹೇಳಾಕಂತ ತಿಳಿಯದೆ ಬಾಯಿ ಬಿಡ್ತಾ) ಕಂಡೀನ ಹೇಳೆ ನಿಂದು.

(ಮೂಲ್ಯಾಗ ಹೋಗಿ ಕುತ್ಕೊಂಡೇ ತೂಕಡಿಸುವನು)

ಸುವಾಲಿ : ಆಟೆ ನಿಂದು, ಮನಿಮಕ್ಕಳು ಖಬರೇನಾರ ಐತೇನೇ ನಿನಗೆ. ಆ ಭೌಡಕಾವ ಗೌಡ! ಹರದ ಎದಿಕಾಣೋದನ್ನ ಹದ್ದಿ ನಂಗೆ ನೋಡ್ತಾನ. ತಾಸಗಟ್ಲೇ ಎದರಿಗೆ ನಿಲ್ಲಿಸಿಕೊಂಡು, ಹ್ವಾದಪಂಚಮಿಗ ಒಂದ ಸೀರಿ ತಂದುಕೊಂಡೂ ನಿನ್ನ ಒಸಡಗ ಅಂತಂದ್ರ ತರ್ಲಿಲ್ಲಾ, ಹೋಗಲಿ ಮನ್ನಿನ ದೀಪಾವಳಿಗ, ಅವರಿವರ ಹೊಲ್ದಾಗ ತೆನಿ ಆರ್ಸಿ, ದುಂಡಗಮಾಡಿದ ರಾಗಿ ಮಾರೋ ಮುಂದ ಬಡಕೊಂಡೇ, ಸೊಸೈಟಿ ಸೀರಿನಾರೇ ಕೊಡಸು ಅಂತ, (ಹಸಮುನ್ನ ಎಳಕೊಂಡ ಒಳಗೇ ಹೋಗುವಳು. ಆಕಿ ಹಿರಿ ಮಗಳು ಮೂಗವ್ವನ್ನ ಕೂಗ್ತಾ) ಏ ಮೂಗಿ ಎದ್ದುಬಾರೆ, ಏಟೊತ್ತು ಮಲಗೋದು, ಹೊತ್ತ ನೆತ್ತಿ ಮ್ಯಾಗ ಬರಾಕ ಹತ್ಯತಿ, ಏಳೆ ಲೌಡಿ. ನಾಳೆ ಮಾಡ್ಕೊಂಡು ಹೋಗೋನು ಮನಿಯಾಗೆ ಹಿಂಗ ಮಾಡು ಕುಂಡಿಮ್ಯಾಲ ಬರಿಹಾಕ್ತಾರೆ.

ಮೂಗವ್ವ : (ವಯಸ್ಸು ಸುಮಾರು ಹದಿನಾರು, ಎದ್ದು ಮೈ ಮುರಿತಾ ಹರಿಕು ಅರವಿಗಳನ್ನು ಸರಿಮಾಡ್ತಾ) ಏನಾತಬೇ, ಹಿಂಗ್ಯಾಕ ಒದರಾಕ ಹತ್ತಿ, ದ್ಯಾಮಪ್ಪನ ಹುಂಜ ಕೂಗೆ ಇಲ್ಲಾ ನೀ ಎದ್ದು ನನ್ನ ತಲಿ ತಿನ್ನಾಕ ಹತ್ತಿ.

ಸುವಾಲಿ : ಮುಂಜಾನಿ ಕೂಲಿಗ ಹೋಗಾಕವ್ವ , ರಾಗಿ ಗಣಕಿ ಮುರಿತಾವಂತ ಗೌಡಪ್ಪ ತಾಕೀತ ಮಾಡ್ಯಾನ. ಹೋಗಿ ಒಲಿಯಾನ ಬೂದಿ ತೆಗೆದು ಒಂದಕಡೀಗ ನುಚ್ಚಿಗ ಇಡು, ಮತ್ತೊಂದ ಕಡೀಗ ಚಾ ಮಾಡಾಕ ಇಡು. ನಿನ್ನೆ ರಾತ್ರಿ ಗೊರಜ್ಜಿ ಘನ ಫಜೀತಿ ಪಡಾಕಹತ್ತಿದ್ಲು. ಬದಕ್ಯಾಳ ಇಲ್ಲಾ ಸಟ್ಕೊಂಡ ಹೋಗ್ಯಾಳ ಆಟನೋಡ್ಕಂಡ ಬರ್ತಿನಿ.

ಹನಮ : (ಅಳ್ತಿದ್ದೋನು ನಿಲ್ಲಿ) ಯವ್ವಾ ಎಲ್ಲಿಗ ಹೊಂಟಿಬೇ, ರಾತ್ರಿನಾ ಉಣ್ಣದೆ ಮಕ್ಕೊಂಡಿದ್ದೆ. ಹೊಟ್ಟಿ ಹಸ್ಕೊಂಡೈತಿ.(ಆಕಿ ಸೆರಗು ಹಿಡ್ಕೊಂಡೇ) ಏನಾರ ಐತೇನು?

ಸುವಾಲಿ : (ಗದರಿಸುವ ದನಿಯೊಳಗ) ಹನಮು, ಮದ್ವಿ ಮಾಡಿದ್ರ ನಾಕ ಮಕ್ಕಳಾಕ್ಕಿದ್ದು, ಬಾಯಾಗ ನೀರ ಹಾಕಿ ಮಕ್ಕಳಿಸದೆ ಉಣ್ಣಾಕ ಇಕ್ಕಂತಿಯಲ್ಲಾ. ಖಬರೈತೇನ ನಿನಗ.

ಲಚಮ : (ಮಕ್ಕೊಂಡಿರೊತಾಗಿಂದ) ಏನೇ ಬಾ ಇಲ್ಲಿ.

ಸುವಾಲಿ : ಹೂಂ, ಇದು ಬ್ಯಾರೆ ಕೇಡು, ಏನಾಗಬೇಕೊ ಮಹಾರಾಜಗ.

ಲಚಮ : ಲೇ ಬಾರೇ ಇಲ್ಲಿ ದೆವ್ವಗ ಹುಟ್ಟಿದೋಳೇ (ಹಲ್ಲು ಕಡಿಯುತ್ತಾ)

ಸುವಾಲಿ : ಶಿವ ಶಿವ ಅಂತ ಮಂದಿ ಏಳೂ ಹೊತ್ನಾಗ ಇವನೇನ ಹಚ್ಕೊಂಡಾನ ಪುರಾಣ.

ಲಚಮ : (ಎದ್ದು ಆಕಿಹತ್ರ ಬಂದವನೆ) ಬೇವರ್ಸಿ, ಮೈಯಾಗ ಹೆಂಗೈತಿ,ನಿನ್ನ ಗಂಡ ನಾನ ಕರದ್ರೇ, ಬರಂಗಿಲ್ಲಾ. ಲಕ್ಷಾಧಿಪತಿ ಮೊಮ್ಮಗಳು ಇಕಿ.

ಸುವಾಲಿ : ಖಾಲಿ ಪುಕ್ಕಟೆ ಅಡ್ಡಾಡ್ತಿ ಆಟೆ, ಏನಕಡದ ತಂದ ಹಾಕ್ತಿ ಹೇಳು. ಮತ್ತ ಇಂತೀ ಕರದ ತಕ್ಷಣ ಹೋಗಬೇಕಂತೆ ಹೋಗು ಹೋಗು, ನಿಂದ ಎಲ್ಲಿ ಹಚ್ಚಿ.

ಲಚಮ : ಇನ್ನೇನ ಮಾಡಬೇಕೆ? ಎಲ್ಲಾದ್ರ ಕೂಲಿ ಸಿಕ್ರ ಹೊಕ್ಕೀನಿ ನನಗ ಕುಡಿಯಾಕ ಆಗೋ ಆಟನ್ನ ದುಡಿತೀನಿ (ಆಕಿ ಮ್ಯಾಲ ಮುಷ್ಠಿ ಬಿಗದ ಹೋಗಿ)ಅಲ್ಲೇ ನಿನ್ನವ್ವನ, ದುಡದು ದುಡದು ಎದಿ ಮಟಆಗೋ ಹಂಗೇ ಬೆಳಸಿಲ್ಲಾ ನಿನ್ನ ಮಕ್ಕಳನ್ನ ಇನ್ನೇನ ಆಗಬೇಕು.

ಸುವಾಲಿ : ಹೂಂ, ನೀನ ಹಗಲು ರಾತ್ರಿ ಒಂದ ಮಾಡಿ, ಕೊಂಡಜ್ಜಿ ಬುಳ್ಳಾಪುರ ಕೆಂಚನಳ್ಳಿ ಮಟಾನು ಕೈಯಾಗ ರೊಟ್ಟಿ ಹಿಡ್ಕೊಂಡು ಹೋಗಿ ಕೂಲಿ ಮಾಡಿ ಗಂಜಿ, ಅಂಬಲಿ ಮಾಡಿ ಹಾಕಿ ಸಾಕಿದೋನು.

ಲಚಮ : ಅದೆಲ್ಲ ಪುರಾಣ ತಗಿಬ್ಯಾಡ, ಯಂಗಟನ ಅಂಗಡಿಗ ಹೋಗಿ ಬರ್ತೀನಿ ಒಂದ ಎಂಟಾಣೆ ಕೊಡು.(ಆಕಿ ಮುಂದ ಕೈ ಚಾಚುವನು)

ಸುವಾಲಿ : (ಎಲ್ಲಿತೋ ಸಿಟ್ಟು) ಹೋಗೋ ಮೂದೇವಿ. ಒಲಿಮ್ಯಾಲ ಚಾ ಗಂತೇಳಿ ನೀರಿಟ್ಟು ತಾಸ ಆತು, ಚಾ ಚೀಟಿ ತರಾನಂದ್ರ ರೊಕ್ಕ ಇಲ್ದಕ್ಕ ರಂಗಿ ದೊಡ್ಡಮ್ಮನ ತಾವ ಇಸ್ಕೊಂಡ ಬರಾಕ ಹೊಂಟೀನಿ.

ಮೂಗವ್ವ : (ಅವರಿಬ್ಬರ ಮಾತಿನ ನಡುವೆ ಬಂದು) ಯವ್ವಬೇ, ನೀರ ಕುದಿಯಾಕ ಹತ್ಯತಿ ಚಾ ಪುಡಿತಾ. ಸ್ವರ್ಯಾಗಿನ ತುಂಡಾಬೆಲ್ಲಾ ಹಾಕೀನಿ.

ಸುವಾಲಿ : (ಏನೋ ಸನ್ನಿ ಮಾಡುವಳು) ರಂಗಿ ದೊಡ್ಡವ್ವನ ಮನಿಗ ಹೋಗಿ ಬರ್ತೀನಿ ಉರಿ ಕಮ್ಮಿಮಾಡು.

ಲಚಮ : (ಸ್ವಗತ) ಆ ಸಾರಾಯಿ ಅಂಗಡಿ ಕುಂಟಗ ಹೇಳ್ದೆ. ಎಂಟಾಣೆ ಇರ್ಲಾಲೆ ಅಂತ, ಮಂಗ ಕೇಳಲಿಲ್ಲಾ ಮುಂಜಾನಿ ಮುಂಜಾನಿ ಯಂಗಟನ ಅಂಗಂಡಿ ತಿನ್ನದಿದ್ರ ಬಾಯಾಗ ಏನೋ ಒಂಥರಾ ಆಕ್ಕೃತಿ. ಈ ಹಡಬಿ ಕೇಳಿದ್ರ ಇಲ್ಲಾ ಅಂತಾಳ. ನಿನ್ನ ಬುಡ್ಡಿ ಚೀಲದ ಮೂಲ್ಯಾಗ ಏನಾರ ಐತೇನು ನೋಡೆ?

ಸುವಾಲಿ : ನೀನ ನೆಟ್ಟಗಿದಿದ್ರ ಹಿಂಗ್ಯಾಗ ಆಕ್ಕಿತು.

ಲಚಮ : ಇನ್‌ಮ್ಯಾಲ, ನನ್ನ ತಾಯಿ ಆಣೆಗೂ ಕುಡಿಯಂಗಿಲ್ಲಾ, ದುಡದ ತಂದು ನಿನ್ನ ಕೈಯಾಗ ಕೊಡ್ತೀನಿ ಕೊಡೆ.

ಸುವಾಲಿ : (ಹಂಗಿಸುವ ಧನಿಯೊಳಗ) ಹಿಂಗ ನಿನ್ನ ಅಣಿ ಶಾಪ ಬಡದು ಮೂರವರ್ಷದ ಹಿಂದ ನಿಮ್ಮವ್ವ ನೆಗದ ಬಿದ್ದಹ್ವಾದ್ಲು. ಇನ್ನೇನ ನಾಚಿಕೆ ಇಲ್ಲ ಆಣಿ ಇಡ್ತಿ ಬಿಡು.

ಲಚಮ : ಥು, ನಿನ್ನವ್ವನ ನಾಯಿ ಜಾತಿಯೊಳ. ನಿನ್ನ ಹತ್ರ ಕೇಳೋದಕ್ಕಿಂತ ಆ ಯಂಗಟನ್ನ ಇಲ್ಲಾ, ಅವನ ಹೆಣ್ತಿ ಪದ್ಮವ್ವನ ಕೇಳಿದ್ರ, ಇಟ್ಹೊತ್ತಿಗ ಕೊಟ್ಟೆ ಬಿಡೋಳು. (ಹೆಗಲ ಮ್ಯಾಲಿನ ಹರಕ ಟವೆಲು ಕೊಡವಿ ಬಗಲಾಗ ಇಟ್ಕೊಂಡು ಸಿಟ್ಟಿಂದ ದೊಡ್ಡ ಹೆಜ್ಜೆ ಹಾಕ್ತಾ ಹೊರಟು ಬಿಡುವನು)

ಸುವಾಲಿ : (ಅವನು ಹೋಗೋದನ್ನೇ ನೋಡ್ತಿದ್ದು ಅವನು ಹೋಗಿರೋದನ್ನೇ ನಿಶ್ಚಯ ಮಾಡಿಕೊಳ್ಳತ ಅವನು ಹ್ವಾದ ದಿಕ್ಕಿಗ ಬಂದು ಬಗ್ಗಿ ನೋಡಿ)

ಹ್ವಾದ ಬಿಡು, ದುಡಿಯಂಗಿಲ್ಲ ದುಗ್ಗಾಣಿ ಬಡಿಯಂಗಿಲ್ಲಾ. ಆಹಾ, ಕೇಳೋದ ನೋಡು (ಮೂಗಿನ ಕೂಗ್ತಾ) ಏ ಮೂಗಿ, ಬಾರೇ ನಾಕಾಣೆ ಒಯ್ದು ಒಂದ ದೊಡ್ಡ ಚಾ ಚೀಟು ತಗೊಂಡಬಾ.

ಮೂಗವ್ವ : ಒಲಿಮ್ಯಾಲ ನೀರ ಬರಾಕ ಹತ್ಯತಿ ನೋಡ್ತಿರ ಆಟು, (ಕೈ ಮುಂದ ಮಾಡಿ)ತತ್ತಾರಬೇ.....(ಅವರವ್ವ ಎಂಟಾಣೆ ಕೊಟ್ಟಿದ್ದ ನೋಡಿ) ಅವ್ವ ಉಳದ ನಾಕಾಣೆ ನನಗೆ ಬೇ.

ಸುವಾಲಿ : (ಸಿಟ್ಟಿನಿಂದ)ಹೋಗೆ, ಹೇಳಿದಷ್ಟು ಮಾಡು. ಇರೋದೆ ಅಷ್ಟು. ಗಡಾನೆ ಬಾ, ನಾ ಆಟ ಗೊರಜ್ಜಿ ಮನಿಗ ಹೊಕ್ಕೀನಿ. ಒಲಿಯಾಗ ಬೆಂಕಿ ಐತಿ. ಹನಮಗ ಹೇಳಿ ಹೊಕ್ಕೀನಿ. ಎನಂದೆ, (ಮೂಗವ್ವ ಎಡಕ್ಕೆ ನಿರ್ಗಮಿಸುವಳು ಸುವಾಲಿ ಹನುಮನ ಕೂಗುವಳು) ಲೇ ಹನ್ಮಣ್ಣಾ ಒಲಿ ಮುಂದ ಕುಂತಿರು. ನಿಮ್ಮಕ್ಕ ಬಂದಿಂದ ಮುದಕಿ ಮನಿಗ ಬಾ, ಏನಂದೆ.(ಅವನು ಒಳಗಿನಿಂದ ಹೂ ಅಂದಿಂದ. ಆಕಿ ಮನಿ ಮುಂದಿದ್ದ ಗುಡಿಸಲನ್ನ ಪ್ರವೇಶಿಸುವಳು. ದೀಪ ಆರುವುದು)

ಸನ್ನಿವೇಶ -೨

(ಮುದುಕಿ ಗುಡಿಸಲು, ಒಂದೆಲ್ಡು ಡಬ್ಬಗಳು. ಗೋಣಿಚೀಲದ ಮ್ಯಾಲ ಹರಕು ದುಪಟ ಹೊತ್ಕೊಂಡು ಮುದುರಿ, ಕಾಂವ ಕಾಂವ ಅಂತೇಳೇ ಕೆಮ್ಮತಾ ತೆಂಗಿನ ಚಿಪ್ಪಿನೊಳಗೆ ಲ್ವಾಳೇ ಉಗಳಿದ್ದ ಪಕ್ಕದಾಗಿದೆ ಸಾವು ಬದುಕಿನ ನಡುವೆ ಗುದ್ದಾಡುತ್ತಿದ್ದಾಳೆ)

ಸುವಾಲಿ : (ಕಳ್ಳ ಹೆಜ್ಜೆ ಹಾಕ್ತಾ ಸತ್ತಾಳೊ ಬದುಕ್ಯಾಳಂತ ಒಂದಸಾರಿ ನೋಡಿ, ಏನೋ ಹುಡಕಾಡತೊಡಗುವಳು. ಮನಿಯೊಳಗೇ ಸುತ್ತಾಡೊ ಮುಂದ ಡಬ್ಬಕ್ಕ ಕಾಲ ಬಡದು. ಥಡ್ ಅಂತೇ ಸದ್ದಾಗುವುದು) ಥು, ಇದ್ರ ಹೆಣ ಎತ್ಲಿ. ಮರ್ಯಾದಿ ತಗಿತಲ್ಲಾ.

ಗೊರಜ್ಜಿ : (ಕಳ್ಳ ಬೆಕ್ಕಿನಂಗ ಕಣ್ಣು ಬಿಟ್ಟ, ಕೌಂವ್ ಕೌಂವೇ ಕೆಮ್ಮಿ ಗುರುಗುರು, ಗುಸುಗುಸು ಮಾಡ್ತಾ ಬಾಯಾಗ ಬಂದ ಕಫ ಉಗಳಿ, ಉಸ್ಸ್.. ಉಸ್ಸ್...) ಯಾರವ್ವಾ ಸುವಾಲಿ, ಏ ಸುವಾಲಿ, ಸುವಾಲಿ.....

ಸುವಾಲಿ : (ಬೆಚ್ಚಿ ಬಿದ್ದವಳಂತೆ) ಏ, ಏನ್ ದೊಡ್ಡವ್ವ, ಈಗ ಹೆಂಗೈತಿ, (ಆಕಿ ಪಕ್ಕದಾಗ ಕೂಡುವಳು)

ಗೊರಜ್ಜಿ : ಏನ ಪಾಡೊ ಏನೋ, ಅತ್ಲಾಗ ಸಾಯಾಕು ಆಗವಲ್ದು ಬದಕಾಕು ಆಗವಲ್ದು(ಒಂದ ಸಾರಿ ಕೌಂವ್ವ ಅಂತ ಅಚ್ಕೊಂಡೋಳು ಹಂಗೆ ಕೆಮ್ಮುವಳು)

ಸುವಾಲಿ : (ಆಕಡಿ ಈ ಕಡೀಗ ನೋಡ್ತಾ) ನೀರ್ ತರ್ತೀನಬೆ, (ಎದ್ದು ಹುಡಕಾಡ್ತ ಒಳಗ ನಡಿಯುವಳು)

ಗೊರಜ್ಜಿ : ಇದರ ಒಸಡಗಲಿ, ಯಾ ಜನ್ಮದಾಗ (ತಡದ ತಡದ ಮಾತಾಡುವಳು) ನನ್ನ ಶತ್ರು ಆಗಿತ್ತೋ, ಈ ಜನ್ಮದಾಗ ಪ್ರಾಣ ಹಿಂಡಾಕ ಹತ್ಯತಿ.

ಸುವಾಲಿ : (ಅಲ್ಲಿ , ಇಲ್ಲಿ ಕಣ್ಣಾಡಿಸ್ತಾ, ಬಗ್ಗಿ ಬಗ್ಗಿ ನೋಡಿ, ಎಲ್ಲಾ ಕಾಣದಕ್ಕ ಒಂದ ಸಿಲಾವರಿ ಗಲಾಸಿನೊಳಗ ನೀರ ತಗೊಂಡ ಬರುವಳು) ದೊಡ್ಡವ್ವ...ತಗೋ ಬೇ ನೀರ್ ತಂದೀನಿ.

ಗೊರಜ್ಜಿ : ಹೂಂ....ಹೂಂ... ತತ್ತಾರವ್ವ...ಸಾಯ್ತಿನವ್ವ ನಾನು ಬದಕಂಗಿಲ್ಲಾ, ಊಂ... ಊಂ....(ಒಂದ ಸಾರಿ ಕ್ಯಾಕರಿಸಿ ಉಗಳುವಳು)

ಸುವಾಲಿ : (ಮದುಕಿ ಕಡೀಗ ಒಂದ ದೃಷ್ಟಿ ಹರಿಸಿ, ಹುಡಕ್ತಿರೋದನ್ನ ಕುತೂಹಲದಿಂದ ಹುಡುಕಾಡುವಳು. ಹಾಸಿಗಿ ಸರಿಸಿ ಬಗ್ಗಿ ನೋಡುವಳು) (ಸ್ವಗತ) ಎಲ್ಲಿ ಹೋತು. ಮನ್ನಿನ್ಯಾಗ ಇಲ್ಲೇ ಬಿದ್ದಿತು. ಈ ಹಾಳ ಮನಿ ಮುದುಕಿ ಭಾರಿ ಚಾಲು ಅದಾಳ. ಸಾಯಾಕ ಹತ್ತಿದ್ರು ಇರೊ ಸಾಮಾನಮ್ಯಾಲಿನ ಆಶಿ ಹೋಗಿಲ್ಲಾ. ಸೆಟ್ಕೊಂಡು ಹೋಗಬಾರ್ದ.

ಗೊರಜ್ಜಿ : ಸುವಾಲಿ...... ಊಂ... ಅಯ್ಯೋ..... ಸತ್ತೆ (ಮಾತ ನಿಲ್ಲುವುದು)

ಸುವಾಲಿ : (ಒಳಗೊಳಗೆ ಖುಷಿ ಆಗ್ತಿದ್ರು ಮೇಲಿನ ಮಾತಿಗ) ಹಂಗ್ಯಾಕಂತಿ ಬಿಡದೊಡವ್ವ ಏನೂ ಆಗಂಗಿಲ್ಲಾ. (ಆಕಿ ಸರಗನ್ನ ಕಣ್ಣು ಅರಳಿಸಿ ನೋಡುವಳು) ಇದಲ್ಲಾ.

ಗೊರಜ್ಜಿ : (ಮಾತಾಡೋ ಯತ್ನ ಮಾಡಿ, ಕೆಮ್ಮು ಹೆಚ್ಚಾದಕ್ಕ ವಿಲಿವಿಲಿ ಒದ್ದಾಡುವಳು) ಹೂಂ...... ಹೂಂ......

ಸುವಾಲಿ : (ಆಕಿ ಉಳ್ಳಾಡ್ತಿರೋದನ್ನ ನೋಡಿ, ಆಕೀನ ಹಿಡ್ಕೊಂಡು ಆಕಿ ತಲಕೆಳಗಿನ ಸಾಮಾನು ಕೆದಕುವಳು ಮುದುಕಿಯನ್ನ ಗಟ್ಟಿಯಾಗಿ ಕುಂದ್ರಿಸಿ ಎದ್ದು ಬಾಗಲ ಮಟ ಬಂದು ಯಾರಾರು ಬರಾಕ ಹತ್ಯಾರೇನಂತ ನೋಡಿ ಮತ್ತೆ ಒಳಗ ಹೋಗಿ) ದೊಡವ್ವ..(ಆಕೀನ ಮುಟ್ಟಿ) ಏ ದೊಡವ್ವ....

ಗೊರಜ್ಜಿ : (ಮೆಲ್ಲಗ ಕಣ್ಣು ಬಿಟ್ಟ ಕೌಂವ....) ಅಯ್ಯಪ್ಪ (ಸದ್ದು ಮಾಡುವಳು) ಎಲ್ಲಿಗೆ ಹೋದ್ಯೋ ಹಾಳಮನಿ ಸಾವು ಲೋ ಯಮಧರ್ಮ ಕಳಸೋ ನಿನ್ನ ಭಂಟರನ್ನ ಸಾಕಾಗಿ ಹೋತು ನನಗ ಕರ್ಕೊಂಡಹೋಗ್ಲಿ.(ಮೆಲ್ಲಗೆ ಕನಲುವಳು)

ಸುವಾಲಿ : ಬೇ...... ಇನ್ನೂ ಬಹಳ ದಿನ ಬದಕ್ತಿ(ಮನಸಿಲ್ದೆ) ಯಾಕ ಹಿಂಗ ಅಂತಿ.

ಗೊರಜ್ಜಿ : ಇಲ್ಲವ್ವಾ (ಕೌಂವ ಕೆಮ್ಮು) ನಾಯಾರ ಒಲಿಯಾಗ ನೀರ ಹಾಕಿದ್ದೆ ಅಂತೇಳಿ ತಡಮಾಡಾಕ ಹತ್ಯನೋ... ಕಳಸೋ..

ಸುವಾಲಿ : (ಸ್ವಗತ) ಸಾಯಬಾರ್ದ ಹಾಳ ಮನೀದು. ಈಗ ಯಾರೂ ಇಲ್ಲಾ. ಮನ್ನಿನ್ಯಾಗ ಆ ದುಗ್ಗೇಶಿ ಕುಟಾಗ ಅದ್ಯಾವುದೋ ಉರಾಗಿರೋ ಆಕಿ ತಮ್ಮಗ ಹೇಳಿ ಕಳಿಸ್ಯಾಳಂತ. ಭಾಡಕೌವನನ ಮಕ್ಕಳು, ಇಷ್ಟು ದಿನ ಇಲ್ದೋರು ಬಂದಾರು, ಇದ್ದ ಬಿದದ್ದನ್ನ ಲೂಟ ಮಾಡಾಕ. (ಕಳವಳ ಪಡ್ತಾ) ನೀ ಹೇಳಿದ್ದು ಆ ದುಗ್ಗೇಶಿ ಹೇಳ್ಯಾನಂತ ಬೇ.

ಗೊರಜ್ಜಿ : ಅದೇನ ಮಾಡ್ಯಾನೊ ನನ್ನವ್ವ. ನಾ ಸತ್ತ ಮ್ಯಾಲ ಇದ್ದ ಬದ್ದ ಸಾಮಾನ ತಗೊಂಡ ಹೋಗಾಕ ಬರಬಾರ್ದ . ಹಾಟಗಳ್ರು ಇದ್ದಾಗಂತು ಬರ್ಲಿಲ್ಲಾ.

ಸುವಾಲಿ : (ಸಿಟ್ಟು ಬಂದ್ರು ತಡ್ಕೊಂಡು) ಹೌದ ಬಿಡು. (ಸ್ವಗತ) ನಾಕ ವರ್ಷದಿಂದ ಉಣ್ಣಾಕ ಇಕ್ತಿದ್ದೀವಿ. ಆಟ ಖಬರ ಬ್ಯಾಡ. ಹಾಳ ಮನಿ ಮುದುಕಿ ಸೆಟ್ಕೊಂಡ ಹೋಗಬಾರ್ದ.

ಗೊರಜ್ಜಿ : ಊಂ.... ಊಂ.....(ಕೆಮ್ಮು) ಎ ತಂಗಿ, ಒಂದಹನಿ ಚಾ ಮಾಡ್ಕೊಂಡ ಬಾರವ್ವ, ಗಂಟಲೊಳಗಿಂದ ಗೂರು ಇಳಲಿ.

ಸುವಾಲಿ : (ತಿರಸ್ಕಾರದಿಂದ) ಊಂ.... (ಸ್ವಗತ) ನಾಚಕಿ ಆಗಬ್ಯಾಡ ಇಕಿ ಜನ್ಮಕ್ಕ. ಹ್ಯಾಂಗ ಕೇಳ್ತಾಳ ನೋಡು (ಮತ್ತ ಹುಡಕಾಡುವಳು)

ಗೊರಜ್ಜಿ : ಯವ್ವಾ ಜಲ್ದಿ ಬಾರೇ, ಸಾಯೋ ಹಂಗ ಆಗ್ಯತಿ.

ಸುವಾಲಿ : (ಸಾಯ ಅನ್ನೊ ಹಂಗ ಲಟಗಿ ಮುರದು)(ಸ್ವಗತ) ಅಲ್ಲಾ, ನಿನ್ನೆ ಮನ್ನೆ ಇಲ್ಲೆ ಇತ್ತು ಹಾಳ ಮನೀದು.(ಅನ್ಕೊಂತ ಹೊರಡಬೇಕು ಹನಮು ಒಳಗೆ ಬರುವನು)

ಹನಮ : ಯಬೇ, ಅಕ್ಕ ಬಂದ್ಲು, ಚಾ ಚೀಟ ಹರದು ಹಾಕಿದ್ಲು, ನೀ ಆಗ್ಲಿ ನ್ಯಾಗ ಕರದಿದ್ಯಲ್ಲಾ ಏನೋ ಹುಡಕಾಕಂತ ಅದಕ ಓಡಿಬಂದೆ.

ಸುವಾಲಿ : (ಓಡಿ ಬಂದಾಕಿನ, ಅವನ ಬಾಯಿ ಮುಚ್ಚಿ ಮೆಲ್ಲ ಅವನ ಕಿವಿಯಾಗ ಹೇಳುವಳು) ಹಿಂಗ್ಯಾಕ ಒದರಾಕಹತ್ತಿ, ಹಾಳ ಮನಿ ಮುದುಕಿ ಕೇಳಕೊಂಡಾಳು. ಸಾವು ಬಂದ್ರು, ಸಾಯೋದಿಲ್ಲ ನೋಡಮತ್ತ,

ಹನುಮ :- ~~[illegible]~~ (ಮೆತ್ತಗೆ) **ಓ ಅದೇನು, ನೀ ಚಿಂತಿಬಿಡು, ಮುದಕಿ ಇವತ್ತ ನೆಗದ ಬಿದ್ದ ಹೊಕ್ಕಾಳ.**

ಸುವಾಲಿ : (ಅವನನ್ನ ಪಕ್ಕಕ ಕರೆದು ಕಿವಿಯೊಳಗ ಹೇಳುವವಳು ಅವನು ತಲಿ ಅಲ್ಲಾಡಿಸಿ, ಹೂಂ ಗುಟ್ಟುವನು) ಗೊತ್ತಾಗ್ದಂಗ ಮಾಡಾಕು,ಸಾಯೋ ಮುಂದ ಶಾಪ ಕೊಟ್ಟ ಸತ್ತಾಳು ಮತ್ತ.

ಹನುಮ : ಆತು ಬಿಡು. ನೀ ಏನು ಕಾಳಜಿ ಮಾಡಬ್ಯಾಡಿನ್ನ (ಅಂದವನೆ ಕಳ್ಳ ಹೆಜ್ಜೆ ಹಾಕ್ತಾ ಹೋಗುವನು).

ಸುವಾಲಿ : (ಮೆಲ್ಲಗ ಅವನಿಗ ಕೇಳೂ ಹಂಗ) ಎಡವಟ್ಟ ಮಾಡಗಿಡಿಯೊ ಮತ್ತ. ಆಕಿ ಸಂಬಂಧಿಕರು ಬರೋದ್ರಾಗ ಆಗಬೇಕು. ನಾ ಆಟು ಮನೀಗ ಹೋಗಿ ಒಂದ ಹನಿ ಚಾ ಮಾಡ್ಕೊಂಡ ಬರ್ತೀನಿ. ಸಾಯಾಕ ಹತ್ಯಾಳ ಸಾಯಲಿ ಅತ್ಲಾಗ. (ಲಟಗಿ ಮುರಿಯುತ್ತ ತನ್ನ ಗುಡಿಸಲ ಕಡೀಗ ಹೋಗುವಳು)

ಹನುಮ : ಯಮ್ಮ....ಬೆ ಪಾಡದಿಯಾ, ನಿನ್ನವ್ವನ, ನಿನ್ನೆ ಸಾಯ್ತೀನಿ ಅಂದಾಕಿ ಸಾಯಲಿಲ್ಲ ಬೇ, ಸೆಟ್ಕೊಂಡ ಹೋಗಬಾರ್ದ(ಸುತ್ತ ಕಣ್ಣಾಡಿಸಿ ಹುಡುಕುವನು)

ಗೊರಜ್ಜಿ : (ಕೆಮ್ಮು ಹೆಚ್ಚಾಗಿ) ಹೂಂ....ಹೋಗೋ ನಿನ ಬಾಯಾಗ ನನ್ನ ತೊಮ್ಲ ಹಾಕ್ಲಿ. ಸಾಯಾಕೂ ಬಿಡವಲಿಲ್ಲ, ಸತ್ನವ್ವ...

ಹನುಮ : (ಕತ್ತ ಹೊಳ್ಳಿಸಿ ಸಾಮಾನು ಎತ್ತಿ ಇಡ್ತಾ) ನೀ ಈಗ್ಲೆ ಸಾಯಂಗಿಲ್ಲಾಂತ, ಯಮ, ನಿನ್ನ ಮರ್ತಾನಂತ ನಮ್ಮಪ್ಪ ಅನ್ನಾಕ ಹತ್ತಿದ್ದ. (ಸ್ವಗತ) ಎಲ್ಲಿಟ್ಲು, ಗಂಟಿನ್ಯಾಗ ಏನಾರ ಇಟ್ಕೊಂಡ್ಲೋ ಏನೋ.

ಹೊರಗಿನಿಂದ ಯಾರೋ ಹೆಂಗಸು, ಗಂಡಸಿನೊಂದಿಗೆ, ನಮ್ಮ ಗುರವ್ವಕ್ಕನ ಮನಿ ಇದೇನ ಅಂತ ಯಾರನ್ನೋ ಕೇಳ್ತಾರ, ಹನುಮ ಗಾಬರಿಯಿಂದ ಹೊರಗ ಓಡಿ ಬರ್ತಾನ. ಗಂಡಸು, ಹೆಂಗಸು ಮನಿಯೊಳಗ ಬರುವರು, ಮುದಕಿ ಖುಷಿಯಿಂದ ಪ್ರಾಣ ಬಿಡುವಳು, ಹನುಮ ಗಾಬರಿಯಿಂದ ಬಂದೋರನ್ನ ನೋಡುವನು, ಬಂದ ಗಂಡಸು ಗೊರಜ್ಜಿ ಹತ್ರ ಕುಂತು ಅಳುವನು ಹೆಂಗಸು ಈಗಿದ್ಯಲ್ಲೆ ಯಕ್ಕ ಅಂದ್ಕೊಂತ ಸಾಮಾನ ಕಾಳನ್ನ ಕೂಡಿ ಹಾಕುವಳು. ಹನಮ ದುರಗುಟ್ಟಿ ನೋಡುವನು, ದೀಪ ಆರ್ತಾ ಹೋಗುವುದು, ಅಳು ಅಷ್ಟೇ ಕೇಳುವುದು. ಹನಮ ಅವರ ಮನಿಗ ಹೋಗುವನು)

ಹೆಂಗಸು : ನಮಗೇನು ಸುದ್ದಿನೆ ಇದ್ದೆಲ್ಲೆ ತಾಯಿ.

(ಸಾಮಾನು ದುಂಡಗ ಮಾಡುವಳು)

ಸನ್ನಿವೇಶ -೩

(ದೀಪ ಹತ್ತಿಕೊಂಡಾಗ ಮುದುಕಿ ಹೆಣ ಅಲ್ಲೆ ಬಿದ್ದಿರುವುದು ಸುವಾಲಿ ಎದಿ ಎದಿ ಬಡ್ಕೊಂಡು ಅಳುವಳು. ಮತ್ತೊಬ್ಬ ಹೆಂಗಸು ಇಡೀ ಮನಿಯಾನ ಸಾಮಾನುಗಳನ್ನು ಬಾಚಿ ಬಳದು ಗಂಟು ಕಟ್ಟುವಳು. ಸುವಾಲಿಗೆ ಹೊಟ್ಟೆಯೊಳಗ ಸಂಕಟ ಎದ್ದು ಆಕಡೆ ಈ ಕಡೆ ನೋಡುವಳು ಹನಮ ಲಚಮ ಒಂದು ಕಡೀಗ ಕೂಡುವರು)

ಸುವಾಲಿ : (ನೋಡಿ ನೋಡಿ ಬ್ಯಾಸತ್ತು, ಎಲ್ಲಿತ್ತೊ ಸಿಟ್ಟ) ಎ, ಬೋಸುಡಿ, ಇಟದಿನ ಎಲ್ಲಿದ್ದೆ, ಇವತ್ತ ಬಂದಾಕಿನ ಇದ್ದ ಬಿದ್ದದ್ದನ್ನ ಬಾಚಿ ಬಳ್ಕೊಳ್ಳಾಕ ಹತ್ತಿಯಲ್ಲ (ಅಂದವಳೆ ಕೈಯೊಳಗಿನ ಸಾಮಾನು ಕಸಿದು ಕೊಳ್ಳುವಳು)

ಹೆಂಗಸು : (ಅನಿರೀಕ್ಷಿತವಾಗಿ ಬಂದ ಮಾತುಗಳನ್ನು ಎದುರಿಸಾಕ ಆಗದೆ) ಏಯ್ ಸುಮ್ಕಿರವ್ವ, ನೀ ಯಾರು ಕೇಳಾಕ.

ಸುವಾಲಿ : ನೀ ಏನ ಸಾಕಿದಾಕಿ ಏನೆ ಬೇವರ್ಸಿ ಮುಂಡೆ, ಇಟದಿನ ಎಲ್ಲಿ ಹೋಗಿದ್ದಿ. ಹಾಸಗಿ ಹಿಡದು ನಾಕ ವರ್ಷ ಆದ್ರೂ ಒಂದ ದಿನ ನಿಪ್ಪ ಆಗದಾಕಿ ಇದ್ದಕ್ಕಿದ್ದಂಗ ಇವತ್ತ ಹ್ಯಾಂಗ ನೆಪ್ಪಾದ್ಲು. (ಕೈಯಾನ ಗಂಟ ಕಸ್ಕೊಂಡು ಚೆಲ್ಲುವಳು, ಆಕಿ ಹುಡಕ್ತಿದ್ದ ಸೀರಿ ಕಂಡಂಗ ಆಗಿ ಸೀರಿ ತಗೊಂಡು ಬಗಲಾಗ ಇಟ್ಕೊಳ್ಳುವಳು)

ಗಂಡಸು : ಏಯ್ ಯಾರವ್ವ ನೀನು? ಗುರುವ್ವಕ್ಕ ನನ್ನ ಒಡಹುಟ್ಟಿದಾಕಿ. ಏನೋ ನಮ್ಮ ಪಡಿಪಾಟಲು ಬರಬೇಕಂತ ಎಷ್ಟೋ ದಿನಗಳಿಂದ ಪ್ರಯತ್ನ ಮಾಡ್ತಿದ್ವಿ, ಆಗಿರಲಿಲ್ಲ, ಇವತ್ತೆ ಬಂದ್ವಿ

ಸುವಾಲಿ : ನಿಮ್ಮಕ್ಕ ಇವತ್ತ ನೆಪ್ಪಾದ್ಲೇನೋ ಗಂಡ್ಸ.

ಲಚಮ : ಎ, ನಿಂಗ್ಯಾಕ ಬೇಕು, ಆವನು ಆಕಿ ಸಂಬಂಧಿ ಅಂತಾನ ನಡಿ ಮನೀಗ.

ಸುವಾಲಿ : ನೀ ಸುಮ್ಕಿರು, ನಾಕ ವರ್ಷದ ಕಾಲ ಗಂಜಿ ಹಾಕಿ ಸಾಕದೊಳು ನಾನು, ಈಗ ಬಂದ ಬಿಟ್ರು, ಸಾಮಾನ ತಗೊಳಾಕ.

ಹೆಂಗಸು : (ಸುವಾಲಿ ಹತ್ರ ಬಂದವಳೆ ಹಿಡ್ಕೊಂಡಿದ ಸೀರಿಗ ಕೈ ಹಚ್ಚಿ) ಏ, ಗೊರವ್ವನ ಹೊಸ ಸೀರಿಗ ಕೈ ಹಾಕಿಯಲ್ಲೇ, ನನ್ನ ಸೌತಿ, ಏನ ತಿಳಿಯದ ಮುದುಕಿಗ್ಗ ಮೋಸ ಮಾಡಿ ಆಕಿ ಸಾಮಾನ ತಗೊಂಡ ಹೋಗಿ ಇಟ್ಕೊಂಡಿರೋದ ಅಲ್ದ ಈಗ ಸಿರಿಗ ಕೈ ಹಚ್ಚಿ ತತ್ತಾರೆ. (ಕೊಸರಾಡುವರು)

ಸುವಾಲಿ : (ಎಷ್ಟೊ ದಿನಗಳಿಂದ ಮನಸ ಕೆಡಿಸಿದ್ದ ಗೊರಜ್ಜಿ ಹೊಸಸೀರಿ ಸಿಕ್ಕಿದಕ್ಕ, ಬಿಡಬಾರದು ಅನ್ನೋ ಪ್ರತಿಜ್ಞೆ ಮಾಡಿದವಳಂಗೆ) ಏಯ್, ಹೋಗಲೆ ಲೌಡಿ, ಕಂಡೋರ ಗಂಟೀಗ ಆಶಿ ಪಟ್ಟು ಬೇವರ್ಸಿ ಹಂಗ ಓಡಿ ಬಂದಾಕಿ, ನನಗ ಹೇಳ್ತಿ. (ಸೀರಿಯನ್ನ ಮತ್ತೊಂದಿಷ್ಟು ಗಟ್ಟಿಯಾಗಿ ಹಿಡಿಯುವಳು)

ಗಂಡಸು : (ಸುವಾಲಿ ಹತ್ರ ಬಂದು) ಬಿಡವ್ವ ಕೈನಾ, ನೀ ಏನಾಗಬೇಕು ನಮಗ. ಹೋಗ್ಲಿ ಮುದುಕಿಗೆ ಏನಾಗಬೇಕು. ಪಕ್ಕದ ಮನಿಯೋಳು ಅದು ಆಕಿ ಜಾಗದಾಗ ಮನಿಕಟ್ಕೊಂಡು, ಅಸರಕ ಬ್ಯಾಸರಕ್ಕ ಚಾ ಕೊಟ್ಟಿದ್ದೀಯಾ ಅಷ್ಟಕ್ಕ ನೀ ವಾರಸು ಆಗಾಕ ಆದೀತೇನು ಇನ್ನು ಕೆಲ್ಸ ಬಹಳ ಐತಿ ಬಿಡು.

ಲಚಮ : ಏ, ಯಾವೂರ ನಿಂದು, ನಾವು ಉಪಾಸಿದ್ರು, ಮುದುಕಿಗ ಉಣ್ಣಾಕ ಇಟ್ಟೇವಿ. ಬಂದ ಬಿಟ್ಟ, ಈಗ ಸಂಬಂಧ ಜೋಡಿಸಾಕ.

ಹೆಂಗಸು : (ಲಚಮನ ತಾಗಬಂದಾಕೀನ) ಯಾಕೋ ಗಂಡಸ, ಇಡೀ ಮನೀನ ಬಳ್ಕೊಂಡ ಹಾಕ್ಕೊಂಡಿರೋದ ಸಾಲದೇನು? ಬಂದ ಬಿಟ್ಟ ನಡಕ್ಕ ಮಾತಾಡಾಕ. (ಹನಮನ ಮಾರಿ ನೋಡ್ತಾ ನಿಲ್ಲುವಳು)

ಸುವಾಲಿ : ನಿನ್ನ ಗಂಡಗ ಮಾತಾಡ್ತಿ ಏನೆ? (ಆಕಿ ಕೂದ್ಲ ಹಿಡದು ಜಗ್ಗುವಳು)

ಹೆಂಗಸು : ಬಿಡೆ ಸೀರಿನಾ, (ಸೆರಗಿಗ ಕೈಹಾಕಿದ್ಲೆ)

ಸುವಾಲಿ : ಬಿಡಂಗಿಲ್ಲೆ, ನನ್ನ ಸೌತಿ (ಅಂತ ಜೋರಾಗಿ ಜಗ್ಗುವಳು) ಬಿಡ್ತಿ ಇಲ್ಲೆ ಲೌಡಿ, (ಸೀರಿಯನ್ನ ಮತ್ತೊಂದ ಕಡಿಯಿಂದ ಜೋರಾಗಿ ಜಗ್ಗುವಳು ಇಬ್ಬರ ಎಳತಕ್ಕ ಸೀರಿ ಹರಿಯುವುದು)

ಸುವಾಲಿ : (ದಿನ ತನ್ನ ಕನಸಿನೊಳಗ ಬರ್ತಿದ್ದ ಸೀರಿ ಹರಿದ ಹೋಗಿದ್ದ ಕಂಡವಳ ಕಣ್ಣು ಕೆಂಪಗ ಮಾಡಿಕೊಂಡು ಕೂದ್ಲ ಕೆದರಿ) ಏ, ಬೇವರ್ಸಿ ಬಿಕನಾಸಿ, ಹರದ ಬಿಟ್ಟೆಯಲ್ಲೆ ನನ್ನ ಸೀರಿ. ನಿನ್ನ ತಾಳಿ ಹರದ ಹೋಗ್ಲಿ, ನಿನ್ನ ಕದಕಟ್ಲಿ. ನಿನ್ನ ಹೆಣ ಎತ್ಲಿ, (ಮೈಮಾಲ ದೆವ್ವ ಬಂದೋಳಂತೆ ಸೀರಿಯನ್ನ ಪರಪರಾಂತ ಹರದು, ಮುಂದಿದ್ದ ಹೆಂಗಸಿಗ ದಬದಬಹೇರಿ, ತಡಿಯಾಕಬಂದ ಲಚಮನ ದಬ್ಬಿ ಬೀಳಿಸಿ, ಹೆಂಗಸಿನ ಗಂಡನನ್ನ ದಬ್ಬಿ ಗಾಳಿಯಂತೆ ಓಡಿ) ಹೊತಪ್ಪೋ ಸೀರಿ... (ಓಡುವಳು)

ದೃಶ್ಯ ಮೂರು

ಸನ್ನಿವೇಶ - ೧

(ಮತ್ತೆ ದೀಪ, ನಡುವೆ ಮೂವರು, ಒಂದೊಂದು ಕಡೀಗ ಮಾರಿ ಮಾಡಿಕೊಂಡು ಕುಂತಿರುವಳು. ಇಬ್ಬರೂ ಅಸಣು ನನ್ನ ಒತ್ತಾಯಿಸುವರು)

ಅಸಣು : ನಾನು ಏನೋ ಅಂದ್ಕೊಂಡಿದ್ದೆ. ನಿನ್ನ ಬದುಕು ನನ್ನ ಬದುಕಿಗಿಂತ ಏನೂ ಭಿನ್ನ ಇಲ್ಲಾ ಅನ್ನು.

ಸುವಾಲಿ : ಅಂದ್ರ ನಿನ್ನ ಜೀವನಾನು ನನ್ನಂಗೆ ಐತಿ ಅಂದಂಗಾತ ಬಿಡು.

ಖೂನ : ಅವನಷ್ಟೆ ಅಲ್ಲಾ, ನಮ್ಮಂತ ಎಷ್ಟೋ ಮಂದಿ ಬದುಕು ಹಂಗೆ. ಒಂದ ನಿರ್ಧಿಷ್ಟತೆ ಅನ್ನೋದಿಲ್ಲಾ, ಒಂದ ಅರ್ಥದಾಗ ಹೇಳಾಕಂದ್ರ ಅದಕ್ಕ ಅರ್ಥಾನೆ ಇಲ್ಲಾ. ಅಸಣು ನೀ ನಿಂದ ಸುರುಮಾಡು.

ಅಸಣು : ನೀಯಾಕ ಹೇಳ ಬಾರ್ದು.

ಖೂನ : ನಾನು ಕಡೀಗ ಹೇಳ್ತೀನಿ, ನೀ ಹೇಳು.

ಸುವಾಲಿ : ನೀವು ಮತ್ತ ಜಗಳಕ್ಕ ನಿಲ್ಲಬ್ಯಾಡ್ರಿ. ಗುದ್ದಾಡಿ ಏನೂ ಸಾಧಿಸೋದಿಲ್ಲಾ. ಈ ವ್ಯವಸ್ಥೆಯನ್ನ ಒಪ್ಕೊಂಡವ, ಇವತ್ತ ನಮ್ಮ ತಲಿಮ್ಯಾಲ ಮೆಣಸು ಅರಿಯಾಕ ಹತ್ಯಾನ.

ಖೂನ : ಬರೋಬರಿ ಹೇಳ್ದೆ. ಸುಮ್ಮನಾಗು.

ಅಸಣು : (ಒಂದ ಕಡೀಗ ಹೋಗಿ ನಿಂತು ತನ್ನ ಕತಿಯನ್ನ ಆರಂಭ ಮಾಡುವನು) ಅದೊಂದು ಭೀಕರ ಸನ್ನಿವೇಶ. ಅವತ್ತು... (ಹಾಡು, ಯಾರಿಲ್ಲವೋ.....) (ದೀಪ ಹತ್ತಿಕೊಂಡಾಗ ಒಂದಿಷ್ಟು ಮಂದಿ ಒಂದೇ ಕಡೀಗ ನಿಂತು ಚರ್ಚಿಸುತ್ತಿರುವರು. ಜಮೀನ್ದಾರನ ಹೊಲ್ದಾಗ ಹೆಣ ಹುಗಿದ ಮ್ಯಾಲ ಒಬ್ಬರಿಗೊಬ್ಬರು ಅಂಜುತ್ತಾ)

ಅಸಣು : (ನೊಂದುಕೊಂಡು) ಸತ್ತ ನಮ್ಮಪ್ಪನ ಹೆಣ ಹುಗಿಯಾಕ ಜಾಗ ಇಲ್ಲದ ಸ್ಥಿತಿ.

ಕೋಟಿ : ಈ ದೇಹ ಬಿಟ್ಟು ನಮ್ಮದಂತ ಹೇಳ್ಕೊಳ್ಳಾಕ ನಮ್ಮ ತಾವ ಏನೈತಿ. (ಅವರೆಲ್ಲರ ಹತ್ತ ಹೋಗಿ ಪ್ರತಿಯೊಬ್ಬರಿಗೂ ತಟ್ಟುವಂತೆ)

ಕೊರಮ : ನಾವಿಲ್ಲಿ ಬಂದಿರೋದೆ ಮತ್ತೊಬ್ಬರ ಆಳ ಆಗಿ ದುಡಿಯಾಕ. (ಸಿಟ್ಟಿನಿಂದ) ಹಾಳ ಬದುಕು. ದುಡಿಯೋದ ಒಂದನ್ನ ಬಿಟ್ಟು ಏನೈತಿ ನಮ್ಮ ಹತ್ರ. ಸ್ವಂತದಂತೇಳಿ, ಜಮೀನು, ಮನಿ, ಏನು?

ಅಸಣು : (ವಿಷಾದದಿಂದ) ಎರಡು ರಾತ್ರಿಗಳನ್ನ ನುಂಗಿ ಹಾಕಿದ ಆ ಸೂರ್ಯ. ಆದ್ರ ನಮ್ಮ ಕೊರತೆಯನ್ನ ಯಾರ ಕಮ್ಮಿ ಮಾಡ್ಯಾರು. ಪ್ರತಿ ಹಗಲಿಗೊಂದು ರಾತ್ರಿ ಐತಿ, ಪ್ರತಿ ರಾತ್ರಿಗೊಂದು ಹಗಲು ನಮಗ ಏನೈತಿ?

ಕೋಟಿ : (ಅವರಿಬ್ಬರ ಹತ್ತಿರ ಹೋಗಿ) ಅವೆಲ್ಲಾ ಇರ್ಲಿ, ಹಾಳ ಮನಿ ಸಾವುಕಾರಗ ಸುದ್ದಿ ತಿಳಿದ್ರ ಏನಾದೀತು ವಿಚಾರ ಮಾಡ್ರಿ.

ಕೊರಮ : ಹೆದರೋದು ಯಾಕ? (ದೊಡ್ಡ ಧೈರ್ಯವಂತನಂತೆ ನಟನೆ ಮಾಡ್ತಾ) ನಮಹತ್ರ ಹೆಣ ಹೂಳಾಕ ಜಾಗ ಇರ್ಲಿಲ್ಲಾ ಒಡೆಯಾ, ಒಂಚೂರು ಜವುಗು ಜಾಗೇವಿತ್ತು. ಅದ್ರಾಗ ಹುಗದೇವಿ. ಪಾಪಿ ಪರದೇಶಿಗಳು ಎಲ್ಲಿಗ ಹೋಗಾಕು ಅಂತ ಕೇಳೋಣ.

ಅಸಣು : ಹೌದು, ಈ ದೊಡ್ಡ ಜನರ ಹೆಣಗಳು ಮಣ್ಣಾಗ ಕೊಳಿತಾವೋ ಇಲ್ಲೋ.

ಕೋಟಿ : ಸತ್ತ ಮುಕಳಿ ಎತ್ತಬಿದ್ರೇನು, ಯಾರ ಉಳದಾರು ಈ ಭೂಮಿ ಮ್ಯಾಲ ಎಲ್ಲಾ, ಕೊಳತು ಹೊಕ್ಕಾರ. ಭೂಮಿ ಮ್ಯಾಲ ಇರೋಮಟಾನೂ ಹಂಗೆ. ದೊಡ್ಡೋನು ಅನ್ನೋ ದಿಮಾಕು.

ಅಸಣು : ಹಂಗ್ಯಾಕ ಅಂತೀನಿ, ಬದುಕಿದಾಗ ನಮ್ಮೆಲ್ಲರಿಗಿಂತ ಬ್ಯಾರೇನ ಇರ್ತಾರ. ಅದೇನ ಸಾವುಕಾರಕಿ, ಅದೇನು ದರ್ಪ. ನಮ್ಮಂತೋರು ಅವರ ಕಾಲಾನ ಕಸ. ನಾವು ಅದೇನ ತಪ್ಪು ಮಾಡಿದ್ವಿ

ಕೋಟಿ : ನಾವು ಬಡವರಾಗಿ ಹುಟ್ಟಿದ್ದೆ ತಪ್ಪು.

ಕೊರಮ : ಎ, ಹಂಗ್ಯಾಕಂತಿ. ಹುಟ್ಟೋದನ್ನ ಕೇಳಿ ಪಡೆಯೋದಿಲ್ಲಾ. ಭೂಮಿ ಮ್ಯಾಲ ಮನುಷ್ಯನಾಗಿ ಬಂದದ್ದೆ ಸಾಕ ಅನ್ನು.

ಅಸಣು : ಅದೇನ ಮನುಷ್ಯನೊ ಏನೋ, ಹುಟುತ್ಲೆ ಹೊಟ್ಟೆ ಬೆನ್ನಿಗ ಅಂಟಿಸಿಕೊಂಡು ಹುಟ್ಟ, ಅದನ್ನ ತುಂಬಿಕೊಳ್ಳಾಕ ಇಡಿಜೀವನಾನೆ ಕಳ್ಕೊಂಡು ಸತ್ತಾಗ ಹುಗಿಯಾಕ ನೆಲಾ ಇಲ್ದಂಗ ನಾಯಿನರಿ ಪಾಲಾಗೋದು, ಇಂಥ ಜನ್ಮ ಯಾರಿಗಬೇಕು?

ಕೋಟಿ : ಇಲ್ಲಿಗ ಮೂರು ರಾತ್ರಿ ಕಳದಂಗಾತು. ನಿಮ್ಮಪ್ಪನ ಹೆಣ ಹುಗದು. ಹೆಚ್ಚು ಕಮ್ಮಿ ಕಾಲಭಾಗ ಕೊಳತಿರಬಹುದು ಸಾವುಕಾರ ಬಂದ್ರ...

ಅಸಣು : (ಅನುಮಾನದಿಂದ) ಅವನೇನು ಮಾಡಂಗಿಲ್ಲಾ ಅಂತಿ, ಅವನು ಬಿಟ್ರ ಅವನ ನಾಯಿ ಐತಲ್ಲಾ ರಾಕ್ಷಸದಂತೋದು. ಮಣ್ಣಗುಡ್ಡೆ ಕಾಣ್ತಂದ್ರೆ ಕೆಬರಿ ಕೆಬರಿ ತೋರಿಸಿಬಿಡತೈತಿ. ಅವನ ನಾಯಿನು ಅವನಷ್ಟೆ ಕೆಟ್ಟದ್ದು.

ಕೋಟಿ : ನಾವು ಏನ ಅನ್ಕೊಂಡ್ರ ಏನಾಗಬೇಕಂತ ಐತಿ ಅದು ಆಗತೈತಿ. ಅಸಣು - ಕೊರಮ್ಮ ನೀವೇನು ಕಾಳಜಿ ಮಾಡಬ್ಯಾಡ್ರಿ. ಈ ಬದುಕೆಹಿಂಗ್ಯೆಲ್ಲಾ ಮದ್ಲೆ ನಿರ್ಧಾರ ಅದೋರಗತಿ,ಇಂಥ ಕಾಲದಾಗ ಹಿಂಗೆ ಆಗಬೇಕು ಅಂತೇಳಿ ಇರುತ್ತೆ.

ಕೊರಮ : ಮುಚ್ಕೊಬಾಯಿ, ಬಂದಬಿಟ್ಟ, ಘನಪಂಡಿತ ನೀನು. ಚುಕ್ಕಿ ಚಂದ್ರಮನ್ನ ಓದಿ ಲೆಕ್ಕಾಚಾರ ಮಾಡಿ ಸುಳ್ಳು ಹೇಳೋ ಪಂಡಿತರಂತೆ ಹೇಳಾಕ. ಅವನ್ನ ಯಾರ ನಂಬತಾರ, ಹಿಂಗೆಲ್ಲಾ ಆಗೋದಿದ್ರ ಜಗತ್ತೆ ಉಲ್ಟಾ ನಿಲ್ಲತಿತ್ತು. ನಮಗ ಆಗದ್ದನ್ನ ಯಾಕ ವಿಚಾರ ಮಾಡಿ ತಲಿಹಾಳ ಮಾಡ್ಕೊಬೇಕು.

ಕೋಟಿ : ಸುಮ್ಮನಿರಪ್ಪ, ನೀಮುದ್ಲೆ ಅಪನಂಬಕಿ ಮನುಷ್ಯ ಯಾರನ್ನೂ ನಂಬೋನಲ್ಲಾ.

ಅಸಣು : (ಇಬ್ಬರನ್ನೂ ಗದರಿಸಿ) ಎ, ಸುಮ್ಮಕಿರ್ರಿ. ಇಡೀ ಜಗತ್ತಿನ್ಯಾಗಿನ ಮನುಷ್ಯನ ಕತೀನ ಇದು. ಯಾರನ್ನೂ ಯಾರು ನಂಬೋದಿಲ್ಲಾ. ನಾನು ನೀನು ಯಾವ ಲೆಕ್ಕ.

ಕೋಟಿ : ನಾವು ಹಿಂಗ ಪರದಾಡೋದಕ್ಕಿಂತ ಹೆಣಗಳನ್ನ ಒಯ್ದು ಆ ಕೊಕ್ಕರೆ ಹಳ್ಳದಾಗ ಬಿಸಾಕಿ ಬಂದಿದ್ರ ಪಾಡಿತ್ತು. (ಒಬ್ಬ ಮನುಷ್ಯ ಓಡಿ ಬರುವನು ಸುದ್ದಿ ಮುಟ್ಟಿಸಾಕ)

ಒಬ್ಬ : ಎ ಅಸಣು, ನಿಮ್ಮಪ್ಪನ ಹುಗದಿರೋದು ಸಾವುಕಾರ್ರಿಗ ಗೊತ್ತಾಗ್ಯತಿ, ನಾಳೆ ಹಟ್ಟಿಕಡೀಗ ಬರ್ತಾರಂತ (ಅವರ ಉತ್ತರಕ್ಕೂ ಕಾಯದೆ ಓಡುವನು)

ಅಸಣು : ಹೌದ, (ಹೆದರುತ್ತಾ) ಏನ ಮಾಡೋದು.

ಕೋಟಿ : ನೀ ಹೆದರಬ್ಯಾಡ ನಾವು ನಿನ್ನ ಕೂಡ ಇರತೀವಿ.

ಕೊರಮ : ಎಲ್ಲಿವರಿಗೆ ಇವರ ದಬ್ಬಾಳಿಕೆ ಸಹಿಸಿಕೊಳ್ಳೊದು? (ಅಲ್ಲೋ, ಈ ಊರಾಗ ಬದುಕಿರೋ ಎಲ್ಲಾಮಂದಿಗೂ ಸತ್ತಮ್ಯಾಲ ಉಳಾಕ ನೆಲ ಐತಿ. ನಮ್ಮ ಹಟ್ಟಿ ಮಂದಿ ಸತ್ರ ಏನ ಮಾಡೋದು. ನಾವು ಮನುಷ್ಯರಾ ನನಗ್ಯಾಕೊ ನಮ್ಮ ಮ್ಯಾಲೆ ಅನುಮಾನ ಬರಾಕ ಹತ್ತತಿ).

ಕೋಟಿ : ಅವರೆಲ್ಲಾ ಮೇಲಿನೋರು. ಹಂಗಂತ ಕೇಳ್ಕೊಂಡ ಬಂದಾರ ನಮಗ ಏನೈತಿ ಹೇಳು. (ಬೇಸರದಿಂದ ಒಂದು ಮೂಲಿಗೆ ಹೋಗುವನು)

ಕೊರಮ : ಅದೆಲ್ಲಾ ಬಿಡ್ರಿ. ಅವೆಲ್ಲಾ ಹಳಿ ಕತಿಗಳು ನಾಳೆ ಬೆಳಕ ಹರಿತಂದ್ರ ಚರ್ಮ ಸುಲಿಯೋ ಹಂಗ ಹೊಡ್ತಾ ತಿಂದು ನಾಯಿ ಥೂ ಬಿಡಿಸಿಕೊಂಡು ಫಜೀತಿ ಪಡೋದಕ್ಕಿಂತ ಸಾಯೋದ ಮೇಲು.

ಅಸಣು : ನಾಳೆ, ಬರ್ಲಿ, ಇವತ್ತರಾತ್ರಿ ಕಳೆಯೋದ ನೋಡ್ರಿ.

ಕೋಟಿ : (ನಿರಾಸೆಯಿಂದ) ಯಾಕ, ನಾಳೆ ಏನಾರು....?

ಕೊರಮ : ನಮ್ಮ ಬದುಕಿನ್ಯಾಗ, ಧಿಡೀರ ಬದ್ಲಾವಣೆ ಅನ್ನೋದೆ ಇಲ್ಲಾ.

ಅಸಣು : ನೋಡ್ರೋ ನಾಳೆ ಬರೋದನ್ನ ಈಗ ನೆನಪು ಮಾಡಿಕೊಂಡು ಈ ಘಳಿಗೆಯನ್ನು ಹಾಳಮಾಡ್ಕೊಂಡು ನಾಳೆಯನ್ನು ಹಾಳ ಮಾಡಿಕೊಳ್ಳೋದಕ್ಕಿಂತ ಇವತ್ತಾರು ಆರಾಮದಿಂದ ಇದ್ದಬಿಡೋಣ.

(ಅವರಿಬ್ಬರೂ ಹೂಂ ಗುಟ್ಟುವರು. ತೆರೆ ಬೀಳುವುದು)

ಸನ್ನಿವೇಶ -೨

(ಶ್ರೀಮಂತ ವ್ಯಕ್ತಿಯೊಬ್ಬ, ತನ್ನ ಅಂಗರಕ್ಷಕರೊಂದಿಗೆ ಹೆಣ ಹೂತ ಜಾಗಕ್ಕ ಬರುವನು. ಅವನ ಹೊಲದಲ್ಲಿ ಹೂತಿರೋ ಹೆಣವನ್ನು ಕಂಡು ಸಿಟ್ಟಿನಿಂದ ಕುದಿಯುವನು. ದೀಪ ಹತ್ತಿದಾಗ ಅತ್ತಿಂದಿತ್ತ ಅಡ್ಡಾಡುವನು. ಆಳುಗಳಿಗೆ ಏನೇನೋ ಹೇಳುವನು.)

ಆಳು : ಒಡೆಯಾ, (ಎಳ್ಕೊಂಡಬಂದಿದ್ದ ಮೂವರನ್ನ ಅವರೆದುರಿಗ ನೂಕಿ) ಹೂತಿದ್ದ ಜಾಗಕ ತಲಿಕೊಟ್ಟು ಮಕ್ಕೊಂಡಿದ್ರು. ಎಳ್ಕೊಂಡ ಬಂದೀವಿ.

ಜಮೀನ್ದಾರ್ ಏನು ಸೂಳಿಮಕ್ಕಳ್ರ, ನನ್ನ ಹೊಲ್ದಾಗ ನನಗ ಕೇಳ್ದಂಗ ಹೆಣ ಹೂಳೋ ಛಾತಿ ಬಂತೇನ್ರೋ, ಅದನ್ನೇನು

ನಿಮ್ಮಪ್ಪಂದ ಆಸ್ತಿ ಅಂತ ತಿಳ್ಕೊಂಡ್ರೇನು? ಏ ಸರ್ಪ, ಕರ್ಮ, ಹಾಕ್ರಲೇ ಈ ಸೂಳಿಮಕ್ಕಳ್ಗಿಗ, ಒಂದ ಪದರ ಚರ್ಮ ಕಿತ್ತ ಬರಾಕ ನೋಡು ಮೈ ಮಾಲ.

ಅಸಣು : (ಉದ್ದಕ್ಕ ಆತನ ಕಾಲಿಗ ಬೀಳುವನು) ತೆಪ್ಪಾತು ಧಣಿ ನಮ್ಮನ್ನ ಮಾಪ ಮಾಡ್ರಿ. ಇಡೀ ಜೀವನ ನಿಮ್ಮ ಹೊಲ್ದಾಗ ಕಳದು ಸತ್ತಾನ ನಮ್ಮಪ್ಪ. ಅನಾಥ ಹೆಣಾ ಎಲ್ಲಿ ಬಿಸಾಡೋದು ಅಂತ ಜೌಗಿನಂತ ನೆಲ್ದಾಗ ಹೂತಹಾಕಿದ್ವಿ

ಜಮೀನ್ದಾರ : ಮುಚ್ಚಲೇ ಬಾಯಿ, ಜೀವ ಸವಸಿದ್ರ, ಕೂಲಿತಗೊಂಡಾನ. ಬಿಟ್ಟಿಕೆಲ್ಸ ಏನೂ ಮಾಡಿಲ್ಲ.

ಕೊರಮ : ಅನಾಥ ಮಂದಿಗ ನೀವೆ ದೇವರು ಧಣಿ. ಏನೋ ತೆಪ್ಪ ಆಗೈತಿ ಹೊಟ್ಯಾಗ ಹಾಕೊಳ್ರಿ....

ಕೋಟಿ : (ಜಮೀನ್ದಾರಗ ಎದುರು ನಿಂತು) ಅಲ್ಲಾ ನಾವು ಮನುಷ್ಯರೆ, ನಮಗ್ಯಾಕ ಹೆಣ ಹೂಳಾಕ ಜಾಗೇವು ಇಲ್ಲಾಂತ?

ಜಮೀನ್ದಾರ : ಯಾಕೋ ಮಗನ, ಮೂಕಳಾಗ ಹಲ್ಲ ಬಂದಾವೇನು? ನನ ಎದುರಿಗ ತಲಿ ಎತ್ತಿ ಮಾತಾಡೋ ತಾಕತ್ತು ಬಂತೇನು?

ಅಸಣು : (ಕೋಟಿ ಕಡೀಗ ಹೋಗಿ) ನೀ ಚರ್ಮ ಸುಲಸ್ತೀಯಪ್ಪ ನಮದು. (ಜಮೀನ್ದಾರನ ಹತ್ರ) ತೆಪ್ಪಾತ್ರಿಯಪ್ಪ, ಹಿಂದಮುಂದ ಯಾರು ದಿಕ್ಕಿಲ್ಲದ ಮಂದಿ ಬೆಳದದ್ದು ನಿಮ್ಮ ಆಶ್ರಯದಾಗೆ, ನೀವ ದಿಕ್ಕು.

ಜಮೀನ್ದಾರ : ಎಳೀರಿ, ಈ ಮಗನ್ನ, ಮರಕ್ಕ ಕಟ್ಟಿಹಾಕಿ ನಾಕ ಬಾರಿಸ್ರಿ.

ಕೊರಮ : ಯಪ್ಪ ಧಣಿ ಎಲ್ಲಿಮಟ ನಮ್ಮ ಚರ್ಮ ಸುಲಿಯೋದು. ಈಗಾರು ನಮ್ಮನ್ನ ಬದುಕಲಿಕ್ಕ ಬಿಡ್ರಿ. ಜಮೀನಿಲ್ಲಾ, ಮನಿ ಇಲ್ಲಾ, ನಮಗ ಬದುಕು ಅನ್ನೋದೆ ಇಲ್ಲಾ. ನಿಮ್ಮ ಹೊಲದಾಗ ದುಡಿಬೇಕು. ಉಣ್ಣಬೇಕು. ನೀವ ಹಿಂಗ ಹೇಳಿದ್ರ ಹ್ಯಾಂಗ.

ಜಮೀನ್ದಾರ : ದುಡಿಯೋರಿಗೆ ಉಣ್ಣಾಕ ಕಾಳಕೊಡ್ತೀವಿ, ಹಂಗಂತ, ಇರಾಕ ಜಗೇವು ನೀವು ಸತ್ತಾಗ ನಿಮ್ಮ ಹೆಣ ಹುಗಿಯಾಕ ಹೊಲ್ದಾಗ ಜಾಗ ಕೊಡ್ರಿ ಅಂದ್ರ ಆದೀತೇನು? ನನ್ನ ಜಮೀನಿರೋದು ನನ್ನ ವಂಶ ಉದ್ಧಾರಕ್ಕೆ ವಿನಃ ನಿಮಗ ಉಪಕಾರ ಮಾಡಿ ನಿಮ್ಮ ಹೆಣಗಳನ್ನ ಉಳಾಕಲ್ಲಾ.

ಕೊರಮ : ಏನೋ ಧಣಿಯೋರ, ತೆಪ್ಪಮಾಡಿ ಬಿಟ್ವೇವಿ.

ಜಮೀನ್ದಾರ : ಏ, ಏನ ನೋಡಾಕತ್ತಿ, ಎಳ್ಕೊಂಡ ಹೋಗಿ ಕಟ್ಟಿಹಾಕ್ರಿ ಇವರನ್ನ ನಾಕ ಬಿಗದು ಎಳ್ಕೊಂಡಬರ್‍ರಿ...ಇತ್ಲಾಗ. (ಮೂವರನ್ನ ಕಟ್ಟಿ ಹೊಡೆಯುವರು) ಹಾಡು (ಆಕೃತಿ still) (ಜಮೀನ್ದಾರನಗುವನು, ದೊಡ್ಡ ಗೌಡರ ಬಾಗಿಲಿಗೆ ನಮ್ಮ ಮೂಳೆಯ ತೋರಣ...)

ಕೊರಮ : (ಕೀರಲು ದನಿಯೊಳಗ) ಏ ನಾಯಿ ಸೂಳಿಮಕ್ಕಳ್ರ. ಜಮೀನ್ದಾರ ಹಾಕೋ ಕೂಳಿಗ ಬೊಗಳೋದು ಆಟೆ ಕಲ್ತೀರಿ ಏನ್ರೋ. ಇಡಿ ಜೀವನಾನೆ ನಿಮ್ಮ ಜಮೀನ್ದಾರನ ಹೊಲದಾಗ ಜೀತಕಿಟ್ಟು ಸತ್ತ ಮುದುಕನ ಹೆಣಕ್ಕ ಯಾಕ್ರೋ ಗಂಟ ಬಿದ್ದೀರಿ.

ಆಳು : ಹಾಕ್ರಲೇ ಅವನಿಗ, ಇಲ್ಲಿ ಏನಿದ್ರು, ನಮ್ಮ ಧಣಿಗಳದ್ದೆ ನಡಿಯೋದು. ಅವರ ಮಾತ ಮೀರಿದವನಿಗ ಸಾವು, ಬಾಯಿ ಮುಚ್ಕೊಂಡು ಹೇಳಿದಷ್ಟು ಕೆಲ್ಸ ನೋಡ್ರಿ. (ಮೂವರ ಕೈಯಲ್ಲಿ ಗುದ್ದಲಿ, ಪಿಕಾಸಿ, ಕೊಟ್ಟು ಮಣ್ಣಿನ ರಾಶಿ ಕಡೀಗ ದಬ್ಬುವರು)

ಅಸಣು : (ಸುಮ್ಮನೆ ನಿಂತು ಮಣ್ಣಿನ ರಾಶಿಯನ್ನ ದಿಟ್ಟಿಸಿ ನೋಡುವನು ಶಕ್ತಿಯನೆಲ್ಲಾ ಒಟ್ಟುಗೂಡಿಸಿ ಜೋರಾಗಿ ಚೀರುವನು) ಇದು ಯಾವ ಸೀಮಿನ್ಯಾಯ? ಈ ಭೂಮಿಮ್ಯಾಲ ಮನುಷ್ಯರಾಗಿ ಹುಟ್ಟಿದ್ದು ನಮ್ಮ ತಪ್ಪು, (ಇಡೀ ರಂಗದ ಮ್ಯಾಲೆ ಓಡಾಡುವನು) ಇದ್ದಾಗ ಬದಕಾಕ ಬಿಡ್ಲಿಲ್ಲ. ಸತ್ತಾಗ ಹೆಣ ಹುಗಿಯಾಕ ಜಾಗ ಸಿಗವಲ್ದು. ಹಳ್ಳ ಕೊಳ್ಳ ಕೆರಿಕೊತ್ಲ. ಕಾಡು ಗುಡ್ಡ ಎಲ್ಲ ಇವರವೆ, ನಮ್ಮದೇನೈತಿ? ಒಂದ ಹೆಣ ಹುಗಿಯೋ ಆಟು ಜಾಗ ನಮಗಿಲ್ವಾ?

ಕೋಟಿ : (ಹತ್ರ ಓಡಿ ಬಂದು) ನಿಮ್ಮ ಸಂಬಂಧಿಕ ಅಲ್ದಿದ್ರು, ನಿಮ್ಮಂಗಿರೋ ಮನುಷ್ಯ ಅಂತಾನಾದ್ರು ಕರುಣೆ ತೋರ್‍ಸಿ ನನ್ನೊಡೆಯಾ, ಈ ಬಡಜೀವ ಹುಟ್ಟಿಬರಬಾರದಿತ್ತು. ಇಲ್ಲಿ ಬಂದು ನಾವು ಮಾಡಿದ್ದಾರು ಏನು? ನಿಮ್ಮ ಆಳಾಗಿ ಜೀವ ಸವಸಿದ್ದು.

ಜಮೀನ್ದಾರ : (ಧಿಮಾಕಿನಿಂದ ಆ ಜನರನ್ನ ಕೀಳೆಂದು ನೋಡಿ) ಜಗತ್ತಿನ್ಯಾಗ ಅಂತ ಸಂಬಂಧಗಳಿಗೆ ಅರ್ಥಾನೆ ಇಲ್ಲಾ. ಇವತ್ತ ನಿನಗ ಜಾಗಕೊಟ್ಟೆ ಅಂತ ಇಟ್ಕೊ. ಉಳಿದ ನಿಮ್ಮ ಹಟ್ಟಿ ಮಂದಿ ಸುಮ್ನಬಿಟ್ಟಾರೇನು. ನನ್ನ ಇಡಿ

ಹೊಲಾನೆ ಸ್ಮಶಾನ ಮಾಡಿ ಬಿಟ್ಟಾರು. (ಅವನ ಹತ್ರ ಬಂದು) ತಿಳಿತೇನೋ. ಯಾವಾಗ್ಲೂ, ಅಂತರ ಕಾಯ್ಕೊಬೇಕು.

ಅಸಣು : (ನೋವಿನಿಂದ ಬಾಯಿ ಬಿಡಾಕ ಆಗದೆ) ಅಯ್ಯೋ ಅವ್ವಾ, ನನ್ನ ಯಾಕ ಹುಟ್ಟಿಸಿದೆ.

ಜಮೀನ್ದಾರ : ನನ್ನ ಆಳಾಗಿ ದುಡಿಯಾಕ, ಮತ್ಯಾಕ? (ಅವನ ಕೂದ್ಲ ಹಿಡದು ಎತ್ತಿ) ಒಣಮಾತ ಬ್ಯಾಡ, ಆ ಮುದುಕನ ಹೆಣ ಎಲ್ಲಿ ಹುಗಿದಿರೊ, ಅಲ್ಲಿಂದ ಒಂದ ತಾಸಿನೊಳಗ ಹೆಣ ಕೀಳಬೇಕು. ಆ ಮ್ಯಾಲ, ಸತ್ತ ದನಗಳನ್ನ ಬಿಸಾಡ್ತಿವಲ್ಲಾ ಅಲ್ಲಿಗ ಒಯ್ದು ಬಿಸಾಡಿ ಬಂದು ಬಿಡ್ರಿ. ಪಾಪ, ನಾಯಿ ನರಿಗ ಆಹಾರ ಇಲ್ಲ. (ಸ್ವಲ್ಪ ನಿಂತು) ಎಳ್ಕೊಂಡ ಹೋಗ್ರಿ, ಹೆಣ ಎತ್ತುವರಿಗೆ ಹೊಡಿರಿ. (ಜೋರಾಗಿ ನಗು)

ಆಳು : (ಮಣ್ಣು ರಾಶಿ ಕಡೀಗ ತೋರ್ಸಿ) ಅದೇ ಇರಬೇಕು, ಸುಡಗಾಡು, ಬಿಡ್ರಿ ಅವರನ್ನ. (ಆಳುಗಳು ಮತ್ತು ಆ ಮೂವರ ನಡುವೆ ಘರ್ಷಣೆ ನಡೆಯುವುದು ದೀಪ ಡಿಮ ಆದಂತೆ, ಮೂವರ ಚೀರಾಟ ಹೆಚ್ಚಾಗುವುದು, ಹಟ್ಟಿ ಮಂದಿ ಕತ್ತಲೊಳಗೆ ನಿಂತು ನೋಡುವರು. ಯಾರು ಹತ್ರ ಬರುವುದಿಲ್ಲ.)
ಜಮೀನ್ದಾರ ಘಹ..... ಘಹಿಸಿ ನಗುತ್ತಿದ್ದಾನೆ.

ಜಮೀನ್ದಾರ : ಹೊಡಿರಿ ಸೂಳಿಮಕ್ಕಳನ್ನ, ನನ್ನ ಹೊಲ ಅಂತಂದ್ರ, ಏನಂತ ತಿಳ್ಕೊಂಡಾರ, ನಾಳೆ ಎಲ್ಲಾ ಹೊಲಗಳು ಇವರ ಸಮಾಧಿ ಆದಾವು.

ಅಸಣು : ಯಪ್ಪ.... ಯವ್ವ... ಯಾಕಾರು ನನ್ನ ಈ ಭೂಮಿ ಮ್ಯಾಲ ತಂದ್ರಿ.... ಏನೈತಿಲ್ಲಿ ನಮ್ದು.ಂ ಒಂದ ಊರು ಊರಾಗೊಂದ ಮನೀನ... ಅಡವಿಯೊಳಗ ತುಂಡ ಭೂಮಿನಾ, ಏನು? ಏನು? (ಆಳುಗಳು ಮತ್ತೆ ಹೊಡೆಯುವರು ಒಬ್ಬನ ಚಾಟಿ ಬಿಗಿಯಾಗಿ ಹಿಡಿದುಕೊಳ್ಳುವನು. ಮತ್ತೊಬ್ಬ ಜೋರಾಗಿ ಹೊಡೆಯುವನ ಅವನ ಹೊಡತ ತಾಳಲಾರದೆ ಹಗೆ ಬೀಳುವನು) (ಏಕತಾರಿ ಪದ.... ಯಾರಿಲ್ಲವೋ)

ಸನ್ನಿವೇಶ - ೩

(ಜಮೀನ್ದಾರ, ತನ್ನ ಆಳುಗಳೊಂದಿಗೆ ಪ್ರವೇಶಿಸುವನು. ಆ ಮೂವರ ಮ್ಯಾಲ ಬೆಳಕು ಬೀಳುವುದು. ಪ್ರಜ್ಞೆ ಬಂದವರಂತೆ ಬೆಳಕಿಗೆ ಸ್ಪಂದಿಸುವರು)

ಜಮೀನ್ದಾರ : ಎಳ್ಕೊಂಡ ಬರ್ರಿ, ಅವರನ್ನ...

ಆಳು : ಆಯ್ತು ಧಣಿ.

ಜಮೀನ್ದಾರ : (ದುರಗುಟ್ಟಿ ನೋಡ್ತಾ) (ವಾಸನೆ ಬಂದವರಂತೆ)

ಏನದು ಹೆಣವಾಸನೆ, ಥು... ಏನ್, ನಾರಾಕ ಹತ್ಯನೋ, ಆ ಮುದಿಯಾ ಏನ ಪಾಪ ಮಾಡಿದ್ನೋ.

ಅಸಣು : (ತಲಿ ಎತ್ತಾಕ ತಾಕತ್ತಿಲ್ಲದಿದ್ರು, ಮಾರಿಮ್ಯಾಲ ಮಾಡುವನು)

ಆಳು : ಏನ ನೋಡ್ತಿಯಲೇ, (ಹೆಣಕ ಕಡೀಗ ಕೈ ತೋರ್ಸಿ) ಏನ ನಾರಾಕ ಹತ್ಯನ, ಏಳಪಾಪದೋನು...

ಅಸಣು : (ಸಿಟ್ಟು ತಡಿಯಾಕ ಆಗದೆ) ಏನಂದ್ಯೋ ಬೋಳಿಮಗನೆ ನಾಳೆ ನೀ ಸತ್ತಾಗ ಹಂಗೆ ಇರ್ತೀಯಾ, ನೀ ಮಾಡಿರೊ ಪಾಪಕ ಸಾವು ನಿನ್ನ ಸಮೀಪ ಬರಂಗಿಲ್ಲ.

ಮತ್ತೊಬ್ಬ : ಏ ನಾಲಗಿ ಉದ್ದ ಬಿಡಬ್ಯಾಡ. ಇರೋದನ್ನ ಹೇಳಿದ್ರ, ಉರಿಯಾಕ ಬಿಳಿತಿತೊ ಮಗನ...

ಕೊರಮ : ಬಿಡ್ರಲೇ....ಸಾಯಿಸ್ತಿರೇನ್ರೊ...

(ಅವರ ನಡುವೆ ಜಗಳ)

ಅಸಣು : (ಅವನಪ್ಪನ್ನ ವಿಕಾರಗೊಂಡ ಹೆಣದ ಮುಂದ ಕುತ್ಕೊಂಡು)

ನೋಡಿದೆಯಾ ಅಪ್ಪ, ಮನುಷ್ಯರ ನಡುವೆ ಇರೋ ಅಂತರ, ನಿಂದೆ ಪಾಡು, ಕಣ್ಣು ಮುಚ್ಕೊಂಡು ಮಾತಾಡ್ದೆ ಮಕ್ಕೊಂಡಿಯಾ, ನಾವು ಬದಕ್ತೀವಿ ಅಂದ್ರು ಬದಕಾಕ ಬಿಡ್ತಿಲ್ಲಾ ಈ ಮಂದಿ. (ಸಿಟ್ಟಿಂದ ಮೇಲೆದ್ದು) ಇವರು ಸಾಯೋದಿಲ್ಲಾ? ಈ ಮಂದಿ ಸತ್ತಾಗ ಹೆಣ ಹೊರಾಕ ಯಾರು ಇರಬಾರ್ದು. ಬಿದ್ದ ಬಿದ್ದ ತಾವ ಹುಳ ಬೀಳಬೇಕು.

(ನಿರಾಶೆಯಿಂದ ದುಃಖ) ನಾವು ಬಡವರು ಅನ್ನೋ ಒಂದೇ ಕಾರಣಕ್ಕೆ ನಮಗ ಅವಮಾನ ಮಾಡ್ತಾರ ಈ ಜನ.

ಕೋಟ : ಈ ಭೂಮಿಮ್ಯಾಲ... ಮನುಷ್ಯನ,ಅದ್ರಾಗೂಈ ಬಡಮನುಷ್ಯನ ಮನಸ ತಿಳಿಯೋ ಮಂದಿ ಅದಿರಾ?

ಕೊರಮ : ಎಲ್ಲಿ ತನಕ ನಿಮ್ಮ ದಬ್ಬಾಳಿಕೆ ಇದ್ದೀತು.

ಜಮೀನ್ದಾರ : (ಮೂಗ ಮುಚ್ಚಿಕೊಂಡೆ) ಲೇ, ಕೊಳತಿರೊ ಹೆಣಾನ ಎತ್ತಿ ಬಿಸಾಕಿ ಬರ್ರಿ... ಸೂಳಿಮಗ ಏನ ಕರ್ಮ ಮಾಡಿದ್ನೋ ಗಬ್ಬುವಾಸನಿ. (ತಾಳ್ಮೆ ಕಳ್ಕೊಂಡು ಜಿಗದ ಅವನ ಹತ್ರ ಬಂದು)

ಅಸಣು : ನಿನ್ನಷ್ಟ ಹಲ್ಕ ಕೆಲ್ಸ ಮಾಡಿಲ್ಲ ನಮ್ಮಪ್ಪ. ಬಡತನದಾಗ ಹುಟ್ಟಿದ್ಕ, ನಿನತಾವ ದುಡ್ಡ ದುಡದು ಸತ್ತೆಹ್ವಾದ.

ಜಮೀನ್ದಾರ : ಭಲೇ ಮಗನೆ ಭಲೆ, ನನ್ನೆದುರಿಗೆ ಎದಿಸೆಟಸಿ ಎಗರಾಡೊ ಧೈರ್ಯ ಬಂತ ನಿನಗ (ಕೋಟ ಕೊರಮ ಆಳಿನ ಕೈಯಾನ ಚಾಟಿ ಕಿತ್ಕೊಂಡು ಹೊಡೆಯುವನು .ಅಡ್ಡ ಬರುವನು, ಜಮೀನ್ದಾರ ಹೊಡೆಯುವನು)

ಅಸಣು : (ತಡದಷ್ಟು ಹಿಂಸೆ ಜೋರಾದಕ ತಾಳ್ಮೆ ಗೆಟ್ಟು ಅವನ ಕೈಯಾನ ಚಾಟಿ ಹಿಡದು ಕಸಿದುಕೊಳ್ಳುವನು) ಏ, ನೀ ಸತ್ತಮ್ಯಾಲ ನಿನ್ನ ಹೊರಾಕ ಮಂದಿ ಇರಂಗಿಲೊ ಮುದಿಯಾ,

ಕೋಟ : ಹುಳ ಬಿದ್ದು ಸಾಯ್ತಿಯಾ,

ಜಮೀನ್ದಾರ : ಲೇ ಏನ ಕೇಳಾಕ ಹತ್ತಿರಿ, ಹಿಡಿರಿ, ಕೊಂದಹಾಕ್ರಿ. (ಆಳು - ಮತ್ತ ಮೂವರ ನಡುವೆ ಜಗಳ, ಆಳುಗಳನ್ನ ಹೊಡದು ಕೆಡುವುವರು ಮೂವರು)

ಅಸಣು : ಎಲ್ಲಿ ಮಟ ತಡಿಯೋದು, ನಮ್ಮ ಹೊಟ್ಯಾನ ಸಿಟ್ಟು ರಟ್ಟಿಗ ಬರೋಮಟ. ಇಲ್ಲಿ ಬದುಕಿರೋ ಮಂದಿ ಯಾವತ್ತು ಹಿಂಗ ಆಗೋದಿಲ್ಲಾ. ಸೆಟದ ನಿಂತ್ರ ನೀನು, ನಿನಂತೋರು ದಿಕ್ಕಪಾಲಾಗಿ ಹೊಕ್ಕೀರಿ. ಈಗ ನಿನ್ನ ಸರ್ತಿ, ನಮ್ಮ ಮೈಯಾನ ಚರ್ಮ ಸುಲದಿದ್ದೆ ಅಲ್ಲ ತಗೋ (ಮೂವರು ಹೊಡೆಯುವರು ಜಮೀನ್ದಾರ ಸಾಯೋ ಹಾಗೆ ಚೀರುವನು ಕ್ರಮೇಣ ಧ್ವನಿ ಕಡಿಮೆ ಆದಂತೆ ದೀಪ ಆರುವುದು)

ದೃಶ್ಯ ನಾಲ್ಕು

ಸನ್ನಿವೇಶ -೧

(ಮಂದ ಬೆಳಕು, ಸುವಾಲಿ, ಖೂನ, ಅಸಣು, ಕುಳಿತಿರುವರು, ಅಸಣುನ ಕತಿ ಕೇಳಿ ಮರುಕ ಪಡುವರು.)

ಅಸಣು : ನನ್ನ ಮುಂದಿದ್ದು ಇದೊಂದೆ ದಾರಿ. ಅಲ್ಲಿಂದ ಸೀದಾ ಓಡಿದೆ ಓಡಿದೆ. ಸಾಯಬೇಕು. ಯಾರಿಗೂ ನನ್ನ ಈ ದೇಹ ಸಿಗಬಾರ್ದು, ನನ್ನಂತ ಮತ್ತೊಬ್ಬನಿಗ ಹಿಂಗ ಆಗಬಾರ್ದು.

ಸುವಾಲಿ : ನಾವೆಲ್ಲಾ ಒಂದೇ ನಮೂನಿ ಅದೀವಿ.

ಖೂನ : ಆದ್ರ ನಾನು - ನನ್ನ ಕತಿ ಬ್ಯಾರೆ [redacted].

ಸುವಾಲಿ : ಸುರುಮಾಡು ಹಂಗಾರ. (ದೀಪ ಆರಿದಾಗ)

ಸನ್ನಿವೇಶ - 2

(ಹಸಿದುಕೊಂಡೆ ಕುಳಿತಿರುವ ಅವನು ಹಸಿವು ತಾಳಲಾರದಕ್ಕೆ ಎರಡು ಕಾಲುಗಳನ್ನು ಹೊಟ್ಟೆಯೊಳಗೆ ಎಳ್ಕೊಂಡು ಮಲಗಲು ಹವಣಿಸುವನು. ಕ್ರಿಯೆ ನಡೆಯುತ್ತಿರುವುದು ಒಂದು ರಸ್ತೆಯ ಮೇಲೆ. 20 ವರ್ಷ ವಯಸ್ಸಿನವನಾದ್ರೂ, ನೋಡಾಕ ಮುದುಕನಂತೆ ಕಾಣುವನು. ಯಾರಾದರೂ ಬಂದಾರೆಂದು ಆ ಕಡೆ ಈ ಕಡೆ ನೋಡುವನು. ಏನೋ ಕುತೂಹಲ, ಭರವಸೆ, ಆಶಾವಾದಿತನ. ಒಮ್ಮೆ ನಗುವನು. ಎದ್ದು ನಿಂತು ಅಡ್ಡಾಡುವನು. ಯಾರು ಬರದಿದಕ್ಕೆ ಎದ್ದು ಬಂದು ಮನೆಯ ಮುಂದೆ ಬಂದು ನಿಲ್ಲುವನು.)

ಖೂನ : (ಸ್ವಗತ) ಮನಿ ಏನೋ ಪಾಡೈತಿ, ಒಳಗ ಮಂದಿ ಎಂಥೋರದಾರೊ ಒಂದ ಸಾರಿ ಕೇಳೋ ಹಂಗ ಕೇಳಿ ಬಿಟ್ಟರಾತು. ಸ್ವಾಮಿ ಯಪ್ಪ, ಧನಿ, (ಆ ಕಡೆ ಈ ಕಡೆ ನೋಡಿ) ಅವ್ವಾರ.

ಅಂದಾನ ಶೆಟ್ಟಿ : (ಮನಿಯೊಳಗಿಂದ ಒಬ್ಬ ದಢೂತಿ ಮನುಷ್ಯ ಹೊರಬರುವನು. ಬಾಗಿಲದಾಗ ನಿಂತೋನ ನೋಡದೆ.) ಎ, ಹೋಗಯ್ಯಾ, ಬೆಳಕು ಹರದಿಲ್ಲಾ ಅವಾಗ್ಲೆ ಬಂದಬಿಟ್ಟ, ಕಡದರ ನಾಕ ತುಂಡು ಬೀಳೊ ಹಂಗದಿಯಾ, ಹೋಗು ಹೋಗಿ ಕೆಲ್ಸ ಬಗಸಿ ನೋಡು. ಯಾಕಿಂಗ ಬಿಕ್ಷೆ ಬೇಡಾಕ ಬಂದಿ.

ಖೂನ : ಇಲ್ಲಾ ಧಣಿ. ನಾನು ಬಿಕ್ಷೆ ಬೇಡ್ತಿಲ್ಲಾ (ಅನುಮಾನದಿಂದ ನೋಡಿ) ನಾನೊಬ್ಬ ಅನಾಥ. ಏನಾದರು ದುಡಿಯಾಕ ಕೆಲ್ಸ ಇದ್ರ ಕೊಡ್ರಿ. ಜೀವ ಇರೋ ಮಟಾನು ದುಡಿತೀನಿ.

ಅಂದಾನ ಶೆಟ್ಟಿ : ರಟ್ಟಿಯೊಳಗ ಕಸು ಇಲ್ಲಾ,ನೀ ಏನು ಹ್ವಾರೆ ಮಾಡಿ? (ಅನುಮಾನದಿಂದ ಕೆಳಗಿಂದ ಮೇಲಿನ ಮಟ ನೋಡಿ) ನನ್ನ ತಾಗಿರೋದು ಒಂದೇ ಒಂದು ಕೆಲ್ಸ, ದಿನ ಕಟ್ಟಿಗೆ ಅಡ್ಡೆಯೊಳಗ ಕಟಗಿ ಹೊಡಿಯೋದು, ನೋಡ ಮತ ತಾಕತ್ತಿದ್ರ ಹೂಂ ಅನ್ನು.

ಖೂನ : ಕೆಲ್ಸ ಯಾವದಾದ್ರೇನು ಒಡೆಯಾ, ಈಗ ಸದ್ಯ ನನಗೆ ಹೊಟ್ಟೆ ತುಂಬ ಉಣ್ಣಾಕ ಹಾಕ್ರಿ. ಆ ಮ್ಯಾಲ ಬೇಕಾದ ಕೆಲ್ಸ ಹೇಳಿದ್ರು ಮಾಡಾಕ ನಾ ತಯಾರ.

ಅಂದಾನ ಶೆಟ್ಟಿ : ಏನಯ್ಯಾ, ಕೆಲ್ಸ ಮಾಡದೆ ಕೂಳು ಕೇಳಾಕ ಬಂದಿ, ಇದು ದೊಡ್ಡ ಅನ್ಯಾಯ, ಮ್ಯಾಲಿರೊ ಆ ದೇವರಾದ್ರು ಇದನ್ನ ಒಪಿಕೊಂಡಾನೇನು. ನೀನು ಏನಾರ ಒಂದ ಕೆಲ್ಸ ಮಾಡಿದ ಮ್ಯಾಲೆ ಉಣ್ಣಾಕ ಕೊಡಬೇಕಂತ ಧರ್ಮ ಗ್ರಂಥದಾಗ ಬರದೈತಿ. ಅದನ್ನ ನಾನು ಓದೀನಿ.

ಖೂನ : ಧಣಿ ಹಸ್ಕೊಂಡ ಸಾಯಾಕ ಹತ್ತೀನಿ. ಈಗ ನನ್ನ ಕೈಯಿಂದ ಏನ ಮಾಡಾಕು ಆಗೋದಿಲ್ಲಾ.

ಅಂದಾನ ಶೆಟ್ಟಿ; ಹಂಗಂದ್ರ ಹ್ಯಾಂಗ, ಖಾಲಿಪುಕ್ಕಟ ಕೆಲ್ಸ ಗಿಟ್ಟಿಸಿಕೊಂಡು ಆರಂಭಕ್ಕೆ ಉಣ್ಣಾಕ ಕುಂತ್ರ ಹಂಗ್ಯಾದೀತು.

ಖೂನ : (ಸ್ವಗತ) ಏನು ಮಾಡೋದು, ನನಗಾರ ಕಣ್ಣ ಮಂಜ ಮಂಜ ಕಾಣಾಕ ಹತ್ಯಾವ, ಹಸಿವಿನಿಂದ, ಸಾಯಾಕ ಹತ್ತೀನಿ, (ತಾಕಲಾಟ,) ಆತು ಧಣಿ ಬ್ಯಾಗನೆ ಏನ ಹ್ವಾರೆ ಮಾಡಾಕು ಹೇಳ್ರಿ.

ಅಂದಾನ ಶೆಟ್ಟಿ: ಮನಿಯಾಗ ನೀರಿನ ತೊಟ್ಟಿ ಐತಿ, ಬಾವಿಯಿಂದ ಸೇದಿ ಆಟು ಅದನ್ನು ತುಂಬಿಸಿಬಿಡು.

ಖೂನ : (ತಲೆ ಆಡಿಸಿ) ಆಯ್ತು ಧಣಿ. (ಹೊರಡುವವನು) (ಶೆಟ್ಟಿ ಅವನ ಹಿಂದೆ ಅನುಮಾನದಿಂದ್ರೆ ಹೋಗುವನು)

ಅಂದಾನ ಶೆಟ್ಟಿ : (ಹೆಂಡತಿಯನ್ನು ಕೂಗುವನು) ಕಿನ್ನರಿ, ಲೇ, ಕಿನ್ನರಿ.

ಕಿನ್ನರಿ : ಬಂದೇರಿ, ಬಂದೆ (ಸೆರಗು ಹೊದ್ದು ವಿನಮ್ರವಾಗಿ ನಿಲ್ಲುವಳು)

ಅಂದಾನ ಶೆಟ್ಟಿ : ನೋಡೆ, ಮನಿಗ ಒಬ್ಬಾನು ಆಳ ಬಂದಾನು. ಅವನಿಗ ಯಾವತ್ತು ಹೊಟ್ಟಿ ತುಂಬ ಉಣ್ಣಾಕ ಇಕ್ಕಬ್ಯಾಡ. ತಲಿಗ ಎಣ್ಣಿ ಕೊಡಬ್ಯಾಡ, ಖರ್ಚು ಕಮ್ಮಿ ಮಾಡಿ ದುಡಿಸಿಕೋಬೇಕು.

ಕಿನ್ನರಿ : ಹೂಂ....

ಅಂದಾನ ಶೆಟ್ಟಿ : ತಲಿಯೊಳಗ ಇಟ್ಕೊ ಏನಂದೆ, ನೀ ಏನಾರ ಸ್ನಾನಕ್ಕ ನೀರಗೀರ ಕೊಟ್ಟಿ, ನಿನ್ನ ಏನ ಮಾಡ್ತೀನೋ ನನಗೆ ಗೊತ್ತಿಲ್ಲಾ.

ಕಿನ್ನರಿ : ಹೂಂ... ಹೂಂ.... (ತಲಿ ಆಡಿಸಿ ಸುಮ್ಮನಾಗುವಳು)

ಅಂದಾನ ಶೆಟ್ಟಿ : (ಖುಷಿಯಿಂದ) ನಾ ಹೇಳಿದಾಟು ಮಾಡು ಏನಂದೆ (ಆಕಿ ಕಿವಿಯೊಳಗ ಏನೇನೋ ಹೇಳುವನು) ಅಷ್ಟೇ ಹ್ಯಾಂಗೂ ಅವನು ಅನಾಥ ಅದಾನ ಹಿಂದ ಮುಂದ ಯಾರು ಇಲ್ಲಾ.

ಕಿನ್ನರಿ : (ಬಾಯಿ ಜಿಟ್ಕೊಂಡು ಗಂಡ ಹೇಳಿದ್ದನ್ನ ಕೇಳಿ) ಹೂಂ, ಮಾಡ್ತೀನಿ.

ಅಂದಾನ ಶೆಟ್ಟಿ : ಸಿಕ್ಕಾಗ್ಲೆ ದುಡ್ಕೋಬೇಕು. ಇಲ್ಲಾಂದ್ರ ನಮ್ಮ ತಿಜೋರಿ ತುಂಬುವುದು ಯಾವಾಗ? ನಮ್ಮ ಹೊಟ್ಟೇನೂ ನಡಿಬೇಕಲ್ಲ ಏನಾರ ಕೊಟ್ಟಗಿಟ್ಟಿ (ಅನುಮಾನದಿಂದ ನೋಡಿ)

ಖೂನ : (ದೂರದಿಂದಲೇ ಕೂಗ್ತಾ ಬರುವನು) ಧಣಿ, ಅವ್ವಾರ, ನೀರ ಸೇದಿ ಹಾಕಿದೆ ನೋಡ್ರಿ. ಹಸ್ಕೊಂಡು ಸಾಯಾಕ ಹತ್ತೀನಿ ಗಡಾಸ, [illegible] ಉಣ್ಣಾಕ ಇಡ್ರಿ.

ಕಿನ್ನರಿ : ಯಾಕ ಕೂಗ್ತಿಯಪ್ಪ. ತಂದೆ ಉಣ್ಣಾಕ, ತಡಿ.

ಖೂನ : ಹಸಿವು ಹೆಚ್ಚಾಗಿ ಹೊಟ್ಯಾಗ ಸಂಕಟ ಎದ್ದೈತಿ ತಾಯಿ ಗಡಾನ ತಂದು ಇಕ್ರಿ. ಎಷ್ಟು ಜನ್ಮದ ಹಸಿವೊ ಇದು. ಬೆನ್ನ ಬಿಡದಂಗ ಕಾಡಾಕ ಹತ್ಕೊಂಡೈತಿ.

ಅಂದಾನ ಶೆಟ್ಟಿ : (ಹೆಂಡತಿ ಹೆಚ್ಚ ನೀಡ್ತಾಳೇನಂತ ಅನುಮಾನದಿಂದಲೇ ಗಮನಿಸುವನು) ತರೋ ವರಿಗ ತಡಿಯೋ, (ಹೆಂಡತಿ ಹೋದ ಕಡೀಗ ನೋಡ್ತಾ) ಕಿನ್ನರಿ, ನಾ ಅಂದದ್ದು ನೆಪ್ಪ ಐತಿ ಅಲಾ ನಿನಗ. ಆಟ ಮಾಡ ಮತ.

ಕಿನ್ನರಿ : (ತಟ್ಟಿಯೊಳಗ ಒಂದೇ ಹಿಡಿ ಅನ್ನ ಬಡಿಸಿಕೊಂಡು ಬರುವಳು) ಹೂಂ, ಅಷ್ಟೆ ಮಾಡೀನಿ. (ಖೂನ ಗಬಗಬನೆ ಅನ್ನ ತಿನ್ನುವನು)

ಖೂನ : (ಕೊಟ್ಟಷ್ಟರಲ್ಲೇ ತೃಪ್ತಿ ಪಟ್ಕೊಂಡು) ಅಂತು ಇರಾಕ ಒಂದು ಜಾಗ ಸಿಗ್ತು. ಉಣ್ಣಾಕ ಸಿಗ್ತು. ಮಲಗಾಕ ಜಾಗ ಸಿಗ್ತು. ಇನ್ನೇನ ಬೇಕು? ಜೀವನದಾಗ ಇರೋದೇನು ಏನು? ಅನ್ನ ಕೊಟ್ಟ ಧಣಿಗ ಯಾವತ್ತು ದ್ರೋಹ ಬಗಿಯೋ ಮನಸ ಬರ್ದಂಗಿದ್ರ ಆತು. (ಅಂದಾನ ಶೆಟ್ಟಿ ಕಟ್ಟಿಗೆ ಅಡ್ಡೆಗೆ ಮಂದಿ ಬಂದೆ ಬರುವರು ರೊಕ್ಕ ಪಡಕೊಂಡು ಕಟ್ಟಿಗೆ ಮಾರುವರು ಅವನ ಹೆಂಡತಿ ಪ್ರವೇಶ)

ಅಂದಾನ ಶೆಟ್ಟಿ : (ಹೆಚ್ಚಾದ ದುಡ್ಡನೆಲ್ಲಾ ಬಿಗಿಯಾಗಿ ಇಟ್ಕೊಂಡು ಅವನ ದಾಹ ತೀರದೆ ಕಷ್ಟಪಡ್ತಿರೋ ಖೂನನ್ನ ಮತ್ಯಾವ ರೀತಿ ದುಡಿಸ್ಕೊಬಹುದು ಅನ್ನೋ ವಿಚಾರ ಮಾಡ್ತಾ) ಖೂನ, ಬಾ ಇಲ್ಲಿ. (ಯೋಚನೆ ಮಾಡುವನು) ಬರಿ ಅಡ್ಡೆಯೊಳಗಿನ ಕಟ್ಟಿಗೆ ಹೊಡದು ಮಾರಿದ್ರ, ಏನ ಪ್ರಯೋಜನ ಬಂತು, ನನಗೂ ಏನೂ ಲಾಭ ಇಲ್ಲ. ಕಾಡಿಗ ಹೋಗಿ ನಾಕ ಮಂದಿ ಹೋರ್ರೋ ಅಂತ ಹೊರಿಯನ್ನು ಹೊತ್ಕೊಂಡು ತಂದಹಾಕು. ನೀನು ತಿನ್ನತ್ತಿರೋ ಕೂಳಿಗಾರು ಆಟ ಪಗಾರ ಗಿಟತ್ತೈತಿ ಏನಂದೆ. (ಅವನನ್ನ ದಿಟ್ಟಿಸಿ ನೋಡುವನು)

ಖೂನ : (ದುಸರಿ ಮಾತ ಆಡದೆ) ಆಯ್ತು ಧಣಿ, ತಾವು ಹೇಳ್ದಂಗೆ ಆಗವಲ್ದ ಯಾಕ. ಇಕ ಈಗ ಹೊಂಟೆ.

ಅಂದಾನ ಶೆಟ್ಟಿ : ಹೂಂ, ಹೋಗು ಗಡಾನ, ಮತ್ತ ನಾ ಅಂದದ್ದು ನೆಪ್ಪಿರಲಿ.

ಖೂನ : (ಹೆಗಲಿಗ ಕೊಡ್ಲಿ ಏರಿಸಿದಂಗ ಮಾಡಿ ಹೊರಟು ಬಿಡುವನು)

ಅಂದಾನ ಶೆಟ್ಟಿ : (ನಗುತ್ತಾ) ಈ ಮಂದಿಗ ಎಲ್ಲಿಡಬೇಕೋ ಅಲ್ಲೆ ಇಡಾಕು, ಒಂದ ಸಲ ಸಲಗಿ ಕೊಟ್ರ ಆತು. ತಲಿಮ್ಯಾಲ ಬಂದು ಕುಂತ್ಕೊಂತಾರ ಅಲ್ಲಾ. ಇವರು ಹುಟ್ಟಿರೋದಾರು ಯಾಕ? ದುಡಿಯಾಕ, ಬರಿ ದುಡಿಯೋದು ಒಂದೇ ಇವರ ಕೆಲ್ಸ. ಮತ್ತೇನೈತಿ. ಸುಖ ಪಡೋದು ಏನಿದ್ರು ನಮ್ಮ ಕೆಲ್ಸ. (ಶ್ರೀಮಂತಿಕೆ ಪ್ರದರ್ಶಿಸುತ್ತಾ ಒಂದೆರಡು ಸಾರಿ ಅಡ್ಡಾಡಿ ನಿರ್ಗಮಿಸುವನು)

ಸನ್ನಿವೇಶ - ೩

(ಖೂನ ಹೊರಲಾರದಷ್ಟು ದೊಡ್ಡ ಹೊರಿಯನ್ನ ತಲಿಮ್ಯಾಲ ಹೊತ್ಕೊಂಡು ಕಷ್ಟಪಡ್ತಾ ಬರುತ್ತಿರುವುದು, ಬೆವರು ತಟತಟ ಹರಿತಿದೆ, ಅದನ್ನ ನೋಡಿ ಯಾರಿಗಾರು ಕರುಣೆ ಬರದೆ ಇರಲಾರದು.)

ಖೂನ : (ಒಂದ ಕಡೆ ಬಿಸಾಕಿದವನೆ) ಥು, ಇದ್ರ ಮನಿಹಾಳಾಗ, ಹೆಣಭಾರ ಐತಲ್ಲಾ. ಕಟ್ಟಿ ನೋಡಿದಾಗ ಅಷ್ಟೇನು ದೊಡ್ಡದಾಗಿ ಕಾಣಲಿಲ್ಲಾ, ಅವನವ್ವನ, ಹೊತ್ಕೊಂಡಮ್ಯಾಲ ಅನಿಸಾಕ ಹತ್ತು. ಇದನ್ನ ಧಣಿ ನೋಡಾಕ ಬೇಕು. ಖುಷಿ ಆಗೈತಿ ಅವರಿಗ. ಉಸ್ಸ್.... ಉಸ್ಸ್. (ಹರಕ ಕಂಬಳಿಯಿಂದ್ಲೆ ಮಾರಿ ಒರಿಸುತ್ತಾ) ಅವ್ವಾ... ಒಂದ ಗುಟುಕು ನೀರ ಕೊಡ್ರವ್ವ ಗಂಟಲನ್ನೋದು ಒಣಗಿದ ವರ್ತಿ ಹಂಗ ಆಗೈತಿ.

ಕಿನ್ನರಿ : (ಅವನ ಕಷ್ಟ ಗಮನಿಸುತ್ತಿದ್ದಳು) ನೀರ ಇಗೋ.

ಖೂನ : ಆಯ್ತು ಅವ್ವ, ನಿಮಗ ಪುಣ್ಯ ಬರ್ಲಿ. ಅವ್ವಾರ, ನೋಡ್ರಿ ಹೊರಿ, ಕಾಡಿಂದ ತಂದೀನಿ, ಪಾಡೈತಿ, ಧಣಿಯೋರಿಗ ತೋರಿಸಬೇಕಿತ್ತು (ಹಲ್ಲು ಗಿಂಜುತ್ತಾ)

ಗಿರಾಕಿ : ಶೆಟ್ರ... ರೀ ಶೆಟ್ರ....

ಕಿನ್ನರಿ : ಯಾರು, ಯಾರದು, ಯಾರ ಬೇಕಿತ್ತು. (ವ್ಯಕ್ತಿ ಹತ್ರ ಹೋಗಿ)

ಗಿರಾಕಿ : ಎರಡ ರುಪಾಯಿ ಕಟ್ಟಿಗಿ ಬೇಕಿತ್ತು.

ಕಿನ್ನರಿ : (ಖೂನನ ಕಡಿಗ ತಿರುಗಿ) ಹೋಗಿ, ಈಗ ತಂದಿಯಲ್ಲ ಆ ಹೊರಿಯಿಂದ ಕಟ್ಟಿಗಿ ಬಿಚ್ಚಿ ಕೊಡು ಈತನಿಗ.

ಖೂನ : ಆಯ್ತು ಅವ್ವಾರ, ಆದ್ರ...

ಕಿನ್ನರಿ : ಏನೋ ಅದು, ಆದ್ರ....

ಖೂನ : ನಾ ತಂದ ಹೊರಿಯನ್ನ ಅಪ್ಪಾರಿಗೆ ತೋರ್ಸಾಕು.

ಕಿನ್ನರಿ : ಯಾಕ, ಯಾಕ ತೋರಿಸಬೇಕಂತಿ.

ಖೂನ : ಹಂಗ ಸುಮ್ಕೇರಿ...

ಕಿನ್ನರಿ : ನಿನಗೆಲ್ಲೋ ಮುಕ್ಕು ಹಿರಿಯ ಹಂಗೆಲ್ಲಾ ಮುಳ್ಳ ಆಗಾಂವ ಅಲ್ಲ. ಹೋಗು ನಿನಗ ಅದೆಲ್ಲಾ ಗೊತ್ತಾಗಲ್ಲಾ.

ಖೂನ : ಆದ್ರೂ....

ಕಿನ್ನರಿ : ಅವರು ಬರೋದ್ರಾಗ ನಿನ್ನ ಕಟ್ಟಿಗಿ ಎಲ್ಲಾ ಮಾರಾಟ ಆಗಿ ಹೊಕೈತಿ, ಕೊಟ್ಟವನೆ ಗಡಾನ ಬಾ ಉಣ್ಣಾಕ ಇಕ್ತೀನಿ.

ಕಿನ್ನರಿ : ಪಾಪದ ಪ್ರಾಣಿ, ಅಷ್ಟು ದೂರದ ಕಾಡ್ನಿಂದ ದೆವ್ವದಂತ ಕಟ್ಟಿಗಿ ಹೊರಿ ಹೊತ್ಕೊಂಡು ಬಂದೈತಿ. ಅದರ ಜೀವಕ್ಕ ಏನಾಗಿರಬಾರದು. ಪರದೇಶಿ ಜೀವ ಮೈ ಮಾಲ ಆಟ ನೀರ ಗೊಜ್ಜಿಕೊಳ್ಳಿವಲ್ಲದ್ಯಾಕ (ಖೂನ ಕಡೀಗ ತಿರುಗಿ) ಖೂನ, ನೋಡಿಲ್ಲಿ, ಆಟು ನೀರೈತಿ ಮೈಮ್ಯಾಲ ಸುರ್ಕೊ ತಂಪ ಆಕೈತಿ. ಹಂಗೆ ಆಟು ಎಣ್ಣಿ ಇಟ್ಟೀನಿ ತಲಿಗ ಹಚ್ಕೊ... ಏನಂದೆ.

ಖೂನ : ನೀರ, ಆಯ್ತು ಬಿಡವ್ವ. ಪುಣ್ಯ ಬರ್ತತೈ ನಿನಗ. (ಒಳಗ ಹೋಗುವನು)

ಕಿನ್ನರಿ : ಗಡಾನ ಬಂದುಬಿಡು, ಅವ್ರ ಬರೋದ್ರಾಗ ಊಟ ಮಾಡವಂತೆ ಬಂದ್ರ ಮುಗೀತು ಹಳಿ ಪುರಾಣ ತಕ್ಕೊಂಡು ನಿನಗ ಅರ್ಧ ಹೊಟ್ಟಿಗ ಆಗೊ ಆಟು ಹಾಕಾಕ ತಾಕೀತು ಮಾಡ್ತಾನ. (ಸ್ವಗತ) ಅಲ್ಲಾ, ಈ ಖೂನ ಬರಾಕ ಮದ್ಲು, ನಮ್ಮ ಶೆಟ್ರು ನಾನು ನೊಣ ಹೊಡಿತಿದ್ವಿ. ಮಂದಿ ಇವರ ಜುಗ್ಗತನಕ ಬ್ಯಾಸರಾಗಿ ಸನೀಕ ಹಾಯ್ತಿರಲಿಲ್ಲ. ಈ ಹುಡುಗ ಪುಕ್ಕಟ್ಟೆ ಸಿಕ್ಕ ಅಂತಂದು, ದುಡಸಿ ದುಡಸಿ ತಾನ ದುಂಡಗಾದ. ಯಾವತ್ತಾರು ಇವನ ಕುರಿತು ಯೋಚ್ನೆ ಮಾಡ್ಯಾನೇನು?

ಖೂನ : ಅವ್ವಾರ, ಇಗೋ ನಾನ ಬಂದೆ. ಇಲ್ಲೆ ಕುಂತ್ಕೊಳ್ಳೇನ್ರಿ.

ಕಿನ್ನರಿ : ಹೂಂ. ಅಲ್ಲೆ ಕುತ್ಕೊ. ನೀನು ದುಡಿದಿದ್ಕ ಇವತ್ತು ಈ ಸವಲತ್ತು ಬಂದಿರೋದು ಈ ಮನಿಗ. ನೀ ಚೆನ್ನಾಗಿದ್ದರ ನಾವು. ಇಕ್ಕ ಇವತ್ತು ಹೊಟ್ಟೆ ತುಂಬ ಉಣ್ಣು. ಕಷ್ಟ ಪಡೋರಿಗೆ ಹೊಟ್ಟೆ ತುಂಬ ಉಣ್ಣೋ ಸವಲತ್ತು ಐತಿ. ನೀ ಏನು ಚಿಂತಿ ಮಾಡಬ್ಯಾಡ.

ಖೂನ : ಏನೋ ಅವ್ವಾರ, ನಂಗೇನು ತಿಳಿಯಂಗಿಲ್ಲಾ, ನೀವು ಅಂದದ್ದೇಯ ಹಾಕ್ರಿ ಊಟ. ಮೈ ಮ್ಯಾಲ ನೀರ ಸುರ್ಕೊಂಡಿದ್ದು ಹಗರಾತು ಹೊಂದಾಗ ಹಿಂತಿದ್ದ ರಾಡಿ ನೀರಾಗ ಮೈ ತೋಯಿಸಿದ್ದು ಹಳೆ ನೆಪ್ಪು, ಹಂಗೆ ನಮುಂತ್ರೋರಿಗ ಏನೊಂದು ತಿಳಿಯೋದಿಲ್ಲ.

ಖೂನ : (ತೇಗುವನು) ಆಬ್, ಆಬ್.... ಊಟ ಪಾಡಿತ್ತು ಅವ್ವಾರ. ಮೊದಲ ಸಲ ಹೊಟ್ಟೆ ಬಿರಿಯೊ ಮಟ ಉಂಡದ್ದು. (ದೀರ್ಘ ಉಸಿರು ಬಿಟ್ಟು) ಒಂದು ಕಾಲದಾಗ, ಇದೇ ಕೂಳಿಗಾಗಿ, ಬೀದಿ ಬೀದಿಯೊಳಗ, ನಾಯಿ ಹಂಗೆ ಅಲದಾಡ್ತಿದ್ದೆ. ಈ ಜಗತ್ತಿನ್ಯಾಗೆ ಯಾರಿಗೂ, ಯಾರು ಇಲ್ಲಾ. ಎಲ್ಲಾ ವ್ಯವಹಾರಸ್ಥ ಮಂದಿ. ಎಲ್ಲಿಗ ಹೋದ್ರು ಕೊಡ ತಗೋಳ ವ್ಯವಹಾರನೆ.

ಕಿನ್ನರಿ : (ಹೊರಗಿನಿಂದ ಆಕಿಗಂಡ, ಕೂಗಿದಂಗಾಗಿ ಅವಸರದಿಂದ ಓಡಿ ಬಂದವಳೆ) ಏ... ಖೂನ, ಆತೇನೊ ಉಣ್ಣೋದು, ಆಗಿದ್ರ ಮದ್ಲು ಇಲ್ಲಿಂದ ಜಾಗ ಖಾಲಿ ಮಾಡು. ಆತ ಬರಾಕ ಹತ್ಯಾನ. ಬಂದ್ರ ಮುಗೀತು ನಮ್ಮಿಬ್ಬರನ್ನೂ ಉಳಿಸಾಕಿಲ್ಲಾ. (ಒಳಗಡೆ ಓಡುವಳು)

ಖೂನ : (ಯೋಚನೆ ಮಾಡುವ ರೀತಿಯಲ್ಲಿ) ಹೌದು. ನನಗ್ಯಾಕ ಬೋಯ್ಕಿತಾರ, ಕತ್ತಿ ದುಡಿಯೊ ಹಂಗ ದುಡೀತೀನಿ. ಮೂಕ ಬಸವನ ಹಂಗೆ ಎಷ್ಟು ವರ್ಷಗಳಿಂದ ದುಡಿಯಾಕ ಹತ್ತೀನಿ. (ಗಟ್ಟಿ ನಿರ್ಧಾರ ಮಾಡಿಕೊಂಡವನಂತೆ) ಇಲ್ಲಾ ಇವತ್ತು ನಾನು ಕೇಳಾಕ ಬೇಕು. ಎಷ್ಟು ವರ್ಷದಿಂದ ಬರಿ ಮೈಯಿಂದ್ಲೆ ಅದೀನಿ. ನನಕಂಬಳಿ, ನನ್ನ ದೋತ್ರ ಹರದ ಹೋಗ್ಯೈತಿ ಕೊಡಿಸಾಕ ಹೇಳಬೇಕು. ಕೇಳ್ತೀನಿ, ಕೇಳೆ ಕೇಳ್ತೀನಿ (ಒಂದು ನಿರ್ಣಯಕ್ಕೆ ಬಂದವನಂತೆ ಎದ್ದು ನಿಲ್ಲುವನು ಆತ್ಮ ವಿಶ್ವಾಸದಿಂದ ಸುತ್ತ ತಿರುಗಾಡಿ) ಇವತ್ತು ಗೊತ್ತಾತ ನನಗ.

ಕಿನ್ನರಿ : ಏನು? ಇವತ್ತು ಭಾರಿ ಹುರುಪುಗೊಂಡಿಯಲ್ಲೋ.

ಖೂನ : (ಅದೆ ಸಣ್ಣ ಧ್ವನಿಯಲ್ಲಿ) ನನ್ನ ಅರವಿ ಹಾಳಾಗಿ ಹೋಗ್ಯಾವ ಒಂದ ಜತಿ ಅರವಿ

ಕಿನ್ನರಿ : (ಆಶ್ಚರ್ಯದಿಂದ ಮಾರಿಮ್ಯಾಲಕ್ಕೆ, ಮಾಡಿಕೊಂಡು ನಿಲ್ಲುವಳು ಆಕಿ ಮ್ಯಾಲ ದೀಪ ಆರುವುದು.) (ದೀಪ ಹೊತ್ತಿಕೊಂಡಾಗ ಅಂದಾನ ಶೆಟ್ಟಿ ದಿಮಾಕಿನಿಂದ ನಡ್ಕೊಂಡು ಬರುತ್ತಿರುವನು. ತಲಿಯೊಳಗ ನೂರಾ ಎಂಟು ವಿಚಾರಗಳು, 2-3 ವರ್ಷದಿಂದ ಕೂಡಿಟ್ಟ ಗಂಟು ಬಗಲಾಗ ಇಟ್ಕೊಂಡು ಬರುತ್ತಿರುವನು.)

ಅಂದಾನ ಶೆಟ್ಟಿ : ಈಗೀಗ ಕಳ್ಳ ಮಂದಿ ಬಹಳ ಆಗ್ಯಾರ, ಎಚ್ಚರಿರಬೇಕು, ಯಾರಿಗಾರ ಸುದ್ದಿ ತಿಳಿದ್ರ ಹ್ಯಾಂಗ. ಎ, ಇಲ್ಲಾ, ಇಲ್ಲಾ (ಕೈಯೊಳಗಿನ ಗಂಟು

ಬಿಗಿಯಾಗಿ ಹಿಡಿಯುವನು ಸ್ಟೇಜು ಮೇಲೆ ಮಟ್ಟ ಕತ್ತಲು) ಯಾವನೊ ಈ ಕಡೀಗ ಬರಾಕ ಹತ್ಯಾನಲ್ಲಪ್ಪ. ಅವನೇನಾರು ಕಳ್ಳ ಏನ ಮತ್ತ. ಕಳ್ಳ ಇದ್ರ ಏನಪ್ಪಾ ಮಾಡೋದು ಅಯ್ಯೋ ದೇವ್ರ ನನ್ನ ಬಿಟ್ಟು ಈ ಗಂಟನ್ನ ಕಾಪಾಡಪ್ಪ. ಏನಾರ ಆಗ್ಲಿ ಧೈರ್ಯದಿಂದ ಎದುರಿಸಿದರಾತು, ಅವನೇನದಾದರು ಹೊಡದ್ರ ಹೊಡೀಲಿ ಗಂಟ ಮಾತ್ರ ಬಿಡಂಗಿಲ್ಲ (ಧೈರ್ಯ ತಂದಕೊಂಡು) ಏ, ಯಾರದು? (ಧ್ವನಿ ಬರದು) ಅಯ್ಯಯ್ಯೋ ಮುಗಿದ ಹೋತಪ್ಪಾ ಕತಿ. ಯಾವನೋ ನನ್ನ ನೋಡ್ಯಾನ. ಗಂಟ ಎಂಟಣಿ ಆಗಿಹೋತಲಪ್ಪ ಇಲ್ಲೆ ಎಲ್ಲಾರ ಮುಚ್ಚಿ ಬಿಡಲೇನು? ಯಾರಿಗಾರು ತಿಳಿದ್ರ ಇಲ್ಲಾ, ನೋಡಾನು, ಬಿಗಿಯಾಗಿ ಹಿಡ್ಕೊಂಡ್ರ ಆತು. (ಆಕೃತಿ ಹತ್ತಿರ ಬರುವುದು) ಶೆಟ್ಟಿ ಅಂಜುತ್ತ ಕೈಯಾನ ಗಂಟು ಬಿಗಿಯಾಗಿ ಹಿಡ್ಕೊಂಡು ಹೊರಡುವನು) ತಿಮ್ಮಪ್ಪ, ಗೋವಿಂದ ದೇವ, ದೇವ ಕಾಪಾಡಪ್ಪ.

ಖೂನ : (ಶೆಟ್ಟಿ ಕಣ್ಣು ಮುಚ್ಚಿಕೊಂಡು ಬರುತ್ತಿರುವ ಪರಿ ನೋಡಿ) (ಸ್ವಗತ) ದೆವ್ವಾ, ಏನಾರು ಬಡ್ಕೊಂಡೈತೋ ಹ್ಯಾಂಗ.

ಅಂದಾನ ಶೆಟ್ಟಿ : ಅಯ್ಯೋಯಪ್ಪ, ಹತ್ರ ಬಂದ್ನೇನಪ್ಪ. (ಒಂದು ಕಣ್ಣು ಬಿಟ್ಟು ನೋಡುವನು) ಏಯ್ ನೀನಾ ನಾ ಹೆದರಿದ್ನಲ್ಲೋ, ನಿನ್ನ ಮನಿ ಹಾಳಾಗ, ಹೂಂ... ಹೂಂ.... ಎತ್ಲಾಗ ಹೊಂಟಿ ಕೆಲ್ಸ ಬಗಸಿ ಬಿಡ್ಕೊಂಟು, ನಡಿ ನಡಿ. ಅಡವೀಗ ಹೋಗಿ ಕಟ್ಟಿಗಿ ಹೊಡ್ಕೊಂಡು ಬಾ ನಡಿ.

ಖೂನ : ಇಲ್ಲೇ ಸುತ್ತಾಡಿ ಬರ್ತೀನಿ. ದುಡದ ದುಡದ ನಂಗೂ ಬ್ಯಾಸರಕಿ ಬಂದೈತಿ.

ಅಂದಾನ ಶೆಟ್ಟಿ: (ಆಶ್ಚರ್ಯದಿಂದ ಹುಬ್ಬೇರಿಸುವನು. ಮತ್ತೊಂದು ಕಡೀಗ ಸಿಟ್ಟು ಬಂದಿದೆ. ಇದಕ್ಕ ಏನು ಹಲ್ಲು ಕಡಿಯುತ್ತಾ ವಿಚಾರ ಮಾಡುವನು.) (ಸ್ವಗತ) ಮಗ ಚಿಗರ್ಕೊಂಡ ಅನ್ನು. ತುತ್ತು ಕೂಳಿಗ ನಾಯಿಹಂಗ ಬಾಲ ಅಲ್ಲಾಡಿಸ್ತಿದ್ದೋನು. ಆಸರಕಿ ಬ್ಯಾಸರಕಿ ಬಗ್ಗೆ ಮಾತಾಡ್ತಾನ ಅಂತಂದ್ರ.

ಖೂನ : ಯಜಮಾನ್ರ, ಏನ ಯೋಚ್ನೆ ಮಾಡ್ತೀರಿ, ಆಟ ವರ್ಷಗಳಿಂದ ಗಾಣದ ಎತ್ತಿನಂಗ ದುಡಿತ್ತಿದ್ದೀನಿ, ನಂಗೂ ಬೇಸರ ಅನ್ನೋದೈತಿ.

ಅಂದಾನ ಶೆಟ್ಟಿ : ವ್ಹಾ, ಮಗನ ಅವತ್ತು ಪರದಾಡ್ತಿದ್ದಿಯಲ್ಲಾ, ಅವತ್ತು ಬ್ಯಾಸರ ಬಂದಿರಲಿಲ್ಲ.

ಖೂನ : ಧಣಿ ನಾನು ಓಂದ ಅರೇ ಘಳಿಗಿ ಸುಮ್ನೆಕುಂತಿಲ್ಲಾ, ಧಣಿ... (ಹಲ್ಲು ಗಿಂಜಿ) ಒಂದು ಮಾತಿತ್ತು.

ಅಂದಾನ ಶೆಟ್ಟಿ : ಏನು, ಬಗಳಲೇ...

ಖೂನ : ಏನೂ ಇಲ್ಲಾ, ನನಗ ಅರವಿ ಇಲ್ಲಾ, ಇರೋವು ಹರದಾವು ಒಂಜೊತಿ ತಂದ್ರಪಾಡಿತ್ತು.

ಅಂದಾನ ಶೆಟ್ಟಿ : (ಸಿಟ್ಟಿಂದ ಕಿಡಿಕಾರುತ್ತಾ) ಹಾಂ... ಏನಂದೆ (ಸ್ವಗತ) ಓ.... ಏನೋ ಎಡವಟ ಆಗ್ಯೈತಿ, ಈ ಹಂದಿನನಮಗ ಮೂರ ವರ್ಷದಿಂದ ನಾಯಿ ಕುನ್ನಿ ಹಂಗೆ ಇದ್ದೋನು, ಇವತ್ತು.

ಖೂನ : ನಾನು ಹೋಗಿ ಬರ್ತೀನಿ ಯಜಮಾನ್ರೆ, ಇವತ್ತಿ ನನಗ ಏನೋ ಹೊಸದು ತಿಳಿದಂಗ ಆಗ್ಯೈತಿ.

ಅಂದಾನ ಶೆಟ್ಟಿ : (ಅವನನ್ನ ಕೆಳಗಿಂದ ಮ್ಯಾಲಿನವರಗ ನೋಡಿ ಮಾತಾಡ್ಲಿಕ್ಕೆ ಮನಸು ಇಲ್ಲದಿದ್ರು ಸಿಟ್ಟಿನಿಂದ) ಹೂಂ... ಹೂಂ... (ಶೆಟ್ಟಿಯನ್ನು ನೋಡಿ)

(ಸ್ವಗತ) ಅಲ್ಲಾ ಇವನಮ್ಯಾಗ್ಯಾಕ ಸಿಟ್ಟಾಗಬೇಕು.

ಖೂನ : ಏನ ಜನ ಅಂತೀನಿ. ನಮಗ ಖುಷಿ ಆತಂದ್ರ ಇವರಿಗ ಸಿಟ್ಟು ಬರತೈತಿ (ಒಂದ ಕಡಿಯಿಂದ ಮತ್ತೊಂದು ಕಡೀಗ ನಡಿಯುವನು)

ಅಂದಾನ ಶೆಟ್ಟಿ : (ಯೋಚನೆ ಮಾಡ್ತಾ) ಇದ್ಯಾಕ ಹಿಂಗಾತು? ಮೂರು ವರ್ಷದಿಂದ ಹೇಳಿದ ಕೆಲ್ಸ ಮಾಡ್ಕೊಂಡ, ಹಾಕಿದನ್ನ ತಿಂದ್ಕೊಂಡು ಬಿದ್ದೋನು ಇದ್ದಕ್ಕಿದ್ದಂಗ ಇವತ್ತು ಮಾತಾಡ್ತಾನಂದ್ರ, ಯಾರಾರು ಹೇಳಿಕೊಟ್ರೆ? ಎಲ್ಲಾದ್ರು ಹೋಗಿದ್ನ. ಪಕ್ಕದ ಬುಜಂಗಶೆಟ್ಟಿ ಏನಾದ್ರು ಕಿತಾಪತಿ ಮಾಡಿದ್ನ? ಏನಿರಬಹುದು (ಒಂದ ಕಡಿಯಿಂದ ಮತ್ತೊಂದ ಕಡೀಗ ಬರುವನು) ಹಾಂ... ಮನೀಗ ಹೋಗಿ ಇಚಾರ ಮಾಡ್ತೀನಿ. (ಮನಿ ಕಡೀಗ ಹೊರಡುವನು.)(ಕಿನ್ನರಿ, ಏನೋ ಕೆಲ್ಸ ಮಾಡ್ತಾ ಕುಳಿತಿರುವಳು) ಕಿನ್ನರಿ, ಲೇ ಕಿನ್ನರಿ, ಎಲ್ಲಿದಿಯೇ ಲೌಡಿ, (ಮಾಡೋದ ಮಾಡಿ ಎಲ್ಲ ಅಡಕ್ಕೊಂಡು ಕುಂತಿರಬಹುದು)

ಕಿನ್ನರಿ : ಏನಾತ್ರಿ, ಗಡಬಿಡಿಯಿಂದ ಬಂದಿರೋದ್ನ ಕಂಡ್ರ ಏನೋ ಘನ ವಿಷಯಾನೆ ಐತಿ ಅಂದಂಗಾತು.

ಅಂದಾನ ಶೆಟ್ಟಿ : (ಸಿಟ್ಟಿನಿಂದ ನಡಗುತ್ತ) ಆ ತಿರಬೋಕಿ ನನಮಗ ಖೂನಗ ಮೈತೊಳಿಯಾಕ ನೀರ ಕೊಟ್ಟಿದ್ದೆ ಹೌದಲ್ಲೊ....

ಕಿನ್ನರಿ : (ಮೌನವಾಗಿರುವಳು, ಅವನ ನೋಡಿ ಹೆದರಿ ಹೌದು ಎಂಬಂತೆ ತಲೆ ಅಲ್ಲಾಡಿಸುವಳು)

ಅಂದಾನ ಶೆಟ್ಟಿ : ನೀರ ಕೊಟ್ಟ, ತಲಿಗ ಎಣ್ಣೆ ಕೊಟ್ಟಿ, ಹೌದಲ್ಲೋ, ಬೊಗಳೆ, ಲೌಡಿ, ಬೊಗಳು, ಏನಾಗಬೇಕು ಅವನು ನಿನಗ ಅಣ್ಣಾನೋ, ತಮ್ಮನೋ, ಇಲ್ಲಾ ಗೆಣಕ್ಯಾರ?

ಕಿನ್ನರಿ : ಥು ನಿಮ್ಮ ಬಾಯಾಗ ಹುಳ ಬೀಳ್ಲಿ, ನನಗ ಮಕ್ಕಳಾಗಿದ್ರ ಅವನ ವಯಸ್ಸಿನ ಮಗ ಇರತಿದ್ದ. ಅಂತದ್ರಾಗ, ಗೆಣಕ್ಯಾರ ಅಂತಿರಲ್ಲಾ ನಿಮ್ಮ ಜನ್ಮಕ್ಕ ಬೆಂಕಿ ಬಿದ್ದ ಸಾಯಿಬಾರದ.

ಅಂದಾನ ಶೆಟ್ಟಿ : ಏ, ಬಾಯಿ ಮುಚ್ಚೆ, ದೊಡ್ಡ ಬಂದ್ಲೀಕಿ, ಘನ ಪತಿವ್ರತೆ, ಅವತ್ತೆ ಬೊಗಳಿದೀನಿ, ಕೈಯಾಗ ಕಡ್ಡಿಕೊಟ್ಟು, ಅವನಿಗೆ ನೀರು, ಎಣ್ಣೆ, ಹೊಟ್ಟಿತುಂಬ ಕೂಳ ಕೊಡಬ್ಯಾಡ ಅಂತಂದು. ಆ ಮಂದಿ ಹುಟ್ಟಿಕೊಂಡಿರೋದೆ ನಾಯಿ ಹಂಗ ನೀಯತ್ತಿಲೆ ದುಡಿಯಾಕ ನಾವಿರೋದೆ ಅವರು ದುಡಿದ ಸಂಪತ್ತಿನ ವೈಭವದಿಂದ ಅನುಭವಿಸಾಕ. ಈಗ ಎಲ್ಲಾ ಉಲ್ಟಾ ಆತು.

ಕಿನ್ನರಿ : ಹೌದು ನಾಳೆ ಸತ್ತಾಗ ಏನ ಒಯ್ಯೋರದೀರಿ.

ಅಂದಾನ ಶೆಟ್ಟಿ : ಅದಕ್ಕೆ ನಿನ್ನ ಸ್ತ್ರೀ ಅನ್ನೋದು. ನಿಮಗ ಜ್ಞಾನ ಇರೋದಿಲ್ಲೆ, ನಾಳಿದನ್ನ ಯಾವತ್ತು ಚಿಂತಿ ಮಾಡ್ಲೇಬಾರ್ದು. ನಾಳಿದ್ದನ್ನ ತಲಿಗಹಚ್ಕೊಂಡು ಇವತ್ತಿನ ಸುಖ ಯಾಕ ಹಾಳಮಾಡ್ಕೊಬೇಕಾ?

ಕಿನ್ನರಿ : ನಿಯತ್ತಿಲ್ಲದ ನಿಮಗ ಮುಷ್ಟಿ ಮುಟ್ಟಿ, ಮನುಷ್ಯರ ನೋವು, ಕಷ್ಟ, ಭಾವನೆ ತಿಳಿಯೋದಿಲ್ಲಾ.

ಅಂದಾನ ಶೆಟ್ಟಿ : ನೋಡೆ ಕಿನ್ನರಿ (ತಾತ್ವಿಕವಾಗಿ) ನೀನು ಹೆಣ್ಣ ಹೆಂಗಸು ನನ್ನೊಂದಿಗೆ ನಿಂತು ವಾಗ್ವಾದ ಮಾಡೋ ಅಧಿಕಾರ ಇಲ್ಲಾ. ಈ ಭೂಮಿಗ ಬಂದ

ಮಂದಿ ಹುಟ್ಟಿರೋದು ಇಂತಿಂಥ ಕೆಲ್ಸ ಮಾಡಬೇಕು ಅಂತೇಳಿಯೇ ಖೂನ- ಯಾ ಜಾತಿಯೋನು ಯಾವನಿಗ ಗೊತ್ತು. ಅವನು ಹುಟ್ಟಿದ್ದೆ ಅನಾಥನಾಗಿ, ಅವನ ಕೆಲ್ಸ ಬರಿ ದುಡಿಯೋದು, ಅದನ್ನ ಬಿಟ್ರ ಅವನಿಗ ಮತ್ಯಾವ ಅಧಿಕಾರಾನೂ ಇಲ್ಲಾ.

ಕಿನ್ನರಿ : (ಅವನನ್ನ ಅನುಮಾನದಿಂದ ನೋಡ್ತಾ) ಯಾಕಿಲ್ಲ ಅಧಿಕಾರ? ನಾನು ಖೂನ ಮನುಷ್ಯರಲ್ವಾ, ಅವನಿಗೂ ನನಗೂ ಏನ ವ್ಯತ್ಯಾಸ ಐತಿ. ನಿಮ್ಮ ನಜರನ್ಯಾಗ,ನಾವಿಬ್ರೂ ಒಂದೇ,ದುಡಿಯೋ ಕತ್ತಿಗಳು ಅದು ಹೊರಗ ದುಡದ್ರ ನಾನು ಒಳಗ ದುಡಿತೀನಿ. ಗಾಣದ ಎತ್ತುಗಳು ತಿರಗ್ತಾನೇ ಇರಾಕು ನಿಂತ್ರ ಮುಗೀತು. ನೀವು ಕಡದು ಕಿಸಿಯೋದಾರೂ ಏನು? ನಾವು ಮಾಡಿದ್ದನ್ನ ಬಾಚೋದು.

ಅಂದಾನ ಶೆಟ್ಟಿ: (ಸಿಟ್ಟು- ಆಶ್ಚರ್ಯದಿಂದ) ಏನು? ಏನಂದಿ. ಬಾಚೋದ ಹೌದೆ, ನೀ ಹುಟ್ಟಿರೋದೆ ಅದಕ್ಕೆ. ನಿಂಗೂ ಪಲ್ಲಂಗದ ಮ್ಯಾಲ ಕುಂದ್ರಿಸ ಬಿಡ್ತೀನಿ ಬಾ, ಬೇವರ್ಸಿ ಮುಂಡೆ. (ಅನುಮಾನದಿಂದ)

ಅಲ್ಲಾ ಮದ್ವಿ ಆಗಿ ಎಷ್ಟು ವರ್ಷಗಳೇ ಆದ್ವು, ಯಾವತ್ತು ನನ್ನ ಕಣ್ಣಾಗ ಕಣ್ಣಿಟ್ಟು ಮಾತಾಡಿದೌಳಲ್ಲಾ, ಇವತ್ತ ಮಾತಾಡಾಕ ಹತ್ಯಾಳಂದ್ರ, ಏನೂ ಎಡವಟ್ಟು ಆಗಿರೊ ಹಂಗ ಕಾಣತೈತಿ. ಅಂವ ಅರವಿ ಹರದಾವು ತಂದಕೊಡ್ರಿ, ಅಂತಾನ,ಇಕಿ ಉಲ್ಟಾಸೀದಾ ಮಾತಾಡಾಕ ಹತ್ಯಾಳ. ಏನ ಇವರ ಹಕಿಕತ್ತು? ಈ ಬೇವರ್ಸಿ ರಂಡಿ, ನನಗ ಗೊತ್ತಾಗದಂಗ ಅವನ ಹೊಟ್ಟಿ ತುಂಬ ಕೂಳ ಹಾಕ್ಯಾಳ. ಆ ಮಗ ಹೊಟ್ಟಿ ತುಂಬ ಕೊಂಡಿದ್ದೆ, ನೆತ್ತಿಗ ಪಿತ್ತ ಏರಿ ನನ್ನ ತಾವ ಮಾತಾಡಿದ.

ಕಿನ್ನರಿ : ಎಲ್ಲಿ ಮಟ ನಿಮ್ಮ ಕಾರುಬಾರು ನಡದೀತು? (ಮೌನ, ಸಿಟ್ಟಿಂದ) ಪ್ರತಿಯೊಂದಕ್ಕೂ ಒಂದು ಕೊನಿಗಾಲ ಇದ್ದೆ ಇರತೈತಿ ಈಗ ನಿಮ್ಮ ಸರತಿ.

ಅಂದಾನ ಶೆಟ್ಟಿ : (ಹುಚ್ಚೇರಿಸಿ ನಗುತ್ತಾ) ಎ ಮಳ್ಳ ಹೆಣ್ಣೆ, ಇದೊಂದು ಪರಂಪರೆ ನಮ್ಮ ತಾತ, ಮುತ್ತಾತ, ಅವರ ತಾತಾನೂ ತಾತರೆಲ್ಲಾ ಅನುಭವಿಸಿದ್ದು. ಅದಕ್ಕೆ ಒಂಚೂರು ಝಳ ತಾಗ್ತು ಅಂದ್ರ, ಇಡೀ ವ್ಯವಸ್ಥೆ ಸಿಡದು ಸ್ಫೋಟ ಗೊಳ್ಳತೈತಿ. (ಅಹಂ ನಿಂದ ಎದಿತಟ್ಟಾ) ಅದು ಯಾವುತ್ತೂ ಸಾಯೋದಿಲ್ಲಾ. (ನಗುವನು) ಯಾವತ್ತು ಸಾಯೋದಿಲ್ಲಾ, ನಿನ್ನಂತ ಹೆಂಗಸರು, ಕೆಳಗಿರೋ ಮಂದಿ, ಪಿಲಿ ಪಿಲಿ ಒದ್ದಾಡ್ತಾ ಬದಕಬೇಕು.

ಕ್ರಿಮಿಕೀಟಗಳಂತೆ, ನಾವು ಈ ವ್ಯವಸ್ಥೆಯೊಳಗ ಹುಟ್ಟಿರೋದೆ ಮತ್ತೊಬ್ಬರನ್ನ ದುಡಿಸಿಕೊಂಡು ಸುಖಪಡಾಕ.

ಕಿನ್ನರಿ : (ರೊಚ್ಚಿನಿಂದ) ಇವತ್ತಿಲ್ಲದಿದ್ರೂ, ನಾಳೆ ಖೂನನ ಸಂತತಿಗ ತಾಕತ್ತು ಬಂದೇ ಬರತೈತಿ. ಆವಾಗ ನೀವು - ನಿಮ್ಮಂತೋರು ಅವರು ಬದುಕಿರೊ ಜಾಗದಾಗ ಇರ್ತೀರಿ. (ಸ್ಪಷ್ಟವಾಗಿ) ಯಾಕಂದ್ರ ಬದುಕು ಒಂದು ಚಕ್ರದಂಗ. ಮ್ಯಾಲಿರೋನು ಮ್ಯಾಲಿರಾಕ ಸಾಧ್ಯ ಇಲ್ಲ. ಮೇಲಿಂದ ಕೆಳಾಗ ಬರಾಕಬೇಕು.

ಅಂದಾನ ಶೆಟ್ಟಿ : ಅದು ನಿನ್ನ ಭ್ರಮೆ. ಈ ಪರಂಪರೆ ಎಷ್ಟೇ ಕಾಲದಿಂದ ನಡ್ಕೊಂಡ ಬಂದಿರೋದು. ನೀನು ಖೂನ ನಂತೋರು ನಮ್ಮ ಗುಲಾಮರಾಗಿ ದುಡಿತಾ ಬಂದೀರಿ. ನಿಮಗ ಸ್ವಂತಿಕೆ ಅನ್ನೋದಿಲ್ಲಾ ನಾನು ನನಂತೋರು ಹೇಳಿದ್ದನ್ನ ಶಿರಸಾ ವಹಿಸಿ ಮಾಡೋದ ಒಂದೇ ನಿಮ್ಮ ಕೆಲ್ಸ.

ಕಿನ್ನರಿ : ಹೌದು, ಇಪ್ಪತ್ತು ವರ್ಷಗಳಿಂದ ನನ್ನೊಳಗ ಹುದುಗಿದ್ದ ನಿಮ್ಮ ಗುಲಾಮಗಿರಿಯ ರೊಚ್ಚು ಒಂದ ಕಟ್ಟೆಯಾಗಿ ಕಟ್ಟಿಕೊಂಡಿತ್ತು. ಇವತ್ತ ಹ್ಯಾಂಗ ಕಟ್ಟೆಹೊಡದು, ನಿಮ್ಮನ್ನ ಕೊಚ್ಚಿಕೊಂಡು ಹೊಂಟೈತಲ್ಲಾ ಹಂಗೆ, ತಡದಷ್ಟು ವೇಗದಿಂದ ಕೊಚ್ಚಿಕೊಂಡು ಹೋಗಾಕ ಅನುಕೂಲ ಆಕೈತಿ ಅನ್ನೋದನ್ನ ಮರಿಬ್ಯಾಡ್ರಿ.

ಅಂದಾನ ಶೆಟ್ಟಿ : (ಸಿಟ್ಟಿನಿಂದ ಆಕಿ ಜಡಿ ಹಿಡದು) ಈಗ ಬೊಗಳು ಎಷ್ಟು ವೇಗದಿಂದ ಪುಟಿತೀಯಾಂತ, ಹೂಂ. ಪುಟಿ, ಪುಟಿಯೇ ಬೇವರ್ಸಿರಂಡೆ. ನನ್ನ ವಿರುದ್ಧವೇ ಸಂಚು ಹೂಡ್ತಿಯಾ ಯಾವುತ್ತು ಆಕಾಶ ನೋಡದೋನಿಗ, ಭೂಮಿ ನೋಡೋದನ್ನ ಬಿಡಿಸಿ ಆಕಾಶ ತೋರ್ಸಿದೆ. ಇದು ನನ್ನ ವಿರುದ್ಧದ ಪಿತೂರಿ ಓ ಪಿತೂರಿ (ಓಡಿ ಬಂದು ಜಡಿ ಹಿಡಿದು ನೆಲಕಿ ನೂಕಿ ಹೊಡೆಯುವನು) ಸಾಯಿ, ನೀನು ಸಾಯಿ.

ಕಿನ್ನರಿ : (ಹೊಡ್ತ ತಾಳಲಾರದೆ) ಅಯ್ಯೋ ಸತ್ತೆ ಅವ್ವ, ಅಪ್ಪ ಯಾರಾದ್ರು ಬರ್ರಿ, ಬಿಡಿಸಿಕೊಳ್ರಿ... ಕೊಂದಹಾಕ್ತಾನಪ್ಪ, ಈ ರಾಕ್ಷಸ...ಕೊಲ್ತಾನ....

(ಜೋರಾಗಿ ಅಳುವಳು)

ಅಂದಾನ ಶೆಟ್ಟಿ : ನನ್ನ ವಿರುದ್ಧವೇ ಮೊದಲ ಕ್ರಾಂತಿ. ಓ ನನ್ನ ಪೂರ್ವಜರೆ ನಿಮ್ಮ ಪರಂಪರೆಯನ್ನು ಮುಂದಕ್ಕೆ ಒಯ್ಯಕ ಆಗ್ತಿಲ್ಲಾ (ಅಳುವನು) ನಾ ಏನು ಮಾಡಲಿ...? ಒಂದು ಪರಂಪರೆಗೆ ನನ್ನಿಂದಲೇ ಕೊನೆ. ನಾನು ಕನಸಿನೊಳಗು ಕಂಡಿರಲಿಲ್ಲಾ.... ಯಾಕೆ ಹಿಂಗಾತು? ಇಲ್ಲಾ ಇದಕೊಂದು ಗತಿ ಕಾಣಿಸಬೇಕು. (ಅವಳ ಕಡೀಗ ಬಂದು) ಎಳೆ ಮ್ಯಾಲ...ಏಳು ... ಹೊರಡು ಮನಿ ಬಿಟ್ಟು ಹೂಂ... ಹೊರಡು.

ಕಿನ್ನರಿ : (ನಿರ್ಧರಿಸಿರುವಂತೆ ಏಳುವವಳು) ಮನುಷ್ಯ ಗುಣಗಳಿಲ್ಲದ ಮನುಷ್ಯನ ಕೂಡ ಇರೋದಕ್ಕಿಂತ ಬ್ಯಾರಿ ಯಾವುದಾರು ಊರಾಗ ಭಿಕ್ಷೆ ಬೇಡಿ ಬದುಕಿದ್ರು ಪಾಡೈತಿ. (ಹೊರಡುವಳು)

ಅಂದಾನ ಶೆಟ್ಟಿ : (ಅವನ ಮೇಲೆ ಬೆಳಕು ಬಿದ್ದಿದೆ, ಒಂದು ರೀತಿಯ ಗೊಂದಲ ಏನೋ ಕಳಕೊಂಡಂತೆ) ನನ್ನ ಪರಂಪರೆಯ ಸಾವು, ಇದಕ್ಕೆ ಕಾರಣರ್‍ಯಾರು? ಎಷ್ಟೋ ಜನ್ಮಗಳಿಂದ ಲೀಲಾಜಾಲವಾಗಿ ನಡೆದುಬಂದಿದ್ದು. ಇದ್ದಕ್ಕಿದ್ದಂಗೆ ಬದಲಾತು, ಮುಂದಿನ ತಲೆಮಾರಿಗೆ ಏನು ಹೇಳಲಿ... (ತಲೆ ಹಿಡಿದುಕೊಂಡು) ಇದು ನನ್ನಿಂದಲೆ ಕೊನೆ ಕಂಡಿತೆ. ಶತ ಶತಮಾನಗಳಿಂದ ನಡೆದುಕೊಂಡೇ ಬಂದಿದ್ದ ಒಂದು ವ್ಯವಸ್ಥೆ ಈಗ ಕವಲು ಒಡೆಯುವುದರೊಂದಿಗೆ, ಓ ನನ್ನ ಪೂರ್ವಜರೆ ನನ್ನ ಕ್ಷಮಿಸಿ, ಕ್ರಾಂತಿ... ನನ್ನ ಹೆಂಡತಿ ಸಿಡಿದೆದ್ದಳು, ಗುಲಾಮ ಎದೆ ಸೆಟಸಿನಿಂತ ಎಂಥ ವಿಪರ್ಯಾಸ... (ಕುಸಿಯುವನು) (ದೀಪ ಆರುವುದು)

ಕಿನ್ನರಿ : (ಅಳುತ್ತಲೇ ಪ್ರವೇಶಿಸುವಳು) ಯಾವಾಗಲೋ ಹಿಂಗಾಗಬೇಕಿತ್ತು. ತಡ ಆತು. ಬಹಳ ತಡ ಆತು. ನಮ್ಮವ್ವ, ಅಜ್ಜಿ, ಎಲ್ಲಾ ಗುಲಾಮರಂತೆ ಬದುಕಿದ್ದರು. ಅವರಂತರಾಳದ ಎಷ್ಟೋ ಪ್ರಶ್ನೆಗಳಿಗೆ ಉತ್ತರ ಸಿಕ್ಕಿರಲಿಲ್ಲಾ, ಇವತ್ತ ಸಿಗ್ತು....

ಮೂಸ : (ಎದುರಿಂದ ಬರ್‍ತಾ, ಕಿನ್ನರಿ ಬಿಕ್ಕಳಿಸುತ್ತಿರೋದನ್ನ ಕಂಡವನೆ) ಅವ್ವಾ, ಯಾಕ್ರಿ, ಮನಿಬಿಟ್ಟು ಹೊರಗ ಬರದೋರು, ಇವತ್ತು, ಯಾಕ ಅಳ್ತಿದ್ದೀರಿ. ಯಾಕ್ರವ್ವ, ಏನಾತು, ಅನಾಥ ನನ್ನನ್ನ ನಿಮ್ಮ ಮಗಗಿಂತ ಹೆಚ್ಚು ಪ್ರೀತಿ ತೋರ್‍ಸಿದ ತಾಯಿ ನೀವು. ನಿಮಗ ಇಂಥ ಸ್ಥಿತಿ ಯಾಕವ್ವ ಬಂತು.

ಕಿನ್ನರಿ : ಏನ ಹೇಳ್ಲಿ (ಸುಮ್ಮನಾಗಿ) ಮನುಷ್ಯತ್ವ ಕಳ್ಕೊಂಡ ಮಂದಿ.

ಖೂನ : (ಗಂಭೀರವಾಗಿ) ಯಾರು ಅಪ್ಪಾರ?

ಕಿನ್ನರಿ : ತನ್ನ ವ್ಯವಸ್ಥೆಯನ್ನ ಜೋಪಾನವಾಗಿ ಮುಂದುವರಿಸಿಕೊಂಡು ಬಂದಿರೋ ನನ್ನ ಗಂಡ... ಅಂದಾನ ಶೆಟ್ಟಿ...

ಖೂನ : ನಿಮ್ಮ ಮಾತೆ ಅರ್ಥ ಆಗ್ತಿಲ್ಲಾ ಬಿಡ್ರಿ....

ಕಿನ್ನರಿ : ನಿನಗ ಅರ್ಥ ಆಗಿದ್ರ ಇಷ್ಟೆಲ್ಲಾ ಕಷ್ಟ ಪಡ್ತಿರಾಕಿಲ್ಲಾ ನೀನು. ಎಷ್ಟೋ ಜನ್ಮಗಳಿಂದ ನನ್ನಂಥ ಹೆಣ್ಣ ಹೆಂಗಸು ಮಾರಿ ಮುಚ್ಕೊಂಡು ಮನಿನಾಕಗ್ವಾಡಿನಡಕ್ಕ ಕುಂತಿರ್ತಿರಲ್ಲಾ.

ಖೂನ : (ಏನೂ ಅರ್ಥ ಆಗದೆ) ಅವ್ವಾ, ಆದದ್ದಾರೂ ಏನೂಂತ ಹೇಳ್ರಿ.

ಕಿನ್ನರಿ : ಹೇಳ್ತೀನಿ ಕೇಳು; ನೀನು ನನ ಗಂಡಗ ಅರವಿ ಕೊಡಿಸು ಅಂತ ಕೇಳಬಾರದಿತ್ತಂತೆ (ಅವನು ಅವಳ ಮಾರಿ ನೋಡುವನು) ಇದಕ್ಕೆ ನಾ ಕಾರಣ ನಾನು. (ಅವನಲ್ಲಿ ಏನೋ ಚಲನೆ) ನಿನಗ ಹೊಟ್ಟಿ ತುಂಬ ಊಟ ಉಣ್ಣಾಕ ಹಾಕಿ, ತಲಿಗ ಎಣ್ಣಿ ಕೊಟ್ಟು ಸವಲತ್ತು ಕೊಟ್ಟೆ ಅವನ ವಿರುದ್ಧ ಸಿಡದು ಏಳೋ ಹಂಗ ಮಾಡಿದ್ನಂತೆ ಅದೇ, ಅದೇ ನನ್ನ ದೊಡ್ಡ ತಪ್ಪು.

ಖೂನ : ಏನು? ನೀವು ಹಿಂಗ ಮಾಡಿದ್ರಂತ, ದರಿದ್ರ ನೀಚ ಮನುಷ್ಯ, ನೊಣ ಹೊಡಿತಿದ್ಹೋನ ಮನಿಯಾಗ ದುಡದು ಸತ್ತೋನು ನಾನು. ಅವನ ಇವತ್ತಿನ ಪರಿಸ್ಥಿತಿಗ ನಾನೆ ಕಾರಣ. ಕೊಟ್ಟ ಕೂಳುತಿಂದು ಕಾಲಲೆ ತೋರ್ಸಿತದ್ದನ ತಲಿಮ್ಯಾಲಿಟ್ಟು ಮಾಡಿದ್ನಲ್ಲಾ, ಅದೇ ತಪ್ಪು.

ಕಿನ್ನರಿ : ಖೂನ...

ಖೂನ : (ಆಕಿ ಕಡೀಗ ಲಕ್ಷ ಕೊಡದೆ) ನನ್ನ ಮೈಯಾನ ಕಸುಕಿತ್ತು ಅವನ ಪಾದದಡಿಗೆ ಇಟ್ಟೆ. ಕೈಯಾಗ ಕಸು ಇರೋಮಟ ದುಡಿತ್ತಿದ್ದೆ. ಆದ್ರ ನನ್ನ ವಂಚಿಸಿ ಒಂದು ಜಗತ್ತಿನ ಬೆಳಕು ತೋರಿಸಿದೆ ಕತ್ತಲೊಳಗ ಇಟ್ಟ.

ಕಿನ್ನರಿ : ಖೂನ, ಅದಕ್ಕೆ ನಾನು ಮನಿ ಬಿಟ್ಟ ಬಂದದ್ದು. ಅಲ್ಲಿ ಉಸಿರುಗಟ್ಟಿ ಸಾಯೋದಕ್ಕಿಂತ, ಉಪವಾಸವನವಾಸ ಎಲ್ಲಾರೂ ದೂರ ಸತ್ರ ಪಾಡಾದೀತು ಅಂದು ಒಂದ ಹಾದಿ ಹಿಡ್ಕೊಂಡು ಹೊಂಟೇನಿ. ನೀನು ನಿನಗ ಹ್ಯಾಂಗ ಅನಸತೈತೋ ಹಂಗ ಮಾಡು. (ಕ್ಷಣ ಮೌನ, ವಾತ್ಸಲ್ಯದಿಂದ ನೋಡುವಳು)

ಖೂನ : ಆಯ್ತು ಅಪ್ಪಾರ. ಈ ಜಗತ್ತೆ ಹಿಂಗ, ದುಡಿಯೋರಿದ್ರ, ದುಡಿಸಿ ಕೊಳ್ಳೋ ಮಂದಿನ ತುಂಬಿಕೊಂಡಾರ, ಸವಲತ್ತು ಪಡಿಯೋ ಮಂದಿ. ಸವಲತ್ತಿನ ಬಗ್ಗೆ ಯೋಚ್ನೆ ಮಾಡಲ್ಲ. ಛಳಿ - ಬಿಸಲ - ಮಳಿ ಕಾಣದ ಮಂದಿ ಬೆಚ್ಚಾಗ ಮನಿಯಾಗ ಕುಂತಿರ್‍ತಾರ. ಅದನ್ನ ಕಟ್ಟಿದ ಮಂದಿ ಛಳಿ ಹತ್ತಿ ಸಾಯ್ತಾರ. ನಾ ಬರ್‍ತೀನಿ, ನನಗ ಕೆಲ್ಸ ಗೊತ್ತೈತಿ ಬದಕ್ತೀನಿ.

ಕಿನ್ನರಿ : (ಗೊಂದಲದಿಂದ ತಾಳ್ಮೆ ಕಳ್ಕೊಂಡು ಅವನು ಹೋದ ದಿಕ್ಕನ್ನೆ ನೋಡ್ತಾ ಕುಳಿತುಕೊಳ್ಳುವಳು. ದೀಪ ಆರುವುದು)

ದೃಶ್ಯ ಐದು

(ಬೆಳಕು ಬಿದ್ದಾಗ ಆ ಮೂವರು ಒಂದೊಂದು ಕಡೀಗ ಮಾರಿ ಮಾಡ್ಕೊಂಡು ಕುಂತಿರುವರು. ಖೂನ ಹೇಳಿದ ಕತೆ ಕೇಳಿ ಅವರಿಗ ಕಸಿವಿಸಿಯಾಗಿ ಅಸಣು - ಸುವಾಲಿ - ಸಂಕಟ ಪಡುವರು)

ಖೂನ : (ಎದ್ದು ನಿಂತು ತನಗಾದ ಸ್ಥಿತಿಗೆ ಕಾರಣರಾದವರನ್ನ ಕುರಿತು ಸಿಟ್ಟು - ದುಃಖದಿಂದ) ಓ... ಪರಂಪರೆ ನಿರ್ಮಿಸುವವರೆ, ಹೇಳ್ರಿ, ನಾವು ಸಾಯಬೇಕ? (ಮುಂದೆ ಜನರ ಕಡೀಗಿ ಬಂದು) ನಮ್ಮಂತಹ ಕೋಟಿ ಮಂದಿ ನಿಮಗ ಸುಖ ಕೊಡಾಕ ಹತ್ತೀವಿ. ಆದ್ರೂ ನಮ್ಮನ್ನ ಮನುಷ್ಯರ ಹಂಗೆ ಯಾಕ ಕಾಣೋದಿಲ್ಲಾ. ದುಡಿಯೋರು ನಾವು ಸುಖ ಪಡೋರು ನೀವು. ನಮ್ಮ ಜೀವನದಾಗ ಹೊಟ್ಟೆ ತುಂಬಿಸಿಕೊಳ್ಳೋದು ಬಿಟ್ರೆ ಏನ ಉಳ್ಕೊಂಡೈತಿ?

ಸುವಾಲಿ : ಬಡವರ ಹೆಂಗಸರು ಅಂತಂದ್ರ, ಏನಂತ ತಿಳ್ಕೊಂಡಿರಿ, ಹರಕ ಸೀರಿ ಒಳಗ ರವಿಕೆಯೊಳಗಿಂದ ಕಾಣೋ ಮೈಯನ್ನ ಕಿತ್ತು ತಿನ್ನೋ ಹಂಗ ನೋಡೋ ಆ ಬೇವರ್ಸಿ ಗೌಡನ ಕೆಟ್ಟ ಕಣ್ಣುಗಳಿಂದ ಬಚಾವ ಆಗಾಕ ಒಂದ ಸೀರಿ ಬಯಸಿದ್ದು ನಂದ ತಪ್ಪಾ... ಆದ್ರ ನನಗೆ ಅವಮಾನ ಆತು. ಕುಡಕಗಂಡ, ನಿಷ್ಠುರ ಸಮಾಜ ಹೇಳ್ರಿ, ಹಂಗಾರ ನಾನು ಸಾಯಬೇಕ.

ಖೂನ : ಹೌದು ಈ ಭೂಮಿ ಮ್ಯಾಲ ನಾವು ಮನುಷ್ಯರಂತೇಳಿ ಹುಟ್ಟಿ ಬಂದದ್ದೆ ದೊಡ್ಡ ತಪ್ಪು. ಬೆನ್ನ ಬಗ್ಗಿಸಿ ದುಡದು ದುಡದು ಸಾಗಿದ್ದೆ ವಿನಃ ಪಡ್ಕೊಂಡದ್ದು ಏನೂ ಇಲ್ಲಾ. ನಾವಾದ ಮ್ಯಾಲ ನಮ್ಮ ಮಕ್ಕಳು, ಅವರ ಮಕ್ಕಳು ಹಿಂಗೆ... ಹೊಂಟೈತಿ... ಇದಕ ಕೊನಿ ಅಂಬೋದಿಲ್ಲಾ....

ಅಸಣು : ಹೌದ್ರಪ್ಪ, ಹುಟ್ಟಿದೋನು ಸತ್ತಮ್ಯಾಲ ಅವನ ಹೆಣ ಹೂಳಾಕ ಜಾಗ ಇಲ್ಲದ ಈ ಜಗತ್ತಿನ್ಯಾಗ ಬದಕಿ ಏನ ಪ್ರಯೋಜನ ಅಂತೀನಿ.

ಸುವಾಲಿ : ವಃ ನಮ್ಮನ್ನ ಸೃಷ್ಟಿ ಮಾಡ್ದೋನೆ, ನಮ್ಮನ್ಯಾಕೆ ಕಳಿಸಿದೆ. ಆದ್ರ ಈ ವ್ಯವಸ್ಥೆಯನ್ನ ಹಿಂಗ್ಯಾಕ ಮಾಡಿದೆ, ಒಬ್ಬ ದುಡಿಯೋನು ಒಬ್ಬ ಸುಖ ಪಡೋನು. ನಮಗ ಯಾಕಿ ನರಕ?

ಖೂನ : ಎಲ್ಲಿವರಿಗ ನಾವು ಈ ಬದುಕಿನೊಳ ಬದುಕಬೇಕು?

ಅಸಣು : ಬದುಕೋದ ಬ್ಯಾಡ ಅಂದ್ರ, ಸಾಯಾಕು ಬಿಡವಲ್ರು,
ಯಾಕಂದ್ರ, ಅವರ ಜೀತಕ ಮಂದಿ ಇಲ್ದಂಗ ಆಕ್ಕಾರ.

ಸುವಾಲಿ : ಹಂಗಾರ ಇದಕ್ಕ ಕೊನಿ ಯಾವಾಗ?

ಖೂನ : ನಾವು ನೀವು ಯೋಚ್ನೆ ಮಾಡಿದಾಗ.

ಅಸಣು : ಯೋಚ್ನೆ ಮಾಡುವುದು ಯಾವಾಗ?
ಯಾವಾಗ?

★★★

ದೇವರಿಲ್ಲದ ಗೋಡೆ

ರಚನೆ : **ದಮಯಂತಿ ನರೇಗಲ್ಲ**

ಪಾತ್ರಗಳು

ಶೀನಪ್ಪ ದೇಸಾಯರು	:	ಎಂಬತ್ತರ ಮೇಲಿನ ಹಿರಿಯರು
ರಾಘಪ್ಪ	:	ದೇಸಾಯರ ತಮ್ಮ
ರುಕ್ಮಿಣಿ	:	ರಾಘಪ್ಪನ ಹೆಂಡತಿ
ಶಾಂತಾ	:	ದೇಸಾಯರ ಮಗಳು
ಶಾಮ	:	ಶಾಂತಾನ ಪತಿ
ಆನಂದ	:	ರುಕ್ಮಿಣಿಯ ಮಗ
ವಸುಧಾ	:	ಆನಂದನ ಹೆಂಡತಿ
ಅರವಿಂದ	:	ದೇಸಾಯರ ಮಗ
ಕಿರಣ	:	ಆನಂದನ ಮಗ
ಅನು	:	ಶಾಂತಾನ ಮಗಳು
ಚಿನ್ಮಯ	:	ಶಾಂತಾನ ಮಗ
ಗೋದಕ್ಕ	:	ರುಕ್ಮಿಣಿಯ ಅಕ್ಕ

ಆಚಾರಿ, ಧನರಾಜಸೇಠ, ಪ್ರಫುಲ್ಲ, ಪರಸಪ್ಪ, ಆಳುಗಳು

ಒಬ್ಬ ಅಥವಾ ಇಬ್ಬರು ಸೂತ್ರಧಾರರು, ಇತ್ಯಾದಿ.

ಅಂಕ - ೧

ದೃಶ್ಯ - ೧

(ಮುಂದಿನ ಪರದೆ ಸರಿದಾಗ - ಸೂತ್ರಧಾರರು ಹಾಡುತ್ತ, ತಾಳ ಬಾರಿಸುತ್ತ ಮುಂದೆ, ಅವರ ಹಿಂದೆ ಧನರಾಜಸೇಠ, ಅವನ ಮಗ ಪ್ರಫುಲ್ಲ, ಆನಂದ ಮುಂದಾಳುಗಳಮತೆ ಠೀವಿಯಿಂದ, ಅವರ ಹಿಂದೆ ವಸುಧಾ, ಕಿರಣ, ಅನು, ಚಿನ್ಮಯ, ಅರವಿಂದ, ಕೊನೆಯಲ್ಲಿ ಉಳಿದೆಲ್ಲ ಪಾತ್ರಗಳು ಮೆರವಣಿಗೆ ಹೊರಟಂತೆ ಸಾಲಾಗಿ ಬರುತ್ತಾರೆ. ಹಿನ್ನೆಲೆಯಲ್ಲಿ ಹಾಡು :)

ನಡದsದ, ನಡದsದ, ನಡದsದ ನೋಡೋ
ಜೀವನದ ಮೆರವಣಿಗಿ ನಡದದ ನೋಡೋ
ಆನೀ ಅಂಬಾರೀ ಹತ್ಯಾರ ನೋಡೋ
ನಾ ಮುಂದ - ತಾ ಮುಂದ ಅಂತಾರ ನೋಡೋ
ಎಡವುತ - ತಡವುತ ನಡದಾರ ನೋಡೋ
ಧಣದು ಬತ್ತಿ ಬಸವಳಿದಾರ ನೋಡೋ
ನಡದsದ, ನಡದsದ, ನಡದsದ ನೋಡೋ

(ಸೂತ್ರಧಾರರು ರಂಗಮಂಚದ ಮಧ್ಯಕ್ಕೆ ಬಂದಾಗ ಅಲ್ಲಿದ್ದ ಚಿಕ್ಕ ವೇದಿಕೆಯನ್ನೇರಿ ನಿಂತು ಮೆರವಣಿಗೆಯಲ್ಲಿ ಹೊರಟ ಪಾತ್ರಗಳ ಪರಿಚಯ ಮಾಡಿಕೊಡುತ್ತಾರೆ.)

ಸೂತ್ರಧಾರರು : ಇವರು ಮುಂಬಯಿಯ ಪ್ರಸಿದ್ಧ ಧನರಾಜಸೇಠರು ಮತ್ತ ಅವರ ಮಗಾ ಪ್ರಫುಲ್ಲಾ... ಇವರು ಸಾಮಾನ್ಯ ವ್ಯಕ್ತಿಗಳಲ್ಲಿ ನಮ್ಮ-ನಿಮ್ಮ ಹಾಂಗ... ಮಹಾ ಘಟಾನುಘಟಿಗಳು - ಸಮಾಜದ ಹಿತಾಹಿತಗಳನ್ನು ತಮ್ಮ ಮುಷ್ಟೀ ಒಳಗ ಮುಚ್ಚಿ ಹಿಡಿದಿರತಾರ ಇವರಂಥವರು... ಇವರು ಮುಷ್ಟೀ ಬಿಚ್ಚಿದರ ಬೆಳಗಾಗತsದ, ಮುಷ್ಟೀ ಮುಚ್ಚಿದರ ಕತ್ತಲ್ಯಾಗತSದ... ಅವರ ಹಿಂದ ಬೆನ್ನುಹತ್ತಿದವರು ಆನಂದ, ವಸುಧಾ ಮತ್ತು ಅವರ ಮಗಾ ಕಿರಣಾ...ತಾವು ದಾರೀ ತೋರಸದಿದ್ದರ ಮೆರವಣಿಗಿ ಮುಂದsಹೋಗೂದುಲ್ಲಾ ಅಂತ ತಳಕೊಂಡಾರ ಇವರೆಲ್ಲಾ... ಆವರ ಹಿಂದ ಬಂದರು ನೋಡ್ರಿ... ನಮ್ಮ.. ನಿಮ್ಮಂಥಾ

ಸಾಮಾನ್ಯ ಜನಾ... ಮೂಗುದಾರಾ ಎಳದ ಕಡೇ ಹೋಗೂ ಅವರು... ಆದರS ಇವರದೂ ಏನು ಖರೇ ಅಲ್ಲೇನ್ರಪಾ...ತಲೀ ತಿರಗಿದರ ಮೂಗದಾರಾ ಹರಕೊಂಡು ಎತ್ಲಾಗ ಓಡ್ಯಾರು, ಏನು ಹೇಳ್ಳಿಕ್ಕೆ ಬರೂದುಲ್ಲಾ... ಭಾರೀ ಡೇಂಜರಸ್ ಜನಾರೆಪಾ ಇವರು... ಇವರೆಲ್ಲಾ ಹಿಂದಿನಿಂದ ದಬ್ಬಲಿಕ್ಕೆ ಹತ್ಯಾರ ಮೆರವಣಿಗೀ... ದಬ್ಬಿ, ದಬ್ಬಿ ದಣದು ಹೋಗ್ಯಾರ... ಅದು ಮುಂದಿನವರಿಗೆ ಹೊತ್ತS ಇಲ್ಲಾ... ಅವರು ಒಂದಸರೇ ಆದ್ರೂ ತಿರಗಿ ನೋಡಿದರಲ್ಲS ಗೊತ್ತಾಗೂದು? (ಮೆರವಣಿಗೆ ಮುಂದೆ ಸಾಗುತ್ತದೆ)

ಸೂತ್ರಧಾರರು : ಇನ್ನೊಂದು ಮಾತು... ಇಲ್ಲೆ ಪ್ರೇಕ್ಷಕರು ಯಾರೂ ಇಲ್ಲಾ, ಎಲ್ಲಾರೂ ನಾಟಕದಾಗಿನ ಪಾತ್ರಗಳS...ನೀವು - ನಾವು - ಎಲ್ಲಾರೂ... ಎಲ್ಲಾರೂ ಸ್ಕ್ರಿಪ್ಟನ್ಯಾಗ ಬರದದ್ದS ಮಾತಾಡವರು... ಆದರ ಅವು ನಮ್ಮ ಸ್ವತಃದ ಮಾತು ಅಂತ ತಳಕೊಂಡಿರ್ತೀವಿ ಅಪ್ಪ... ಈಗ ಇಲ್ಲೆ ನಾವು ತೋರಸು ನಾಟಕಾನೂ ಏನು ಹೊಸಾದಲ್ಲಾ.... ಇಷ್ಟ ದಿನಾ ನೀವೆಲ್ಲಾ ನೋಡೇ ನೋಡೀರಿ... ಅರೇ ಇವನ, ಮತ್ತ ನೋಡೀರಿ ಅಂತೀನೆಲ್ಲಾ...ಮಾಡೇ, ಮಾಡೀರಿ... ಇಲ್ಲೆ ಬರೋ ನಾವು ನೀವು ಮಾಡಿದ ನಾಟಕಕ್ಕೆ ಒಂದು ಕನಡೀ ಹಿಡೀತೀವಿ ಅಪ್ಪ ಈ ಕನಡ್ಯಾಗ ಹ್ಯಾಂಗ ಕಾಣಸತದ ನೋಡಿಕೊಳ್ರೀ. ಇಷ್ಟ ದಿನಾ ನೀವ ಆಡಿದ ಆಟಾ... ಭಾಳೇನು ಛಂದ ಕಾಣಸಲಿಕ್ಕಲ್ಲಾ... ಆದರೇನು, ನಮ್ಮದ ಮುಖಾ, ನೀವು ಛಂದಾ ಅನ್ನಬೇಕು... (ಮೆರವಣಿಗೆ ಇನ್ನೂ ಸಾಗಿದ್ದರೆ ಹಾಡು ಮುಂದುವರಿಯಬೇಕು)

(ಹಿಂದಿನ ಪರದೆ ಸರಿದಾಗ - ದೇಸಾಯರ ದೊಡ್ಡ ವಾಡೆ. ದೊಡ್ಡ ಅಗಸಿಯ ಬಾಗಿಲದಂತಹ ಕಟ್ಟಿಗೆಯ ಬಾಗಿಲು, ಅದನ್ನು ಮುಚ್ಚಲು ಇಬ್ಬರು ಆಳುಗಳು ಬೇಕಾಗಬಹುದು. ಒಳಗೆ ಬಂದೊಡನೆ ದೊಡ್ಡ ಕಲ್ಲು ಹಾಸಿನ ಅಂಗಳ. ಅದರ ಎರಡು ಬದಿಗೆ ಎತ್ತರ ಕಟ್ಟೆಯ ಪಡಸಾಲೆ. ಒಂದು ಬದಿಗೆ ದನಗಳ ಹೋದಲಿ. ಅಲ್ಲಿ ಎರಡು ಆಕಳುಗಳು ಮತ್ತು ಒಂದು ಕರು ನಿಶ್ಚಿಂತೆಯಾಗಿ ಮಲಗಿಕೊಂಡು ಬಾಯಾಡಿಸುತ್ತಿವೆ. ಕೆಲಸದಾಳು ಪರಸಪ್ಪ ಅಂಗಳವನ್ನು ಸ್ವಚ್ಛ ಮಾಡುತ್ತಿದ್ದಾನೆ.)

ಪಡಸಾಲೆಯಿಂದ ಒಳಗೆ ಪ್ರವೇಶಿಸಲು ಸುಂದರವಾಗಿ ಕೆತ್ತನೆಯ ಕೆಲಸ ಮಾಡಿದ ಮೂರು ದೊಡ್ಡ ದೊಡ್ಡ ಕಟ್ಟಿಗೆಯ ಬಾಗಿಲುಗಳು. ಪ್ರತಿಯೊಂದು ಬಾಗಿಲ ಮೇಲೆ ದೇವಿ-ದೇವತೆಗಳ ಚಿತ್ರಗಳು ಕೊರೆಯಲ್ಪಟ್ಟಿವೆ. ಪಡಸಾಲೆಯಲ್ಲಿ ಅಂಕಣಕ್ಕೊಂದರಂತೆ ದೊಡ್ಡ ದೊಡ್ಡ ಕಟ್ಟಿಗೆಯ ಕಂಬಗಳು, ಪ್ರತಿಯೊಂದು ಕಂಬದ ಮೇಲೂ ಕುಸರಿನ ಕೆಲಸವಿದೆ. ಒಟ್ಟಿನಮೇಲೆ ವಾಡೆ ಹಿಂದೆ ಒಂದು ದಿನ ಬಹಳ ವೈಭವವನ್ನು ಕಂಡಿತ್ತು ಎನ್ನುವದು ಸ್ಪಷ್ಟವಾಗಿದೆ.

(ಅಂಗಳದ ಮೇಲೆ ಗಚ್ಚಿಯಲ್ಲಿ ದೊಡ್ಡದಾದ ಬಿಸಿಲು ಕಿಂಡಿ. ಅದರೊಳಗಿಂದ ಬೆಳಗಿನ ನೀಲ, ನಿರಭ್ರ ಆಕಾಶವನ್ನು ಕಾಣಬಹುದು. ಹಿನ್ನೆಲೆಯಲ್ಲಿ ಬೆಳಗಿನ ಒಂದು ರಾಗದಲ್ಲಿ ಧ್ವನಿಮುದ್ರಿತ ಶಾಸ್ತ್ರೀಯ ಸಂಗೀತ ಕೇಳಿಬರುತ್ತಿದೆ)

(ಪಡಸಾಲೆಯ ಒಂದು ಬದಿಗೆ ಗೋಡೆಗೆ ಹತ್ತಿ ಒಂದು ದಿವಾಣವನ್ನಿಟ್ಟಿದ್ದಾರೆ ಅದರ ಮೇಲೆ ಹಳೆಯ ಕುತನಿ ಅರಿವೆಯ ಮೇಲ್ವಾಸು ಮತ್ತು ದಿಂಬುಗಳು. ದಿವಾಣದ ಮೇಲೆ ಚಿನ್ಮಯ ತಲೆಕೆಳಗಾಗಿ ಗೋಡೆಯ ಮೇಲೆ ಕಾಲೇರಿಸಿ ನಿಂತಿದ್ದಾನೆ. ಅಲ್ಲಿಯೇ ಕೆಳಗೆ ಒಂದು ಬದಿಗೆ ಅವನ ಅಕ್ಕ ಅನು ಒಂದು ತಾಟಿನಲ್ಲಿ ಅಕ್ಕಿಯನ್ನಿಟ್ಟುಕೊಂಡು ಆರಿಸುತ್ತ ಕುಳಿತಿದ್ದಾಳೆ. ಅವರಿಂದ ತುಸು ದೂರದಲ್ಲಿ ಒಂದು ಆರಾಮಕುರ್ಚಿಯ ಮೇಲೆ ಹಿರಿಯ ದೇಸಾಯರು ದಪ್ಪ ಕಾಜಿನ ಕನ್ನಡಕವನ್ನೇರಿಸಿಕೊಂಡು ವೃತ್ತಪತ್ರವನ್ನೋದುತ್ತ ಕುಳಿತಿದ್ದಾರೆ.)

ಅನು : ಅಜ್ಜಾ, ನೋಡಿಲ್ಲೆ, ಇಂವಾ ಏನು ನಡಸ್ಯಾನ?

ದೇಸಾಯರು : (ಪತ್ರಿಕೆಯಿಂದ ಮುಖವೆತ್ತದೇ) ಯಾರು, ಏನು ನಡಸ್ಯಾರ ?

ಅನು : ಆರಾಮಿಲ್ಲಾ ಮಲಕೋ ಅಂತ ಅವ್ವ ಹೇಳಿ ಹೋಗ್ಯಾಳ. ಈ ಚಿನೂನ್ನ ನೋಡಿಲ್ಲೆ, ಏನ ಮಾಡಲಿಕ್ಕೆ ಹತ್ಯಾನ?

ಕಾಕು : (ಒಳಗಿನಿಂದ ದನಿ) ಅನೂ, ಅಕ್ಕಿ ಆರಸೂದಾತೇನ ಬಾಳಾ ತೊಗೊಂಡು ಬಾ.

ಅನು : ಆತು ಅಜ್ಜೀ, ಈಗ ತರತೀನಿ...ಅಜ್ಜಾ, ಸ್ವಲ್ಪ ಬೈ ಅವಂಗ, ಹಿಂಗ ಧಾಂದಲ್ಯಾ ಹಾಕಿದರ ಮತ್ತ ಜ್ವರಾ ಬರತಾವ ಸಂಜೀನ್ಯಾಗ.

ಚಿನ್ಮಯ : ಏ ಅಕ್ಕಾ, ಯಾಕ ಸುಳ್ಳ - ಸುಳ್ಳ ಹೇಳತೀ... ನಾ ಎಲ್ಲೆ ಧಾಂದಲ್ಯಾ ಹಾಕಲಿಕ್ಕೆ ಹತ್ತೀನಿ... ನನ್ನಷ್ಟಕ್ಕ ನಾ ಮಲಕೊಂಡೀನಿ ಸುಮ್ಮನ...

ಅನು : ಇದು ಮಲಕೊಳ್ಳೂದ ... ಅವ್ವ ಬಂದಳು ತೊಗೋ ಬಯಿಸಿಗೋ ಇನ್ನ...

ಶಾಂತಾ : (ಒದ್ದೆ ಬಟ್ಟೆಗಳು ತುಂಬಿದ ಬಕೆಟ್ಟು ಕೈಯಲ್ಲಿ, ಸೀರೆಯನ್ನು ಸ್ವಲ್ಪ ಮೇಲಕ್ಕೆತ್ತಿ ಕಟ್ಟಿದ್ದಾಳೆ) ಚಿನೂ, ನಾ ಏನ ಹೇಳಿದ್ದೆ ನಿನಗ? ಇಲ್ಲಿದ್ದ ಮಂಗ್ಯಾನಾಟಾ ಮಾಡಬ್ಯಾಡಾ ಅಂತ ಹೇಳಿದ್ದಿಲ್ಲಾ?

ಚಿನ್ಮಯ : ನಾ ಮಂಗ್ಯಾನಾಟಾ ಏನ ಮಾಡೀನೀಗ? ನೀ ಹೇಳಿದಂಗ ಸುಮ್ಮ ಮಲಕೊಂಡೀನಲ್ಲಾ...

ದೇಸಾಯರು : (ಕೈಯಲ್ಲಿಯ ಪೇಪರನ್ನು ಮಡಿಚಿಡುತ್ತ) ಏನ ನಡದದ ಇದು? ಯಾಕ ಎಲ್ಲಾರೂ ಇಂಥಾ ಪರಿ ಬಾಯಿ ಮಾಡಲಿಕ್ಕೆ ಹತ್ತೀರಿ? ಚಿನೂ, ಇದೇನು, ಗಜಂ ಯಾಕ ನಿಂತೀದ್ಯೋ?

ಚಿನೂ : ಗಜಂ ನಿಂತಿಲ್ಲಾ ಅಜ್ಜಾ, ಮಲಕೊಂಡೀನಿ...

ಶಾಂತಾ : ಮತ್ತ ಅದ ... ಮಲಕೊಂಡೀಯಾ... ಇದು ಮಲಕೊಳ್ಳು ರೀತೀನ (ಕಾಲಮೇಲೆ ಚಟ್ಟನೇ ಹೊಡೆಯುವಳು)

ಚಿನೂ : (ಜಿಗಿದು, ದಿವಾಣದ ಮೇಲೆ ಮೊಣಕಾಲೂರಿ ಕುಳಿತು) ಅವ್ವಾ, ನೋಡು, ನಾ ಯಾಕ ಹಾಂಗ ಮಲಕೊಂಡಿದ್ದೆ ಹೇಳ್ತೀನಿ... ಅಜ್ಜಿ ನನಗ ಹೇಳ್ಯಾಳ, ದೇವರಿದ್ದ ಕಡೇ ಕಾಲು ಮಾಡಿ ಮಲಕೋಬಾರದು ಅಂತ... ಅಂದರ ನೀನ ಹೇಳು, ನಾ ಹ್ಯಾಂಗ ಮಲಕೋಬೇಕು? ಆ ಕಡೇ ಕಾಲು ಮಾಡಬೇಕಂದರ ದೊಡ್ಡ ಬಾಗಲಮ್ಯಾಲ ಗಣಪತಿ ಇದ್ದಾನ. ಈ ಕಡೇ ಬಾಗಲ ಮ್ಯಾಲೆ ಲಕ್ಷ್ಮಿ - ಸರಸ್ವತಿ, ಅತ್ಲಾಕಡೆ ವಿಷ್ಣು ... ಯಾ ಕಡೆ ಕಾಲು ಮಾಡಿ ಮಲಗಬೇಕು, ಹೇಳು?

ಅನು : ಯಾಕ, ಇತ್ಲಾ ಕಡೆ ಕಾಲು ಮಾಡಿ ಮಲಕೊಳ್ಳಿಕ್ಕೆ ಬರೂದುಲ್ಲೇನು? (ಆಕಳಿನ ಗೋದಲಿಯ ಕಡೆಗೆ ಕೈ ತೋರಿದತ್ತ ಕೇಳುವಳು)

ಚಿನ್ಮಯ : ನಿನ್ನ ತಲೀ, ಆಕಳ ಇಲ್ಲೇನು ಅಲ್ಲೆ? ಆಕಳಾ ಅಂದರೂ ದೇವರ ಅಂತ... ಅಜ್ಜಿ.... ದಿನಾ ಮುಂಜಾನೆ ಪೂಜೆ ಮಾಡ್ತಾಳ ಅವನ್ನ... ಅದಕ್ಕ ಜಂತೀ ಕಡೆ ಕಾಲು ಮಾಡಿ ಮಲಗಿದ್ದೆ... ಅಜ್ಜಾ, ನೀನ ಹೇಳು, ಅದ ಬರೊಬ್ಬರಿ ಹೌದಲ್ಲೋ?

ದೇಸಾಯರು : (ಗಹಗಹಿಸಿ ನಗುತ್ತ) ವಾ...ವಾ... ಏನು ಶಾಣ್ಯಾತಲೀ ಅದ ನೋ ನಿಂದು... (ಅವನ ಬೆನ್ನು ಚಪ್ಪರಿಸುವರು)

ಶಾಂತಾ : ಸಾಕು ನಿನ್ನ ದೀಡಪಂಡೀತತನಾ...ದಾದಾ... ನೀವು ನಗಬ್ಯಾಡ್ರಿ ಅವನ ಮಾತಿಗೆ ... ಹಿಂಗ ಶ್ಯಾಣ್ಯಾ, ಶ್ಯಾಣ್ಯಾ ಅಂದ ಅವನ್ನ ಮ್ಯಾಲೇರಿಸಿ ಕೂಡಿಸೀರಿ ನೀವು. (ಮಗನಿಗೆ) ಸಾಕಿನ್ನ ಮಾತು, ಸುಮ್ಮ ಒಳಗ ಹೋಗಿ ಮಲಕೋ ಹೋಗು.

ದೇಸಾಯರು : ಅಲ್ಲ ಶಾಂತಾ, ಹಾಂಗ ರೇಗತೀ ಯಾಕ? ಅಂವಾ ಎಷ್ಟ ವಿಚಾರಾ ಮಾಡ್ಯಾನ ನೋಡು... ಅಗದೀ ಒರಿಜಿನಲ್ ವಿಚಾರಾ ಮಾಡು. ತಲೀ ಅದ ನೋಡು ಅದು.

ಶಾಂತಾ : ಹೌದು, ಹೌದು, ಭಾಳ ಒರಿಜಿನಲ್ ತಲೀ ಅದ ದಾದಾ ಬರೇ ಇಂಥಾದರಾಗ ಉಪಯೋಗ ಆಗತದ ನೋಡ್ರಿ.

ದೇಸಾಯರು : ನೋಡೀಯಂತ ಅಂವಾ ಭಾರೀ ದೊಡ್ಡ ಮನಶ್ಯಾ ಆಗತಾನ ಮುಂದ

ಅನು : ಹೌದು, ಹೌದು, ಅಜ್ಜಾ, ಭಾರೀ ದಡ್ಡ ಮನಶ್ಯಾ ಆಗತಾನ ಅಂವಾ... ಪರೀಕ್ಷಾದಾಗ ಕೂತು ಪೂರಾ ಪೇಪರು ಸಹಿತ ಬರದು ಬರೂದುಲ್ಲಾ (ಅಣಗಿಸುವಳು)

ಶಾಂತಾ : ನೀ ಸುಮ್ಮನ ನಿನ್ನ ಕೆಲಸಾ ಮಾಡ, ತಾಸಾತು ಎರಡು ಚಟಾಕು ಅಕ್ಕೀ ಇಟಗೊಂಡು ಕೂತು, ಇನ್ನೂ ಆರಿಸಿಕೊಡಲಿಲ್ಲಾ..

ಅನು : ಆಗೇದ ಅರಸೂದು...ಯಾವಾಗಲೂ ನನ್ನ ಬೈನೀನು... ಚಿನೂ ಏನು ಮಾಡಿದರೂ ಅಂವಗೇನೂ ಅನ್ನೂ ಹಾಂಗಿಲ್ಲಾ.

ದೇಸಾಯರು : ಚಿನೂ ಇನ್ನೂ ಸಣ್ಣಾವಿದ್ದಾನ, ಬಾಳಾ, ಅವನೂ ಮಾಡ್ತಾನ ಮುಂದ, ... ಶಾಂತಾ, ಗಾಡೀ ಬರೂ ಹೊತ್ತಾತು... ಯಾರರ ಹೋಗ್ಯಾರೋ ಇಲ್ಲೋ ಸ್ಟೇಶನಕ್ಕ?

ಶಾಂತಾ : ಅರವಿಂದ ಆಗಳೇನ ಹೋಗ್ಯಾನ.

ಚಿನ್ಮಯ : (ರೇಗಿದ ದನಿಯಲ್ಲಿ) ಮಾಮಾ ಅವರು ಯಾಕ ಬರ್ತಾರ ಇಲ್ಲೆ?

ದೇಸಾಯರು : ಯಾಕಂದರ...ನಿಮ್ಮನ್ನೆಲ್ಲಾ ಭೆಟ್ಟ್ಯಾಗಲಿಕ್ಕೆ.

ಶಾಂತಾ : ಮಾಮಾನೂ ಇದ ಮನೀಯಂವಾ ಇದ್ದಾನ ಮಗನ...ಮುಂಬಯಿಗೆ ಹೋಗೂಕಿಂತಾ ಮೊದಲ ಅವನೂ ಇಲ್ಲೇ ಇರತಿದ್ದಾ.

ಚಿನ್ಮಯ : ಭೋಲೋ ಆತು, ಆವಾಗ ನಾ ಇನ್ನೂ ಹುಟ್ಟಿದ್ದಿಲ್ಲಾ... ಬರೇ ಬಯ್ತಾನ ಎಲ್ಲಾರಿಗೂ...ಹಂಗ್ಯಾಕ ಮಾಡಿದೀ, ಹಿಂಗ್ಯಾಕ ಮಾಡಿದೀ, ಅದನ್ನ ಅಲ್ಲ್ಯಾಕ ಇಟ್ಟೀ, ಇದನ್ನ, ಇಲ್ಲ್ಯಾಕ ಇಟ್ಟೀ ಅಂತ. ಅಂವಾ ಬರೂದ ಬ್ಯಾಡಾ.

ಶಾಂತಾ : ಛಿ ಚಿನೂ, ಹಾಂಗೆಲ್ಲಾ ಅನಬಾರದು...ಅಜ್ಜಿಗೆ ಸಿಟ್ಟು ಬರೂದುಲ್ಲೇನು? ಹಾಂಗೆಲ್ಲಾ ಮಾತಾಡಬಾರದು, ಕಿರಣನೂ ಬರ್ತಾನ ನಿನ್ನ ಜೋಡಿ ಆಡಲಿಕ್ಕೆ.

ಅನು : ಕಿರಣ ಏನು ಇವನ ಜೋಡಿ ಆಡತಾನ, ಅಂವಾ ಈಗ ಕಾಲೇಜಿಗೆ ಹೋಗತಾನ.

ಚಿನ್ಮಯ : ನನ್ನ ಜೋಡೀ ಆಡದ ಮತ್ತೇನು ನಿನ್ನ ಜೋಡೀ ಆಡತಾನೇನು... ಹೆಂಗಸರ ಜೋಡೀ?

ಅನು : ಆ ಹಾ ಹಾ... ಇಂವಾ ಭಾರೀ ದೊಡ್ಡ ಗಂಡಸು...

ಶಾಂತಾ : ನಡೀರಿ, ನಡೀರಿ ಸಾಕಿನ್ನ, ಚಿನೂ, ಈಗಂತೂ ಮಲಕೋ ನಡೀ, ಅವರು ಬಂದಿಂದ ಎದ್ದು ಬರೀಯಂತ.

ರುಕ್ಮಿಣಿ : (ಕೈ ಒರೆಸುತ್ತ ಹೊರಗೆ ಬರುತ್ತಾಳೆ) ಅಕ್ಕೀ ತೊಗೊಂಡು ಬಾ ಅಂತ ಎಷ್ಟೊತ್ತಾತು ಒದರಿಕೊಳ್ಳಿಕ್ಕೆ ಹತ್ತಿ ಅನೂ, ಆರಿಸಿ ಮುಗಿಸಿದ್ದರ ತರಬಾರದೇನು?

ಅನು : ಆಗೇದ ಅಜ್ಜಿ, ಈಗ ತರಾಕೇ ಇದ್ದೆ.

ರುಕ್ಮಿಣಿ : ಗಾಡಿ ಬಂದಿದ್ದೀತು ಆಗಳೇ, ಇನ್ನೊಂದು ಅರ್ಧಾ ತಾಸಿನ್ಯಾಗ ಬರತಾರ ಎಲ್ಲಾರೂ..., ತಾ ಇಲ್ಲೆ...

ಶಾಂತಾ : ಕಾಕೂ ಸುಮ್ಮನ ಗಡಿಬಿಡಿ ಮಾಡಕೋ ಬ್ಯಾಡಾ, ಇನ್ನೂ ಒಂದು ತಾಸು ಬೇಕು ಅವರು ಮನೀಗೆ ಬರಲಿಕ್ಕೆ ,... ಅದೂ ಗಾಡಿ ಬರೋಬ್ಬರಿ ಹೊತ್ತಿಗೆ ಬಂದರ...ಕಾಕೂ... ಏನೇನ ಮಾಡೀ ಮಗಾ - ಮೊಮ್ಮಗನ ಸಲುವಾಗಿ?

ರುಕ್ಮಿಣಿ : ಏನಿಲ್ಲವಾ, ದಿನದ ಅಡಿಗೀನ...ಒಂದನಾಲ್ಕು ಸಂಡಿಗಿ - ಹಪ್ಪಳಾ ಕರೀತೀನಿ ಅಷ್ಟ...

ಶಾಂತಾ : ಪಾಯಸಾ ಅಂತೂ ಮಾಡೇ ಮಾಡೀದಿ, ಹೌದಲ್ಲೋ?

ರುಕ್ಮಿಣಿ : ಮತ್ತ ಕಿರಣ ಬರತಾನ ಅಂದಮ್ಯಾಲ ಒಂದ ತಟಗು ಪಾಯಸಾ ಬ್ಯಾಡ?

ಶಾಂತಾ : ದಾದಾ ಮಾವಿನ ಹಣ್ಣು ತರಿಸಿಟ್ಟಾರ ಹಿಂಡಲಿಕ್ಕೆ... ಇನ್ನೇನ ಬೇಕು? ಜೋರದಾರ ಔತಣ ಅದ ತೊಗೋ ಇವತ್ತ.

ಶ್ಯಾಮ : (ಪ್ರವೇಶಿಸುತ್ತ) ಬಾಪರೇ, ಏನ ಬಿಸಲು! ಏನು ನಡದದ ? ಏನೋ ಭಾರೀ ಚರ್ಚಾ ನಡಧಂಗ ಕಾಣಸತದ?

ದೇಸಾಯರು : ಹಾಂ, ನೀನೂ ಬಂದ್ಯಾ? ಅಗದೀ ಬರೋಬ್ಬರಿ ಹೊತ್ತಿಗೆ ಬಂದಿ ನೋಡು. ಬಾ, ಕೈಕಾಲು ತೊಳಕೊಂಡು, ಹಣ್ಣು ಹಿಂಡಲಿಕ್ಕೆ ಕೂಡೋಣು.

ಶಾಂತಾ : ದಾದಾ, ನೀವೇನು ಕೂಡೂದು ಬ್ಯಾಡಾ, ನಾವೆಲ್ಲಾ ಹಿಂಡಿ ಮುಗಸತೀವಿ.

ದೇಸಾಯರು : ಛೆ, ಮನ್ಯಾಗ ಸೀಕರಣೆ ಮಾಡತದ ...ಹಣ್ಣ ಹಿಂಡಲಿಕ್ಕೆ ಕೂಡಲಿಲ್ಲಾಂದರ ಹ್ಯಾಂಗ ನಡೀತದ ...? ಎಲ್ಲಾರೂ ಕೂಡೂದ ಬರ್ರ್ಯೋ ಹುಡುಗುರ್ರ್ಯಾ, ಕೈ ತೊಳಕೊಂಡು ಬರ್ರಿ.

ಶಾಂತಾ : ದಾದಾ, ಬ್ಯಾಡಾ ನೀವು...ಯಾಕ ಸುಮ್ಮನ ಆಯಾಸಾ ಮಾಡಿಕೋತೀರಿ? ನಾವೆಲ್ಲಾ ಹಿಂಡಿ ಮುಗಸತೀವಿ, ಅನು, ಹೋಗು. ಎಲ್ಲಾ ಹಣ್ಣು ತೊಳಕೊಂಡು ಬಾ. ಬರ್ರಿ, ಅಳ್ಯಾ ದೇವರ , ಅರಬೀ ಬದಲೀ ಮಾಡಿ..

ಶ್ಯಾಮ : (ನಗುನಗುತ್ತ) ಬಾಯಲೇ ಆನ್ನೂದು ಅಲ್ಲಾ ದೇವರು... ಕರಿಯೂದು ಕೆಲಸಾ ಮಾಡಬರ್ರಿ ಅಂತ..

ಶಾಂತಾ : ಕೂಡಿಸಿ ಪೂಜಿ ಮಾಡೂ ದೇವರು ಬ್ಯಾರೇನ, ಹೇಳಿದ ಕೆಲಸಾ ಮಾಡೂ ದೇವರು ಬ್ಯಾರೇನ ಇರತಾರ. ಇಷ್ಟು ಹುಡುಗರಿಗೆ ಕಲಸ್ತೀರಿ, ಇದೂ ನಿಮಗ ಗೊತ್ತಿಲ್ಲ ಇನ್ನೂ? (ಶ್ಯಾಮ ಗಲಿಬಿಲಿಗೊಂಡು ಅವಳ ಮುಖದ ಕಡೆಗೆ ನೋಡುವನು. ಅಡಿಗೆ ಮನೆಯಿಂದ ಅದೇ ಹೊರಬಂದ ರುಕ್ಮಿಣಿ ಕಾಕೂ ಸ್ವಲ್ಪ ಮುನಿಸಿನಿಂದ ಶಾಂತಾನ ಕಡೆಗೆ ನೋಡುವಳು. ಅನು ಹಣ್ಣುಗಳನ್ನು ಹೊತ್ತು ತರುವಳು.)

ದೇಸಾಯರು : ಶಾಂತಾ, ಸಾಕಿನ್ನ ಮಾತು, ನಡೀರಿ ಹಣ್ಣು ಹಿಂಡಲಿಕ್ಕೆ ಕೂಡೂಣು...ರುಕ್ಮಿಣಿ, ಮುಗೀತೇನು ಎಲ್ಲಾ ಅಡಿಗಿ?

ರುಕ್ಮಿಣಿ : ಹೂಂ, ಆತು, ಏನು ಮಹಾ ಅಡಿಗಿ...ದಿನದ್ದ...

(ಎಲ್ಲರೂ ಟಾವೆಲ್ಲು - ಪಂಜೆ ಸುತ್ತಿಕೊಂಡು ತಯಾರಾಗಿ ಹಣ್ಣು ಹಿಂಡಲು ಕೂಡುವರು)

ದೃಶ್ಯ - ೨

(ಪರದೆ ಸರಿದಾಗ ಎಲ್ಲರೂ ಪಡಸಾಲೆಯಲ್ಲಿ ನಿಂತಿದ್ದಾರೆ. ಮುಂಬಯಿಯಿಂದ ಮಗ ಆನಂದ, ಸೊಸೆ ವಸುಧಾ ಮತ್ತು ಮೊಮ್ಮಗ ಕಿರಣ ಆಗತಾನೇ ಬಂದಿಳಿದಿದ್ದಾರೆ)

ದೇಸಾಯರು : (ಎಲ್ಲರಿಗಿಂತ ಮುಂದಾಗಿ) ಬರ್ರಿ, ಬರ್ರಿ, ಗಾಡಿ ಲೇಟಾತಲ್ಲಾ ಯಾಕೋ?

ಆನಂದ : ಹೂಂ, ಲೇಟಾತು. ಎಂದ ವ್ಯಾಳ್ಯಾಕ್ಕ ಬರತಾವ ಗಾಡೀ ಇಲ್ಲೆ? ನಮಸ್ಕಾರಾ ಮಾಡ್ತೇನಿ ಕಾಕಾ. (ಕಾಕಾ ಮತ್ತು ತಾಯಿ ರುಕ್ಮಿಣಿಗೆ ಎಲ್ಲರೂ ಬಗ್ಗಿ ನಮಸ್ಕಾರ ಮಾಡುವರು)

ದೇಸಾಯರು : ಆಯುಷ್ಯವಂತರಾಗ್ರಿ, ಕೂಡ್ರಿ, ಕೂಡ್ರಿ, ಅನೂ, ಕುಡೀಲಿಕ್ಕೆ ನೀರು ತಂದುಕೊಂಡು ಬಾಳಾ ಅವರಿಗೆ... ಏನೋ ಕಿರಣಾ, ಎಷ್ಟು ಉದ್ದಾಗಿಬಿಟ್ಟೀಯೋ ಒಂದ ವರ್ಷದಾಗ?

ರುಕ್ಮಿಣಿ : ಮತ್ತ...ಈಗ ಬೆಳಿಯೂ ವಯಸ್ಸ ಅವಂದು... (ಅವಳ ಮುಖ ಹಿಗ್ಗಿ ಹೀರೇಕಾಯಿಯಾಗಿದೆ. ಉತ್ಸಾಹದಿಂದ ಮೊಮ್ಮಗನ ಹಿಂದೆ ಮುಂದೆ ಓಡಾಡುತ್ತಿದ್ದಾಳೆ) ನೇರು ಕುಡೀತೀಯೋ ಏನು ಎಳನೀರು ಕೊಡಲ್ಯೋ ಅಪ್ಪು, ನಿನಗ? ತಗಿಸಿಟ್ಟೀನಿ ನಿನ್ನ ಸಲುವಾಗಿ, ತರತೀನಿ ತಡಿ.

ಅನು : ನಾ ತರತೀನಿ ಅಜ್ಜಿ, ಎಲ್ಲಿಟ್ಟೀದಿ?

ರುಕ್ಮಿಣಿ : ಅಲ್ಲೇ ದೇವರ ಮುಂದ ಮೂಲ್ಯಾಗ ಇಟ್ಟೀನಿ ನೋಡು.

ಚಿನ್ಮಯ : ನನಗೂ ಎಳನೀರು...(ಕುಣಿಯುತ್ತ ಒಳಗೆ ಹೋಗುವನು)

ರುಕ್ಕಿಣಿ : ಮುಂಜಾನೆ ಒಮ್ಮೆ ಕುಡದಿಲ್ಲೇನೋ ಚಿನೂ. ಮತ್ತ ಯಾಕ ಈಗ?

ಶಾಂತಾ : ಚಿನೂ, ಬಾ ಇಲ್ಲೆ (ಸಿಟ್ಟಿನಿಂದ ಅವನ ಕೈ ಹಿಡಿದು ಎಳೆದುಕೊಂಡು ಹೋಗುವಳು)

(ಅನು ಒಂದು ಗ್ಲಾಸಿನಲ್ಲಿ ಎಳನೀರು ಹಾಕಿ ತಂದು ನಾಚುತ್ತ ನಾಚುತ್ತ ಕಿರಣನ ಕೈಯಲ್ಲಿ ಕೊಡುವಳು)

ಕಿರಣ : ಥ್ಯಾಂಕ್ಸ್... ಪರೀಕ್ಷಾ ಮುಗೀತೇನು?

ಅನು : ಯಾವಾಗೋ ಮುಗದದ ಕಿರಣ್. ಈ ಸಾರೆ S S C ಹೌದಲ್ಲೋ, ಸೂಟಿ ಒಳಗೂ ಕ್ಲಾಸ್ ಗೀಸ್ ಇರಬೇಕಲ್ಲಾ?

ಕಿರಣ : ಈ ಸರೆ S S C ಖರೇ, ಆದರ ಇಲ್ಲೇನು ನಮಗ ಸ್ಪೆಶಲ್ ಕೋಚಿಂಗ್ ಬೀಚಿಂಗ್ ಇರೂದುಲ್ಲಾ.

ದೇಸಾಯರು : (ಮಧ್ಯೆ ಜೋರಾಗಿ) ನಡೀರಿ ಸ್ನಾನಾ..ಗೀನಾ ಮುಗಸರಿ. ಅಡಿಗಿ ತಯಾರದ, ಊಟಾ ಮಾಡೂಣಂತ, ಪರಸಪ್ಪಾ... ಏ ಪರಸಪ್ಪಾ, ಇವರ ಸಾಮಾನೆಲ್ಲಾ ಮ್ಯಾಲೆ ಒಯ್ದಿಡೋ

(ಪರಸಪ್ಪನ ಹಿಂದೆ ಅವರೆಲ್ಲ ಕೋಣೆ ಬಿಟ್ಟು ಹೊರಗೆ ಹೋಗುವರು)

(ಶ್ಯಾಮ-ಶಾಂತಾ ಬದಿಯ ಕೋಣೆಯಿಂದ ಹೊರಗೆ ಬರುವರು.)

ಶ್ಯಾಮ : ನೀನೂ ಸಣ್ಣ - ಸಣ್ಣ ಮಾತಿಗೆ ತಲೀ ಕೆಡಿಸಿಗೋತೀ, ನೋಡು.

ಶಾಂತಾ : ನೋಡ್ರೆಲ್ಲಾ ಮತ್ತ... ಒಂದ ಎಳನೀರಿನ ಸಲುವಾಗಿ ಹ್ಯಾಂಗ ಅಂದಳು ಕಾಕೂ.

ಶ್ಯಾಮ : ಅದರಾಗೇನು ತಪ್ಪದ? ಮುಂಜಾನೆ ಒಮ್ಮೆ ಕುಡಿದಿದ್ದ ಅಂದರ ಆತು, ಕುಡದವರ ಸಂಗತೀ ಎಲ್ಲಾ ಕುಡೀತೀನಿ ಅಂದರ ಯಾರರ ಹೇಳ ಬೇಕಾಗತದ.

ದೇಸಾಯರು : (ರಂಗದ ಇನ್ನೊಂದು ಬದಿಯಿಂದ ಮುಂದೆ ಬರುತ್ತ) ಯಾರು, ಯಾರು ಕುಡದಾರ? ಕುಡದು ಯಾರು ಬಂದಾರ?

ಶ್ಯಾಮ : ಛೆ, ಯಾರೂ ಕುಡದಿಲ್ಲಾ... ಕಾಕಾ... ಅದ ಆ ಎಳನೀರಿನ ಸಂಬಂಧಿ...ಶಾಂತಾನ ಮೂಗಿನ ಮ್ಯಾಲಿನ ಸಿಟ್ಟು..

ದೇಸಾಯರು : ಹೂಂ... ಅದ ...ಶಾಂತಾ, ನೀ ಹಿಂಗ ಇಷ್ಟಿಷ್ಟಕ್ಕೆಲ್ಲಾ ತಲೀ ಕೆಡಿಸಿಗೋಬಾರದವ್ವಾ? ತಟಕ್ಕನ ಅಂದ ಬಿಡ್ತಾಳ. ಆದರ ನಿನ್ನ ಮ್ಯಾಲೆ ಅಂತಃಕರಣ ಏನು ಕಡಿಮೀ ಅದ ಏನು ಆಕೀಗೆ? ನಡೀ, ನಡೀ, ಊಟದ ತಯಾರೀ ಮಾಡ್ರಿ, ಎಲ್ಲಾರೂ ಹಸದು ಬಂದಾರ.

(ಅರವಿಂದ ಹೊರಗಿನಿಂದ ಬರುತ್ತಾನೆ)

ಎಲ್ಲಿದ್ಯೋ, ಇಷ್ಟೊತ್ತನಕಾ, ಅವರನ ಕರಕೊಂಡು ಬಂದಾಂವಾ ಒಳಗ ಬರಬಾರದೇನು ಅವರ ಜೋಡೀ?

ಅರವಿಂದ : ಹೊರಗ ಜೋಶೀ ವಸಂತ ಭೆಟ್ಟಿ ಆದಾ, ಮಾತಾಡಕೋತ ನಿಂತಿದ್ದೆ.... ಎಲ್ಲಿದ್ದಾರ VIPs?

ದೇಸಾಯರು : ಯಾರು...?

ಅರವಿಂದ : VIPs ಅಂದೆ. ಮುಂಬಯಿ ಶಹರದಿಂದ ಈ ಹಳ್ಳಿ ಊರಿಗೆ ಬರೂ ಕೃಪಾ ಮಾಡಿದವರು VIPs...

ದೇಸಾಯರು : ಶ್ಯ.... ಇಲ್ಲದ್ದ ಕೊಂಕು ಮಾತಾಡಬ್ಯಾಡಾ...ಮ್ಯಾಲೆ ತಮ್ಮ ಕೋಣೆಗೆ ಹೋಗ್ಯಾರ. ನಡೀ, ಕೈಕಾಲು ತೊಳಕೋ ನಾನೂ ಬರ್ತೀನಿ ಈಗ (ಒಳಗೆ ಹೋಗುವನು)

ಅರವಿಂದ : ಅಕ್ಕಾ, ಮತ್ತು ಯಾರು ಬರವರಿದ್ದಾರ ಮುಂಬಯಿಯಿಂದ? ಅಣ್ಣ ವೈನೀದು ಏನೋ ಗುಸು-ಗುಸು ಮಾತು ನಡದಿತ್ತು. ಬರೂವಾಗ... ಅವರ ಸಲುವಾಗಿ ನೀನ ನೋಡಿ ರೂಮು ತಯಾರು ಮಾಡಿಡು ಅಂತ ಹೇಳ್ತಿದ್ದಾ ಅಣ್ಣಾ ವೈನೀಗೆ.

ಶಾಂತಾ : ಏನೋಪ್ಪಾ, ನನಗೂ ಗೊತ್ತಿಲ್ಲಾ, ನಮಗ ಯಾರು ಏನು ಹೇಳ್ತಾರ? ಯಾರರ ಅಣ್ಣನ ಗೆಳ್ಯಾರು ಬರತಿದ್ದಾರು.

ಅರವಿಂದ : ಇರಲಿಕ್ಕಿಲ್ಲ, ಯಾರೋ ದೊಡ್ಡ ಮನಶ್ಯಾರು ಅಂತ ಕಾಣತದ

ಶಾಂತಾ : ಅಣ್ಣನ ಗೆಳ್ಯಾರು ಅಂವ್ಯಾಲ ದೊಡ್ಡ ಮನಶ್ಯಾರ ಇರಬೇಕು ಮತ್ತ...ನಮ್ಮ ಅಣ್ಣ ಏನು ಕಡಿಮೀ ದೊಡ್ಡ ಮನಶ್ಯಾ ಇದ್ದಾನ..?

ಅರವಿಂದ : ಇಲ್ಲ, ಅಕ್ಕಾ, ಹಾಂಗಲ್ಲಾ, ವೈನೀ ಅಂತಿದ್ದರು... ಸುಡುಗಾಡು ಹಳೇ ಹಾಳಮನಿ...ಅವರನ್ನಿನ್ನ ಯಾವ ಯಾವ ರೂಮಿನ್ಯಾಗ ಇಳಸೂದು ಅಂತ... ಮತ್ತ ಅಂದರು...ಅವ್ವನ ಜೋಡೀ ಇವತ್ತ ಮಾತಾಡಿ ಅವರ ಕಿವೀಮ್ಯಾಲ ಹಾಕಿಬಿಡ್ರಿ ಮತ್ತ...ಶೇಡಜೀ ಯಾತಕ್ಕ ಬರತಾರ, ಏನು ಅಂತ.

ಶಾಂತಾ : ಒಮ್ಮಿಂದೊಮ್ಮಿಗಿಲೇ ಇಂವಾ ಹಿಂಗ ಧುತ್ತಂತ ಬಂದದ್ದ ನೋಡಿದರ ನನಗೂ ಅನಸತದ ಏನೋ ಮಸಲತ್ತು ಮಾಡಕೊಂಡ ಬಂದಿರಬೇಕು ಅಂತ... ಬರಲೇಳು, ಬಂದ ಮ್ಯಾಲೆ ಗೊತ್ತಾಗೇ ಆಗತದ ಅಲ್ಲಾ. ಇವತ್ತಿಲ್ಲಾ ನಾಳೆ ಹೊರಗ ಬಂದ ಬರತದ. ನಡೀ, ಎಲೀ ಹಾಕೇದ, ಊಟಕ್ಕ ನಡೀ ಈಗ. (ಇಬ್ಬರೂ ಒಳಗೆ ಹೋಗುವರು)

ದೃಶ್ಯ - ೩

(ಪಡಸಾಲೆಯಲ್ಲಿ : ದೇಸಾಯಿರು ತಮ್ಮ ಆರಾಮ ಕುರ್ಚಿಯಲ್ಲಿ : ಆನಂದ, ಶ್ಯಾಮು ಹತ್ತಿರದ ಎರಡು ಕುರ್ಚಿಗಳಲ್ಲಿ: ದಿವಾಣದ ಮೇಲೆ ವಸುಧಾ ಎಲ್ಲರಿಗೆಂದು ಮುಂಬಯಿಯಿಂದ ತಂದ ವಸ್ತುಗಳನ್ನು ಹರಡಿಕೊಂಡು ಕುಳಿತಿದ್ದಾಳೆ. ಶಾಂತಾ, ರುಕ್ಮಿಣಿ ಮತ್ತು ಅನು ಒಂದು ಬದಿಗ್ ನೆಲದ ಮೇಲೆ ಕುಳಿತು ಚವಳಿಕಾಯಿ ಮುರಿಯುತ್ತಿದ್ದಾರೆ. ಕಿರಣ ಏನೂ ಕೆಲಸವಿಲ್ಲದೆ ಮೇಲಿಂದ ಮೇಲ ಅವರ ಸುತ್ತಮುತ್ತಲೂ ಸುಳಿದಾಡುತ್ತಿದ್ದಾನೆ. ಚಿನ್ಮಯ ಎಂದಿನಂತೆ ತನ್ನವೇ ಆದ ಮಂಗನಾಟದಲ್ಲಿ ತನ್ಮಯನಾಗಿದ್ದಾನೆ)

ವಸುಧಾ : (ಒಂದು ಪ್ಯಾಕ್ ಎತ್ತಿ ದೇಸಾಯರ ಕೈಗೆ ಕೊಡುತ್ತ) ದಾದಾ, ಇವು ನಿಮಗ ಧೋತರ ಜೋಡಿ ಮುದ್ದಾಂ ಗಿರಗಾಂವ ತನಕಾ ಹೋಗಿ ಇವರ ತಂದಾರ ನಿಮ್ಮ ಸಲುವಾಗಿ.

ದೇಸಾಯರು : ಛೆ, ನನಗ್ಯಾತಕ್ಕ ತಂದೆವಾ ಇವೆಲ್ಲಾ... ನಿನಗ ಗೊತ್ತ ಅದ ಅಲ್ಲಾ, ನಾಂ ಖಾದೀ ಉಡತೀನಿ ಅಂತ.

ವಸುಧಾ : ಸಾಕು ಬಿಡ್ರಿ, ದಾದಾ ಇನ್ನ, ಇಷ್ಟ ವಯಸ್ಸಾದ ಮ್ಯಾಲ ಏನು ಆ ದಪ್ಪ-ದಪ್ಪ ಧೋತರಾ ಉಡತೀರಿ....? ಇವನ್ನ ಉಡ್ರಿ, ಒಗೀಲಿಕ್ಕೂ ಹೌರಗ ಆಗ್ತಾವ.

ದೇಸಾಯರು : ಯಾವಾಗ ಕಾಲೇಜಿನ ದಿನದಾಗ ಇಂಥಾವೆಲ್ಲಾ ಅರಿವೀ ಉಡಲಿಲ್ಲಾ, ಇನ್ನ ಈಗ ಉಡಬೇಕ? ನಮ್ಮ ತಲೆಮಾರಿಗೇನು ಶಕ್ಯ ಇಲ್ಲಾ ಬಿಡು.

ಶಾಂತಾ : ವೈನೀ, ಖಾದೀ ವಳಗೂ ಈಗ ರಗಡ ಸುಪೀರಿಯರ್ ಖಾದೀ ಬಂದದ ...ಎಂಥಾ ತೆಳ್ಳಗನ್ನ ಧೋತರಾ ತಂದಿದ್ದರು ಖಾದೀನ ಇವರು ದಾದಾನ ಸಲುವಾಗಿ ಬೆಂಗಳೂರಿನಿಂದ...

ವಸುಧಾ : (ಸಿಟ್ಟಿನಿಂದ ಅವಳ ಕಡೆಗೆ ತಿರುಗಿ ನೋಡುವಳು) ಏನ ಆದರೂ ಇಷ್ಟು ತೆಳ್ಳಗಿರಲಿಕ್ಕೆ ಶಕ್ಯ ಇಲ್ಲ ಬಿಡು.

ದೇಸಾಯರು : ಹೂಂ, ಇರ್ಲಿ ತಾ, ಮಳೆಗಾಲದಾಗ ಅರಿವಿ ಒಣಗದಿದ್ದಾಗ ಬಂದಾವು.

ವಸುಧಾ : (ಇನ್ನೊಂದು ಪ್ಯಾಕ್ ಎತ್ತಿ) ಅವ್ವಾ, ನಿಮ್ಮ ಸಲುವಾಗಿ ಇದು. ಬಿಳೇ ಪತ್ತಲಾ ಬೇಕು ಅಂದಿದ್ದಿರಲ್ಲಾ...ತೊಗೋಳ್ರಿ.

ರುಕ್ಮಿಣಿ : (ಸಂಭ್ರಮದಿಂದ) ಅಯ್ಯೋ, ತಂದ ಬಿಟ್ಟೇನು ನೆನಪಲೇ? ನೋಡ ಶಾಂತಾ, ಛಂದದ ಅಲ್ಲ...?

ಶಾಂತಾ : ಹೂಂ... ಛಂದದ...

ವಸುಧಾ : ತೊಗೋಳ್ರಿ, ಶಾಮಣ್ಣ...ಇವು ನಿಮ್ಮ ಸಲುವಾಗಿ...ಇವರು ತಮ್ಮ ಸಲುವಾಗಿ ತಂದಿದ್ದರ...ಒಂದೆರಡು ಸರೇ ಹಾಕ್ಕೊಳ್ಳೂದರಾಗ ಬಿಗೀ ಆಗಲಿಕ್ಕೆ ಹತ್ಯಾವ...ನಿಮಗ ಬರತಾವ...ಹೊಸಾವ ಅವ.

ಶ್ಯಾಮ : ವೈನೀ, ಇಂಥಾ ಫ್ಯಾನ್ಸೀ ಅರಬೀ ಎಲ್ಲಾ ನಾ ಹಾಕ್ಕೋಳ್ಳುದುಲ್ಲಾ, ಗೊತ್ತದ ಅಲ್ಲಾ ನಿಮಗ? ಈ ಒಂದು ಕುರ್ತಾ, ಪಾಯಜಮಾ ನಮ್ಮ ವೇಷಾ...ಇವನ್ನೆಲ್ಲಾ ಹಾಕ್ಕೊಂಡು ಹೋದರ ಜೋಕರ್ ಕಂಡಹಾಂಗ ಕಾಣಸಬಹುದು ಸಾಲ್ಯಾಗ ಹುಡುಗರಿಗೆ.

ಆನಂದ : ಯಾಕ ಇವನ್ನೆಲ್ಲಾ ಹಾಕ್ಕೊಳ್ಳೂ ನಾವೇನು ಜೋಕರ ಹಾಂಗ ಕಾಣಸತೀವೇನಾ?

ಶ್ಯಾಮ : ಛೆ, ಛೆ... ಎಲ್ಲಾರೂ ಹಾಂಗ ಜೋಕರ್ ಹಾಂಗ ಕಾಣಸಲಿಕ್ಕೆ ಶಕ್ಯ ಇಲ್ಲಾ...ಅದಕ್ಕ ಮೊದಲ ಜೋಕ್ ಮಾಡಲಿಕ್ಕೆ ಅಥವಾ ಕನಿಷ್ಠ ಜೋಕ್ ಎಂಜಾಯ್ ಮಾಡಲಿಕ್ಕೆರ ಬರಬೇಕಾಗತದ... ಥ್ಯಾಂಕ್ಸ್ ವೈನಿ, ಆದರ ಇವೇನು ನನಗ ಉಪಯೋಗ ಇಲ್ಲಾ.

(ಶಾಂತಾ, ಅನು ಬಾಯಿ ಮುಚ್ಚಿಕೊಂಡು ಮುಸಿ ಮುಸಿ ನಗುವರು.)

ಆನಂದ : (ಸಿಟ್ಟಿನಿಂದ) ಇರ್ಲಿ ಬಿಡು ವಸುಧಾ, ತಗದಿಡು, ಯಾರರ ಬಡವರಿಗೆ ಕೊಡಲಿಕ್ಕೆ ಬರತದ.

ಶ್ಯಾಮ : ಹಾಂ, ನಾನೂ ಅದ ಅಂತೀನಿ, ಸುಮ್ಮನ ಇಲ್ಲೀತನಕಾ ಹೊತಗೊಂಡು ಬಂದೀರಿ.

ವಸುಧಾ : ಚಿನ್ನೂ ಬೇಟಾ ಇವು ನಿನಗ ... ನಿಮ್ಮ ಅಣ್ಣನ್ನು ಸಣ್ಣೂ ಆದದ್ದೆಲ್ಲಾ ನಿನ್ನ ಸಲುವಾಗಿ ತಗದಿಟ್ಟೀನಿ. ಇವು ಜೀನ್ಸು ನೋಡು ಅಂವಾ ಆರನೇ ಯತ್ತಾ ಇದ್ದಾಗ ಕೊಡಿಸಿದ್ದು...

ಚಿನ್ಮಯ : (ಟಣ್ಣನೆ ಜಿಗಿದು ಅದನ್ನು ತೆಗೆದುಕೊಂಡು ಅಳತೆ ನೋಡಿಕೊಳ್ಳುತ್ತಾನೆ) ಅರೇ, ಬರೋಬ್ಬರಿ ಆಗತದ ಮಾಮಿ... ಅಮ್ಮಾ, ಅಮ್ಮಾ, ನೋಡಿಲ್ಲೆ...

ಶಾಂತಾ : ವೈನಿ, ಇವನ್ನೆಲ್ಲಾ ಯಾಕ ತಂದ್ರಿ? ಇಲ್ಲೀ ಹುಡುಗರು ಹಾಕ್ಕೊಳ್ಳೋದು ಬರೇ ಹಾಫ್ ಪ್ಯಾಂಟು-ಶರ್ಟು ಇಂವಾ ಒಬ್ಬನ ಇಂಥಾ ತುಟ್ಟೀ ಅರಿವೀ ಹಾಕ್ಕೊಂಡು ಮೆರಿಯೂದು ನನಗ ಸೇರೂದುಲ್ಲಾ...ತರಬ್ಯಾಡ್ರೀ ಅಂತ ಹೋದಸರೇನ ಹೇಳಿದ್ದೆ ನಿಮಗ...

ಚಿನ್ಮಯ : (ಅಳುವ ದನಿಯಲ್ಲಿ) ಊಂ... ಅಮ್ಮಾ, ಎಷ್ಟು ಛೊಲೋ ಅದ ನನ್ನ ಹತ್ತರ ಒಂದೂ ಬ್ಲ್ಯೂ ಜೀನ್ಸ್ ಇಲ್ಲಾ. ಶೆಟ್ಟರ ಅನಿಲನೂ ಹಾಕ್ಕೋತಾನ, ಅಮ್ಮಾ, ಕಿಟ್ಯಾಗೂ ಅವರ ಮಾಮಾ ಕೊಡಿಸ್ಯಾರ.

ರುಕ್ಕಿಣಿ : ಹಾಕ್ಕೊಳ್ಳಿ ಬಿಡ ಶಾಂತಾ.... ಕೂಡು ಬೇಕಂತದ ಹೋಗ ಬಾಳಾ ಹೋಗು, ಹಾಕ್ಕೊಂಡು ನೋಡು ಹೋಗು.

(ಅವನು ಜಿಗಿಯುತ್ತ ಒಳಗೆ ಹೋಗುವನು)

ದೇಸಾಯರು : ಹೂಂ, ಆನಂದಾ, ನೀ ಏನಂತೀ? ಕೆಲಸಾ ಹ್ಯಾಂಗ ನಡದದ?

ವಸುಧಾ : ಕಾಕಾ, ಈ ವರ್ಷ ಭಾರೀ ಪ್ರಮೋಷನ್ ಸಿಕ್ಕದ ನಿಮ್ಮ ಮಗ್ಗ, ಹೇಳಿದರೋ ಇಲ್ಲೋ...? ಬ್ಯಾಂಚ್ ಮ್ಯಾನೇಜರ್ ಆಗ್ಯಾರ ಈಗ...

ದೇಸಾಯರು : ಅರೇ, ಬೆರಕಿ, ಹೇಳೇ ಇಲ್ಲಲ್ಲೋ... ಭಾಳ ಸಂತೋಷ ಆತು ನೋಡು...ಹಿಂಗ ವರ್ಷಾ ವರ್ಷಾ ಉನ್ನತಿ ಆಗತಿರಲಿ. ಅನೂ ಬಾಳಾ, ದೇವರ ಮುಂದ ದೀಪಾ ಹಚ್ಚಿ ಎಲ್ಲಾರಿಗೂ ಪ್ರಸಾದಾ ತಂದುಕೊಡು.

ಆನಂದ : ಏನು ದೊಡ್ಡ ಮಾತು ಬಿಡ್ರಿ ಕಾಕಾ, ಈ ಪ್ರಮೋಷನ್ ಖರೇ ನನಗ ಎಷ್ಟೋ ಹಿಂದಕ ಸಿಗಬೇಕಾಗಿತ್ತು.... ನನಗಿಂತ ಕೆಳಗಿನವರನ್ನ ಎಲ್ಲಾ ಮ್ಯಾಲೆರಿಸಿ ಕೂಡಿಸಿದರು.

ದೇಸಾಯರು : ಇರಲಿ ಬಿಡೋ, ಈಗ ಸಿಕ್ಕಿತಲ್ಲಾ, ಸಿಕ್ಕದ್ದಕ್ಕ ಸಂತೋಷಾ ಹಚಿಗೋಬೇಕು ನೋಡು.

ವಸುಧಾ : (ಆನಂದನ ಹತ್ತಿರ ಬಂದು ಕಿವಿಯಲ್ಲಿ ಹೇಳಿದಂತೆ) ಹೇಳಿಬಿಡ್ರಿ ಈಗ...

ಆನಂದ : (ಗಂಟಲು ಸರಿಮಾಡಿಕೊಳ್ಳುತ್ತ) ಕಾಕಾ, ನಾಳೆ ನನ್ನ ಗುರುತಿನವರೊಬ್ಬರು ಬರುವವರಿದ್ದಾರ...ಮುಂಬಯಿಯಿಂದ...

ದೇಸಾಯರು : ಹೌದ, ಬರಲೇಳು, ಭಾಳ ಸಂತೋಷಾ...ಆದರ ಈ ಸಣ್ಣ ಊರಾಗ ಏನದ ಅವರಿಗೆ ನೋಡು ಅಂಥಾದ್ದು?

ಆನಂದ : ಅವರು ಅಂದರ ನಮ್ಮ ಧನರಾಜ ಶೇಡಜೀ ನಮ್ಮ ಮನೀ ಮತ್ತು ತೋಟಾನ ನೋಡಲಿಕ್ಕೆ ಬರತೀನಂದಾರ...

ದೇಸಾಯರು : (ಅತ್ಯಂತ ಸಂಭ್ರಮದಿಂದ) ಹೀಂಗ... ! ಏ, ಭಾಳ ಛೊಲೋ ಆತು ಬಿಡು...ನಮ್ಮ ವಾಡಾ ನೋಡೂ ಹಂಗ ಅದನ ಅದ ಬಿಡು...ಬ್ರಿಟಿಶರ ಕಾಲದಾಗ ಎಷ್ಟು ಮಂದಿ ಬ್ರಿಟಿಶರು ಬಂದು ನೋಡಿ ಹೋಗತಿದ್ದರು ಅಂತೀ.... ! ಹಳೇ ಕಾಲಕ ಮನಿ ಅಂದರ ಆ ಮಂದಿಗೆ ಭಾರೀ ಹುಚ್ಚು ನೋಡು.

ಶ್ಯಾಮ : ನಿಮ್ಮ ಶೇಡಜೀ ಏನು ಬರೇ ಮನೀ ನೋಡಲಿಕ್ಕೆ ಬರಾವರಿದ್ದಾರೋ...

ಆನಂದ : (ಅವನ ಮಾತನ್ನು ಕೇಳಿಸಿಕೊಳ್ಳದವನಂತೆ) ಕಾಕಾ, ಅವರಿಗೆ ಊರೂ ನೋಡಬೇಕಂತದ...ಊರು ಛೊಲೋ ಅನಿಸಿದರ ಇಲ್ಲೇ ಏನರ ಉದ್ಯೋಗಾ ಸುರೂ ಮಾಡಬೇಕಂತನೂ ವಿಚಾರ ಅದ ಅವರದು.

ಶ್ಯಾಮ : ಹಾಂ, ಅದ ಅಂತೀನಿ... ಅಂದರ ಇಲ್ಲೇನೋ ಆಸ್ತಿ ಖರೀದಿ ಮಾಡಬೇಕಂತದ ನಿಮ್ಮ ಶೇಡಜೀಗೆ ...ಖರೀದಿ-ಮಾರಾಟಾ ಇಲ್ಲದ ಹಾಂಗೆಲ್ಲಾ ಎಲ್ಲೆ ಹೋಗೂವವರಲ್ಲಾ ಈ ಶೇಡಜೀ ಮಂದಿ.

ವಸುಧಾ : ಹಾಂಗ ಧಡಾ-ಪಡಾ ಮಾಡೂ ನಾಲ್ಕು ಮಂದಿ ಜಗತ್ತಿನ್ಯಾಗ ಇರತಾರ ಅಂತ ಒಂದಿಷ್ಟು ಉದ್ಯೋಗ-ಧಂದೆ ನಡೀತಾವ ಶ್ಯಾಮಣ್ಣ, ಎಲ್ಲಾರೂ ಬಗಲಾಗೊಂದು ಝೋಲಿ ಹಾಕ್ಕೊಂಡು ಕೈ ಝಾಡಿಸಿಗೋತ ಓಡ್ಯಾಡಿದರ ಜಗತ್ತು ಹ್ಯಾಂಗ ನಡೀಬೇಕು?

ಶ್ಯಾಮ : (ತನ್ನ ಬಗಲಲ್ಲಿ ಚೀಲವಿದೆಯೇನೋ ಎಂದು ಬಗಲುಮುಟ್ಟಿ ನೋಡಿ ಕೊಳ್ಳುತ್ತಾನೆ. ಇಲ್ಲವೆಂದು ಖಾತ್ರಿಪಡಿಸಿಕೊಂಡು ಗೂಟಕ್ಕೆ ಹಾಕಿದ ತನ್ನ ಬಗಲುಚೀಲದ ಕಡೆಗೆ ಕೈ ತೋರಿಸಿ ಹಾ...ಹಾ ಎಂದು ನಗುತ್ತ) ವೈನಿ, ಅತ್ಲಾಗ ಇತ್ಲಾಗಿನವರ ಕಿಸೇದಾಗ ಕೈ ಹಾಕ್ಕೋತ

ಅಡ್ಡ್ಯಾಡೂದರಕಿಂತಾ ಕೈ ಝಾಡಿಸಿಕೋತ ಅಡ್ಡ್ಯಾಡೂದು ಉತ್ತಮ ಅಲ್ಲವ?

ದೇಸಾಯರು : (ತಾವೂ ನಗುತ್ತ) ಶ್ಯಾಮಾ, ಬರೇ ಹುಡುಗಾಟಕೀನ ನಿಂದು. ಯಾವಾಗಲೂ...ಹೂಂ, ಆನಂದಾ, ಏನು ಹೇಳತಿದ್ದಿ?

ಆನಂದ : ಅಲ್ಲಾ, ಕಾಕಾ, ನನಗೊಂದು ವಿಚಾರ ಬಂದದ. ಈ ಮನೀ ರಿಪೇರಿ ಮಾಡಿಸಬೇಕಾಗೇದ...ಐವತ್ತು ಸಾವರಿದಷ್ಟು ಹತ್ತಬಸುದು ಅಂತಿದ್ದಿರಿ...ಅದಕ್ಕ ನಾ ಏನಂತೀನಿ...

ದೇಸಾಯರು : ಆತಲ್ಲಾ, ನೀ ಏನಂತೀ ಅನ್ನೂದು ಪತ್ರಾ ಬರದಿದ್ದೆಲ್ಲಾ ನನಗೇನು ಈಗ ಅಷ್ಟು ರೊಕ್ಕಾ ಕೊಡೂದು ಶಕ್ಯ ಇಲ್ಲಾ ಅಂತ. ಯಾವಾಗ ಆಗತದ ಆವಾಗ ಕೊಡು...ಮಾಡಿಸಿದರಾತು ಸಾವಕಾಶ.

ಆನಂದ : ಅಲ್ಲಾ, ನಾ ಅನ್ನೂದು....(ಕೈ ಮಾಡಿ ತೋರಿಸುತ್ತ) ಅತ್ಲಾಗಿನ ಎಲ್ಲಾ ಖೋಲೀ ಅಂತೂ ಈಗ ಉಪಯೋಗ ಮಾಡೂದ ಇಲ್ಲಾ. ಕೀಲೀ ಹಾಕೇ ಇಟ್ಟೇರಿ. ಅಲ್ಲಾ, ಶೇಡಜೀ ತೊಗೋತೀನಿ ಅಂದರ ಮಾರಿಬಿಡಬಾರದು ಯಾಕ? ಅತ್ಲಾಗಿನ ಅರ್ಧಾ ಭಾಗಾ ಅವರಿಗೆ ಕೊಟ್ಟುಬಿಟ್ಟರಾತು.

ವಸುಧಾ : ಅಂದರ ನಮ್ಮ ಭಾಗಾ ರಿಪೇರಿ ಮಾಡಿಸಿಕೊಳ್ಳಿಕ್ಕೆ ರೊಕ್ಕನೂ ಬಂದಂಗಾತು, ಮ್ಯಾಲೆ ಖರ್ಚಿಗೆ ನಾಕು ದುಡ್ಡೂ ಉಳೀತಾವ.

ದೇಸಾಯರು : ಛೆ, ಏನು ಮಾತಾಡತೀದಿ? ನಮ್ಮ ವಂಶಾನುವಂಶ ಬಂದಿದ್ದ ಮನೀ ಇದು. ಇದನ್ನ ಮಾರೂದ? ಶಕ್ಯ ಇಲ್ಲ ಬಿಡು.

ಆನಂದ : ಕಾಕಾ, ಸ್ವಲ್ಪ ಪ್ರಾಕ್ಟಿಕಲ್ ಆಗಿ ವಿಚಾರ ಮಾಡ್ರಿ... ಇಷ್ಟು ದೊಡ್ಡ ಮನೀ ಇಟಗೊಂಡು ಏನು ಮಾಡೂ ಅವರು ನೀವು? ಇದನ್ನ ಮೇಂಟೇನ್ ಮಾಡೂದು ಶಕ್ಯ ಅದ ಏನು ನಿಮಗ? ಹಾಂಗ ಬಿಟ್ಟರ ಇನ್ನೊಂದು ನಾಲ್ಕು ವರ್ಷದಾಗ ಪೂರಾ ಬಿದ್ದು ಹಾಳಾಗಿ ಹೋಗತದ. ಅದ ಈಗ ಅರ್ಧಾ ಮಾರಿ ಬಂದ ರೊಕ್ಕದಲೇ ರಿಪೇರಿ ಮಾಡಿಸಿಗೊಂಡರ ಅರ್ಧಾ ಮನೀ ಅರ ಉಳೀತದ.

ಸುಧಾ : ಅವರಂತೂ ಅವರ ಭಾಗಾ ಭೊಲೋ ಮೇಂಟೇನ್ ಮಾಡಕೊಂಡ ಮಾಡಕೋತಾರ. ಬೇಕಾದಷ್ಟು ರೊಕ್ಕ ಇದ್ದ ಮಂದಿ ಅದು.

ನಂದ : ಈ ಮನೀ ಹಾಳಬಿದ್ದು ಹೋಗದ ಉಳೀಬೇಕು ಅಂದರ ಇವ ಬಂದ ಹಾದಿ ನೋಡ್ರಿ ಕಾಕಾ.... ಇನ್ನ ಹಗಲೆಲ್ಲಾ ಮನೀ ರಿಪೇರಿಗೆ ರೊಕ್ಕ ಕೊಡು, ಖರ್ಚಿಗೆ ರೊಕ್ಕಾ ಕೊಡು ಅಂದರ ನನಗಂತೂ ಶಕ್ಯ ಇಲ್ಲಾ.

(ಎಲ್ಲರೂ ಆತಂಕದಿಂದ ದೇಸಾಯರ ಮುಖ ನೋಡುತ್ತಿದ್ದಾರೆ)

ಸುಧಾ : ನಾಳೆ ಬೆಳಗಾದರ ಕಿರಣ ಇಂಜಿನಿಯರಿಂಗಿಗೋ ಮೆಡಿಕಲ್ಲಿಗೋ ಹೋಗಾಂವಾ...ಅವನ ಶಿಕ್ಷಣದ ಖರ್ಚಿನ ವ್ಯವಸ್ಥಾ ಮಾಡಬೇಕು. ಈಗ ಒಂದು ನಾಲ್ಕು ದುಡ್ಡು ರೊಕ್ಕ ಬಂದರ ನಮಗೂ ಉಪಯೋಗ ಆಗತದ... ಮಗ್ಗಲದಾಗ ಶೇಡಜೀಯವರ ಸಂಸಾರ ಬಂದು ನಿಂತರ ನಿಮಗೂ ಅನುಕೂಲ ಆಗತದ.

ಂತಾ : ಇನ್ನೂ ನಿಮ್ಮ ಶೇಡಜೀಯವರು ಬಂದು ಮನೀನೂ ನೋಡಿಲ್ಲಾ. ಆಗಳೇ ಅವರು ಇಲ್ಲೆ ಖರೀದಿ ಮಾಡಿ ಇರಲಿಕ್ಕೆ ಒಪ್ಪ್ಯಾರ ಅನ್ನೂ ಹಂಗ ಮಾತಾಡ್ತೀರಲ್ಲಾ ವೈನೀ?

ನಂದ : ಒಪ್ಪಿದಂಗ...ಆಗೇದ.

ಸುಧಾ : ಅಂದರ ...ಒಪ್ಪೂದೇನು, ಒಪ್ಪೇ ಒಪ್ಪತಾರ ಅಂತ. .. ಈ ಊರಾಗ ಇದರಕಿಂತಾ ಭೊಲೋ ಮನೀ ಎಲ್ಲೆ ಸಿಗಬೇಕು ಹೇಳು ಅವರಿಗೆ?

ಂತಾ : ಅರೇ, ಮತ್ತ ನಿನ್ನೆ ಬರುವಾಗ ಅಂದಿರಂತ... ಈ ಹಳೇ ಹಾಳ ಮನೀ ವಳಗ ಶೇಡಜೀ ಅವರನ ಎಲ್ಲಿ ಇಳಸೂದು ಅಂತ.... ?

ಸುಧಾ : ಛಿ... ಈ ಅರವಿಂದ ಒಂದು...ಇಲ್ಲದ್ದೊಂದು ಹೇಳತಾನ ನಾ ಯಾತಕ್ಕ ನಮ್ಮ ಮನೀಗೇ ಹಾಳಮನೀ ಅನ್ನಲಿ?

ೇಸಾಯರು : ಇದು ನೋಡು ಆನಂದಾ, ಈ ಮನೀ ಮೂರೂ ಮಾತು ಸುಳ್ಳು, ನಿನ್ನ ಶೇಡಜೀ ಮನೀ-ತೋಟಾ ನೋಡಲಿ, ಏನಡ್ಡೀಯಿಲ್ಲೇನಪ್ಪಾ ಅವರಿಗೆ ಊರಾಗ ಯಾವ ಆಸ್ತೀ ಬೇಕೋ ಕೊಡಸು. ನಮ್ಮ ಮನೀ ಮಾತ್ರ ಮೂರೂ ಮಾತು ಆಡಬ್ಯಾಡಾ.

ಆನಂದ : ಯಾವಾಗಲೂ ಹಿಂಗ ನೀವು ಕಾಕಾ... ಏನು ಬೇಕಾದ್ದು ಮಾಡಿಕೋಳ್ರಿ, ನಾಳೆ ನನ್ನ ರೊಕ್ಕ ಕೊಡು ಅಂತ ಕೇಳಬ್ಯಾಡ್ರಿ ಯಾತಕ್ಕೂ... (ಕಾಲಪ್ಪಳಿಸುತ್ತ ಹೊರಗೆ ಹೋಗುವನು)

ರುಕ್ಮಿಣಿ : ಅಲ್ಲಾ, ಅಂವಾ ಅನ್ನೂದೂ ಖರೇ ಅದ. ಈ ವರ್ಷ ಮಳಿಗಾಲ ಅನ್ನೂದರಾಗ ಮನೀ ರಿಪೇರೀ ಮಾಡಬೇಕು. ಎಲ್ಲಾ ಕಡೇ ಮಣ್ಣು ಉದರತದ, ಎಲ್ಲೆಂದರಲ್ಲೆ ಸೋರತದ. ಎಲ್ಲಾ ತಡಕೊಂಡು ಬೀಳೂತನಕಾ ಹಾದೀ ನೋಡೂದೇನು? ನನಗಂತೂ ಆನಂದ ಹೇಳೂದು ಬರೋಬ್ಬರಿ ಅನಸತದ.

ದೇಸಾಯರು : ನಮ್ಮ ಹಿರಿಯರದು ಉಳದದ್ದ ಇದೊಂದು ವಾಡೆ. ಎಲ್ಲಾ ಹೊಲಾಮನೀ ಮಾರಿ ಕೈ ತೊಳಕೊಂಡೀವಿ. ಇದನ್ನೂ ಮಾರಿಬಿಟ್ಟರ ನಮ್ಮ ಮಕ್ಕಳಿಗೆ ಹಿರಿಯರದು ಅಂತ ಏನು ಉಳಧಂಗಾತು? ನಿಂದೊಂಚೂರು ತೋಟಾ ಬಿಟ್ಟರ ಏನೇನೂ ಉಳೀಲಿಲ್ಲಾ ನಮ್ಮ ಹಿರಿಯರ ಆಸ್ತೀ ವಳಗ.

ರುಕ್ಮಿಣಿ : ಎಲ್ಲಾ ಅವರ ಸಲವಾಗೇ ಅಲ್ಲ? ಮಾರೂದು ಏನು ನಮ್ಮ ಸಲುವಾಗಿ ಏನು? ನಾಳೆ ಶಾಂತೀ ಮಕ್ಕಳ ಶಿಕ್ಷಣಕ್ಕ ಬೇಕು.. ಅರವಿಂದ ಮುಂಬಯಿಗೆ ಹೋಗಬೇಕಂತಾನ.. ಅದೇನೋ ಪೇಂಟಿಂಗೋ ಗೀಂಟಿಂಗೋ ಕಲೀಲಿಕ್ಕೆ ನಾಲ್ಕು ದುಡ್ಡು ಕೈಯಾಗಿದ್ದರ ಏನು ಕೆಡತದೇನು ಹೇಳ್ರಿ.

ಅರವಿಂದ : ಹೌದು ದಾದಾ ಈ ವರ್ಷರ ನಾ ಹೋಗಲಿಕ್ಕೇ ಬೇಕು ನನಗ ಹೆಚ್ಚೇನೂ ಬ್ಯಾಡಾ, ಅಲ್ಲೆ ಹೋಗಿ ನಾ ಕಾಲೂರಿ ನಿಂದ್ರೂ ತನಕಾ ಅಷ್ಟ... ನಾ ಆಮ್ಯಾಲ ಎಲ್ಲೆರ ಕೆಲಸಾ ನೋಡಕೋತೀನಿ ನನ್ನ ಖರ್ಚು ನಾ ತಕ್ಕೋತೀನಿ.

ಶಾಂತಾ : ಕಾಕೂ, ಹೇಳೂದು ಬರೊಬ್ಬರಿ ದಾದಾ, ನೀವು ಒಂದ ಸಮನೇ ತಿಂಗಳ ಖರ್ಚಿನ ಸಲುವಾಗಿ ಚಡಪಡಿಸೂದರ ತಪ್ಪತದ.

ದೇಸಾಯರು : ಏನೋ ಅವ್ವಾ ನನ್ನ ಮನಸ್ಸಂತೂ ಒಪ್ಪೂದುಲ್ಲಾ, ನೋಡು...ಎಲ್ಲಾ ಮಾರಿಕೊಂಡು ತಿಂದು ಕೂತರ ಏನಾಧಂಗಾತು? ನನಗೇನು ಪಟಾಯಿಸೂದುಲ್ಲಾ ನೋಡು, ಕತ್ತಲ್ಯಾಗಲಿಕ್ಕೆ ಹತ್ತೇದ, ದೀಪಾ ಹಚ್ಚು... ನಾರಾಯಣಾ, ಗೋವಿಂದಾ ಹರೀ ...ಹರೀ...

ಅಂಕ - ೨

ದೃಶ್ಯ - ೧

(ಬೆಳಗಿನ ಸಮಯ ರಂಗದ ಮೇಲೆಲ್ಲ ಕತ್ತಲೆ. ನಿಧಾನವಾಗಿ ಬೆಳಕು ರಂಗದ ಎಡಭಾಗದ ಮೇಲೆ ಮಾತ್ರ ಮೂಡುತ್ತಿದ್ದಂತೆ ಹಿನ್ನೆಲೆಯಲ್ಲಿ ಶಾಂತವಾದ ಒಂದು ಭಜನೆಯ ದನಿ ತೇಲಿ ಬರುತ್ತದೆ - ಶಾಸ್ತ್ರೀಯ ಸಂಗೀತದಲ್ಲಿ. ತಮ್ಮ ಆರಾಮಕುರ್ಚಿಯಲ್ಲಿ ದೇಸಾಯರು ಕಣ್ಣುಮುಚ್ಚಿಕೊಂಡು ಒರಗಿ ಕೊಂಡಿದ್ದಾರೆ. ಕೈಯಲ್ಲಿ ಪೇಪರಿದೆ, ಆದರೆ ಓದುತ್ತಿಲ್ಲ: ಮುಖದಲ್ಲಿ ಅತ್ಯಂತ ದಣಿದ ಕಳೆ. ಮೊಮ್ಮಗ ಚಿನ್ಮಯ ಹೊರಗಿನಿಂದ 'ಅಜ್ಜಾ, ಅಜ್ಜಿ' ಎಂದು ಕೂಗುತ್ತ ಓಡಿಬರುತ್ತಾನೆ. ಅಜ್ಜನ ಮುಖನೋಡಿ ಒಮ್ಮೆಲೇ ಅವರೆದುರು ಗಕ್ಕನೆ ನಿಲ್ಲುತ್ತಾನೆ, ಹಾಗೆಯೇ ಒಂದೆರಡು ನಿಮಿಷ ನಿಂತಿದ್ದು ಮೆಲ್ಲಗೆ ಸದ್ದು ಮಾಡದೆ ಒಳಗೆ ಹೋಗುತ್ತಾನೆ. ಬೆಳಕು ರಂಗದ ಬಲಬದಿಯ ಮೇಲೆ. ಅಲ್ಲಿ ಚಹದ ಕೋಣೆಯ ದೃಶ್ಯ. ಕೋಣೆಯ ಒಂದು ಮೂಲೆಯಲ್ಲಿ ಫೈಮಸ್ ಸ್ಟವ್ಹ ಇಟ್ಟುಕೊಂಡು ಶಾಂತಾ ಚಹಾ ಮಾಡುತ್ತಿದ್ದಾಳೆ. ಸುತ್ತಲೂ ಮಣೆಗಳನ್ನು ಇಟ್ಟುಕೊಂಡು ಆನಂದ, ಅರವಿಂದ, ವಸುಧಾ, ಅನು, ಕಿರಣ ಎಲ್ಲರೂ ಕುಳಿತು ಚಹ ಕುಡಿಯುತ್ತಿದ್ದಾರೆ. ಇನ್ನೊಂದು ಮೂಲೆಯಲ್ಲಿ ರುಕ್ಮಿಣಿಕಾಕು ಪೂಜೆಯ ಪಾತ್ರೆಗಳನ್ನು ಬಟ್ಟೆಯಿಂದ ಒರೆಸುತ್ತಿದ್ದಾಳೆ.

ಅನು - ಕಿರಣರ ನಡುವೆ ಹಿರಿಯರ ಕಣ್ಣುತಪ್ಪಿಸಿ ಚೆಲ್ಲಾಟ ನಡೆದಿದೆ. ಯಾರಿಗೂ ಕಾಣದಂತೆ ಅವನು ಅವಳ ಹೆರಳು ಜಗ್ಗುತ್ತಾನೆ. ಅವಳು ಹುಸಿಮುನಿಸಿನಿಂದ ಅವನ ಕೈಗೆ ಚಟ್ಟನೇ ಹೊಡೆಯುತ್ತಾಳೆ)

ಚಿನ್ಮಯ : (ಒಳಗೆ ಬರುತ್ತ) ಅಜ್ಜಿ, ಅಜ್ಜೀ, ಆಚಾರು ಬಂದರು. ಅಲ್ಲೆ ವಾಸೂನ ಮನೀಹತ್ತರ ಬರಲಿಕ್ಕೆ ಹತ್ತಿದ್ದರು.

ರುಕ್ಮಿಣಿ : ಬಂದರ? ಭೊಲೋ ಆತು, ಲಗೂ ಬಂದರು...ಇಲ್ಲಾಂದರ ಮಂದಿ ಊರಿಂದ ಬಂದಮ್ಯಾಲ ಇವರದೂ ಒಂದು ಅದರಾಗ ಗಡಿಬಿಡಿ ಸುರು ಆಗತಿತ್ತು... ಹಾದ್ಯಾಗಿಂದು ಎಲ್ಲಾ ಸರಿಸಿ ಆಚಾರ್ರಿಗೆ ಹೋಗಲಿಕ್ಕೆ ಹಾದೀ ಬಿಡಸು ಅನೂ... ಮಡೀಲೇ ಬರತಾರ.

ಚಿನ್ಮಯ : ಮಡೀಲೇ ಏನು ಬರತಾರ ಅಜ್ಜೀ? ರಸ್ತೇದಾಗ ಕಾಲಾಗ ಚಪ್ಪಲ ಸಹಿತ ಹಾಕ್ಕೊಳ್ದ ಬರಲಿಕ್ಕೆ ಹತ್ಯಾರ. ಹಾದಿಗುಂಟ ದನಾ ಶೆಗಣೀ ಹಾಕ್ಯಾವ, ಅಲ್ಲೇ ವಾಸೂನ ತಮ್ಮಾ ಇಶ್ಶೀ ಮಾಡಲಿಕ್ಕೆ ಕೂತಾನ ಹಾದೀ ಬಾಜೂಕ.

(ಅವನ ಮಾತಿಗೆ ಎಲ್ಲರೂ ನಗ ತೊಡಗುವರು)

ಅರವಿಂದ : ಅದೆಲ್ಲಾದರಾಗಿಂದ ಹಾಯ್ದು ಬಂದರನ ಮಡೀ ಶುದ್ಧ ಆಗತದೋ ಚಿನೂ, ನಿನಗ ಗೊತ್ತಿಲ್ಲೇನು?

ಚಿನ್ಮಯ : ಶ್ಶೀ, ಹೊಲಸು....

ರುಕ್ಮಿಣಿ : ಇರ್‍ಲಿ ಹೋಗೋ ರಂಡೇಗಂಡಾ, ಇಲ್ಲದ್ದ ತಲೀಹರಟಿ ಸುರು ಮಾಡಬ್ಯಾಡಾ. ಆಚಾರು ಬಂದಕೂಡಲೇ ಅವರ ಸುತ್ತ ಏನರ ಕುಚ್ಯಾಷ್ಟ ಸುರೂ ಮಾಡಬ್ಯಾಡ್ರಿ ನೀವಿಬ್ಬರೂ... ಅರವಿಂದಾ, ಏನು, ನಿನಗೂ ಈಗಲೆ ಹೇಳಿಡ್ತೇನಿ... ಭರಾ ಭರಾ ಪೂಜೆ ಮುಗಿಸಿಕೊಂಡು ಹೋಗವಲ್ಲರ್‍ಯಾಕ...

ಅರವಿಂದ : ಅರೇ, ಕಾಕೂ , ಸುಮ್ಮ-ಸುಮ್ಮನ ನಾವ್ಯಾಕ ಅವರಿಗೆ ಏನಂತೀವಿ? ಮತ್ತು ಹಾಂಗ ಏನರ ನಮಗ ಡೌಟ್ ಬಂದರ ಅವರನ ಕೇಳಬೇಕಾಗತದ ಹೌದಲ್ಲೋ ಚಿನೂ.... ?

ಚಿನ್ಮಯ : ಎಸ್, ಮಾಮಾಶ್ರೀ...

ರುಕ್ಮಿಣಿ : ಏನೇನೂ ಬ್ಯಾಡಾ...ನಿಮ್ಮ ಡೌಟು...ಗಿವಟು ಎಲ್ಲಾ ಆಮ್ಯಾಲೆ.. ಈಗ ಚಹಾಕುಡದು ಭರಾ...ಭರಾ ಎದ್ದು ಹೊರಗ ಹೋಗ್ರಿ ಇನ್ನ. (ಕಿರಣ ಯಾರಿಗೂ ಕಾಣಿಸದಂತೆ ಒಂದು ಕಾಗದದ ಚೆಂಡನ್ನು ಅನೂನ ಕಡೆಗೆ ಎಸೆಯುವನು. ಅವಳು ಅದನ್ನೆತ್ತಿ ತಿರುಗಿ ಅವನೆಡೆಗೆ ಎಸೆಯುವಳು. ಯಾರಿಗೂ ಅವರ ಚೆಲ್ಲಾಟದ ಕಡೆಗೆ ಲಕ್ಷ್ಯವಿಲ್ಲ)

ಚಿನ್ಮಯ : ಮಾಮಾ, ಅಜ್ಜಾ, ಯಾಕ ಮತ್ತು ಮಲಕೊಂಡಾನ ಮುಂಜಾನೆದ್ದು? ನಾನು ಮುಂದ ನಿಂತು ಒದರಿದರೂ ಎಚ್ಚರಿಕೆ ಆಗಲಿಲ್ಲಾ?

ಶಾಂತಾ : ಮಲಕೊಂಡಿರಲಿಕ್ಕಿಲ್ಲ ಚಿನೂ, ಹಾಂಗ ಕಣ್ಣು ಮುಚಿಗೊಂಡು ಕೂತಿದ್ದಾರು, ಅವರಿಗೆ ಆಯಾಸಾಗೇದ, ತ್ರಾಸು ಕೊಡಬ್ಯಾಡಾ.

ರುಕ್ಮಿಣಿ : ರಾತ್ರಿ ಎಲ್ಲಾ ಮಲಗೇ ಇಲ್ಲಾ ನಿಮ್ಮ ಅಪ್ಪಾ, ಶಾಂತಿ, ಒಂದ ಸವನ ಕೋಣೀ ವಳಗ ಶತಪಥ ಹಾಕತಿದ್ದರು. ಇಪ್ಪತ್ತಸರೇ ಬಚ್ಚಲಕ್ಕ ಎಡತಾಕಿದರು.

ಆನಂದ : ಸುಮ್ಮನ ತಲೀಗೆ ತ್ರಾಸು ಮಾಡಿಕೋತಾ... ಕಡೀಕ ಅಂದರಾ ಏನು ಕಾಕಾ? ಮಾರಲಿಕ್ಕೆ ತಯಾರಾದರೋ ಇಲ್ಲೋ?

ರುಕ್ಮಿಣಿ : ಹಂಗ್ಯಾಕ ಅವಸರಾ ಮಾಡ್ತಿ? ನಿನ್ನ ಶೇಡಜೀ ಬಂದು ನೋಡೆರ ನೋಡ್ಲಿ ತಡೀ, ಅವರಿಗೆ ಪಸಂದ ಬಿತ್ತು ಅಂದರ ಮುಂದ ನೋಡೋಣಂತ.

ಆನಂದ : ಅವರು ಬಂದವ್ಯಾಲ ಇಲ್ಲದ್ದ ರಾಮಾಯಣ ಬ್ಯಾಡಾ, ಈಗ ಮಾತಾಡಿಬಿಡ್ರಿ ಕಾಕಾನ ಜೋಡೀ.

ಶಾಂತಾ : ಕಾಕೂ ನೀನ ಮಾತಾಡಬೇಕು ಅವರ ಜೋಡೀ, ನಾವ್ಯಾರರ ಹೇಳ್ಳಿಕ್ಕೆ ಹೋದರ ತಲೀನ ತಿರಗತದ ಅವರದು.

ರುಕ್ಮಿಣಿ : ಹೂಂ... ನಾನ ಮಾತಾಡತೀನಿ. ಬರ್‍ಲಿ ಆ ಮಂದಿ...ಮನೀ ನೋಡಿ ಅವರು ಇಲ್ಲೇ ಇರಲಿಕ್ಕೆ ಬರತೀವಿ ಅಂದರ ಸಂಜೀಮುಂದ ನೋಡೋಣಂತ.

ವಸುಧಾ : ಅವರಿಗೆ ಪಸಂದ ಬಿದ್ದ ಬೀಳತದ ಅವ್ವಾ, ನಮಗ ಆ ಬಗ್ಗೆ ಸಂಶಯನ ಇಲ್ಲಾ... ಅವರಿಗೆ ತೋರಿಸಿ ಮಾಡಿ, ಆಮ್ಯಾಲ ನಾವು ಮಾರೂದುಲ್ಲಾ ಅಂದರ ಅಸಂಯ್ಯ ಆಗತದ.

ರುಕ್ಮಿಣಿ : ಹಾಂಗೇನನ್ನೂದುಲ್ಲೇಳು. ಅವರಿಗೂ ರೊಕ್ಕದ ಅಡಚಣೆಯಿಂದ ರಗಡು ತ್ರಾಸಾಗೇದ, ಹೂ।.. ಅಂದ ಅಂತಾರ... ಹೂಂ...ಏಳ್ರಿ ಇನ್ನ ಇಲ್ಲಿಂದ ಎಲ್ಲಾರು, ಆಚಾರು ಬಂದರು...ಖಾಲೀ ಮಾಡ್ರಿ ಜಾಗಾ ಇನ್ನ...

(ಎಲ್ಲರೂ ಎದ್ದು ಹೊರಗೆ ಹೋಗುವರು. ಕಿರಣ ಮತ್ತು ಅನು ಇಬ್ಬರೇ ವಿರುದ್ಧ ದಿಕ್ಕಿಗೆ ಹೋಗುವರು. ಚಿನ್ಮಯ ಅವರ ಹಿಂದೆ ಹೊರಟವನು ಆಚಾರ್ಯರು ಬಂದುದನ್ನು ನೋಡಿ ಅಲ್ಲಿಯೇ ನಿಲ್ಲುವನು. ಆನಂದ ಒಂದು

ನಿಮಿಷ ಎಲ್ಲರಿಗಿಂತ ಹಿಂದೆ ಉಳಿದು ತಾಯಿಯ ಹತ್ತಿರ ಬಂದು ಪಿಸುದನಿಯಲ್ಲಿ)

ಆನಂದ : ತೋಟದ ವಿಷಯಾನೂ ಮಾತಾಡಲಿ ಹೌದಲ್ಲೋ ಅವರ ಜೋಡಿ? ನಿಂದೋಬ್ಬಾಕೀದ ಹೆಸರದ ಅಲ್ಲಿ, ಖಾತ್ರಿ ಅದರಾಗ? ಅಲ್ಲಾ. ಅದರಾಗೂ ಮತ್ತ ಕಾಕಾನ ಮರ್ಜೀ ಹಿಡಿಬೇಕಾಗಬಾರದು... ನಿಂದೇನು ತಕರಾರಿಲ್ಲಲ್ಲಾ... ಅವ್ವಾ...?

ರುಕ್ಮಿಣಿ : ಹೌದೇಳೋ, ನಂದೊಬ್ಬಾಕೀದ ಅದ...ನನಗ ಭೊಲೋತ್ಯಾಗಿ ನೆನಪದ...ಮಾಮಾ ಸಾಯೂವಾಗ ಈ ಮನೀ ಒಂದ ಬಿಟ್ಟು ಎಲ್ಲಾ ನಿನ್ನ ಅಪ್ಪನ ಹೆಸರಲೇನ ಮಾಡಿದರು...ಚಳವಳಿಗೆ ಹೋದರು ಅಂತ ನಿಮ್ಮ ಕಾಕಾನ ಮ್ಯಾಲ ಭಾರೀ ಸಿಟ್ಟು ಮಾಮಾಗ.

ಅನಂದ : ಮತ್ತ ಮನೀ ಯಾಕ ಅವರ ಹೆಸರಲೆ ಮಾಡಿದರು?

ರುಕ್ಮಿಣಿ : ಏನ ಮಾಡತಾರ ಮಾಡದ ? ನಿಮ್ಮ ಅಪ್ಪಗ ಈ ಹಳೇ ಮನೀ ಕಂಡರಾಗತಿದ್ದಿಲ್ಲಾ... ಕೆಡವಿಸಿ ಹೊಸಾ ಥರದ ಬಂಗಲೇ ಕಟ್ಟಸತೀನಿ ಅಂತ ಅನ್ನಲಿಕ್ಕೆ ಹತ್ತಿದ್ದರು ಆಗ...ಅದಕ್ಕ ಈ ಮನೆ ಮಾತ್ರ ನಿಮ್ಮ ಅಪ್ಪಗ ಕೊಡಲಿಲ್ಲಾ ನೋಡು ಮಾಮಾ... ಭೊಲೋ ಮಾಡಿದರು... ಮಾಮಾಗ ಈ ವಾಡೇ ಅಂದರ ಜೀವಪ್ರಾಣಾ...

ಆನಂದ : ಹಾಂಗಾದರ ತೋಟದ್ದು ಎಲ್ಲಾ ಕಾಗದಾ ಪತ್ರಾ ಮಾಡಿಸಿಬಿಡ್ತೀನಿ ನಾ ಹೋಗೂದರಾಗ...

ರುಕ್ಮಿಣಿ : ಹೂಂ... ಮಾಡಿಸಿಬಿಡು (ಆಚಾರ್ಯರು ಜಿಗಿಯುತ್ತ ಹಾರುತ್ತ ಬಾಯಲ್ಲಿ ಮಂತ್ರಗಳನ್ನು ಪುಟಪುಟಸುತ್ತ ಒಳಗೆ ಬರುವರು.) ಬರ್ರಿ, ಬರ್ರಿ ಆಚಾರ... ಹಿಂಗ ಇತ್ಲಾಗ ಬರ್ರಿ (ಎಂದು ದೇವರ ಕೋಣೆಗೆ ದಾರಿ ಮಾಡಿಕೊಡುವಳು. ಆನಂದ ಹೊರಗೆ ಹೊರಟು ಹೋಗುವನು)

(ಬೆಳಕು ಈಗ ರಂಗದ ಎಡಬದಿಗೆ ದೇಸಾಯರು ಎದ್ದು ಶತಪಥ ಹಾಕುತ್ತಿದ್ದಾರೆ.)

ದೇಸಾಯರು : (ಆನಂದ ಹೊರಗೆ ಬಂದುದನ್ನು ನೋಡಿ) ಏನಪಾ, ಎಷ್ಟೊತ್ತಿಗೆ ಬರತಾರ ನಿನ್ನ ಗೆಸ್ಟು?

ನಂದ : ಏನು ಹೇಳ್ಳಿಕ್ಕೆ ಬರೂದುಲ್ಲಾ ಕಾಕಾ, ಇಷ್ಟರಾಗ ಬರಬೇಕಿತ್ತು... ಕಾರು ತೊಗೊಂಡು ಹೊರಟಾರ. ನೀವೇನು ವಿಚಾರ ಮಾಡಿದ್ರಿ?

ೀಸಾಯರು : ವಿಚಾರಾ ಏನು ಮಾಡೂದು, ನಿನ್ನೇ ಹೇಳೀನಲ್ಲಾ ಈ ವ್ಯಾಪಾರೀ ಮಂದೀ ಉಸಾಬರೀನ ಬ್ಯಾಡಾ ನಮಗ... ಹಿರೇರಮನೀ ಇವತ್ತ ಅವರಿಗೆ ಕೊಟ್ಟೆವಿ, ನಾಳೆ ಅದನ್ನ ಹೊಟೆಲ್ಲೋ ಫ್ಯಾಕ್ಟರೀನೋ ಮಾಡಿಕೊಂಡು ಕೂಡ್ತಾರ ಅವರು...

ನಂದ : ಇಲ್ಲಾ, ಕಾಕಾ, ಹಾಂಗೇನು ವಿಚಾರ ಇಲ್ಲಾ ಅವರದು..

ೀಸಾಯರು : ಏನ ಇರಲೆಪಾ ಬ್ಯಾಡಾ ಅದು, ಮನೀ ಮಾರು ಮಾತಾಡಬ್ಯಾಡಾ.

ುಕ್ಮಿಣಿ : (ಒಳಗಿನಿಂದ ಬಟ್ಟೆಯಲ್ಲಿ ಕೈ ಒರೆಸುತ್ತ ಬರುತ್ತಾಳೆ) ಹಾಂಗ್ಯಾಕ ಒಮ್ಮಿಗಿಲೇ ಮುರದುಹಾಕ್ತೀರಿ ದಾದಾ, ಶಾಂತರೀತೀಲೇ ವಿಚಾರ ಮಾಡ್ರಿ, ಅಂವಾ ಅನ್ನೂದೂ ಖರೇ ಅದ. ಈಗ ಬಿಟ್ಟರ ಮತ್ತ ಇಂಥಾ ಗಿರಾಕಿ ಸಿಗೂದು ಕಠಿಣಾ ಅಲ್ಲದ ಅವರು ಇಲ್ಲೆ ಇರಬೇಕಂತಾರ ಅಂದಮ್ಯಾಲೆ ಯಾಕ ಚಿಂತಿ?

ೀಸಾಯರು : ನಿನಗ ಈ ಮುಂಬಯಿ ವ್ಯಾಪಾರೀ ಮಂದೀ ಗುಣಾ ಗೊತ್ತಿಲ್ಲಾ ರುಕ್ಮಿಣಿ.. ಅವರು ಇಲ್ಲೆ ಇರಲಿಕ್ಕೆ ಬರ್ತಾರ ಅನ್ನೂದು ನನಗೇನು ಖರೇ ಅನಸೂದುಲ್ಲಾ... ಬ್ಯಾಡಾ, ನಾ ಹೇಳ್ತೀನಿ ಕೇಳ್ರಿ, ಸುಮ್ಮನ ಆ ವಿಚಾರಾನ ತಗದು ಹಾಕಬಿಡ್ರಿ ತಲ್ಯಾಗಿಂದ.

ನಂದ : (ಸಿಟ್ಟಿನಿಂದ ಕೈಯಲ್ಲಿಯ ಪೇಪರನ್ನು ಒಗೆದು ಕಾಲಪ್ಪಳಿಸುತ್ತ ಹೊರಗೆ ಹೋಗುವನು)

ಚಾರ್ಯರು : (ಒಳಗಿನಿಂದ) ವೈನಿ ಅವರ, ಎಲ್ಲೆ ಹೋದ್ರಿ? ಬರ್ರಿಲ್ಲೆ...ಪೂಜಿಗೆ ಹೂ - ತುಳಸೀನೂ ಇಟ್ಟಿಲ್ಲ ಇವತ್ತು. ಮಗಾ - ಮೊಮ್ಮಗಾ ಬಂದ ಸಂಭ್ರಮದಾಗ ಮರತಬಿಟ್ರೇನು?

ುಕ್ಮಿಣಿ : ಅಯ್ಯಾ ಮರತಿಲ್ರೆಪಾ ಆಚಾರ...ಮರೀತೀನಿ ಹ್ಯಾಂಗ... ಅರವತ್ತು ವರ್ಷದ ರೂಢಿ.....ಯಾವಾಗ ಆರ ವರ್ಷದಾಕಿದ್ದಾಗಿಂದ ಮಾಡಕೋತ ಬಂದೀನಿ... ಅಲ್ಲೇ ಬಾಜುಕ್ಕ ಇಟ್ಟೇನಿ ನೋಡ್ರಿ.. ಸಿಕ್ಕೂನೋ, ಇಲ್ಲೋ?

ಆಚಾ : ಹಾಂ...ಹಾಂ... ಸಿಕ್ಕೂ ಬಿಡ್ರಿ...ಶಾಂತಕ್ಕ ಎಲ್ಲಿದ್ದಾಳ, ಕಾಣೂದುಲ್ಲಾ?

ರುಕ್ಮಿಣಿ : ಇದ್ದಾಳ ಇಲ್ಲೇ, ಹೊರಗೇವರ ಕೆಲಸದಾಗಿದ್ದಿದ್ದಾಳು. ಇಗಾ, ಬಂದಳು ನೋಡ್ರಿ (ಶಾಂತಾ ಬುಟ್ಟಿತುಂಬ ತೊಳೆದ ಪಾತ್ರೆಗಳನ್ನು ತೆಗೆದುಕೊಂಡು ಬರುವಳು)

ಶಾಂತಾ : ಕಾಕೂ, ಈ ಬೂಬುಗ ಭಾಂಡೀ ತಿಳೀಲಿಕ್ಕೆ ರೊಕ್ಕಾ ಕೊಡೂದು ವ್ಯರ್ಥ ನೋಡು. ಎಲ್ಲಾ ಮತ್ತ ನಾವು ತೊಳಕೋತ ಕೂಡಬೇಕಾಗತದ... ಸುಮ್ಮನ ಬಿಡಿಸಿ ಬಿಡು ಆಕೀನ್ನ...

ರುಕ್ಮಿಣಿ : ಬ್ಯಾಡ ಮಹಾರಾಯಿತಿ..., ಇರವಳ್ಯಾಕ ಹ್ಯಾಂಗಿದ್ದಂಗ ಅನುವು ಆಪತ್ತು ಬಂದಾಗ ಅಷ್ಟು ಉಪಯೋಗ ಆಗತದ ಬಿಡಿಸಿದರ ಬ್ಯಾರೇ ಯಾರು ಸಿಗತಾರ ನಿನಗ ಇಷ್ಟ ಪಗಾರದಾಗ?

ಆಚಾ : ಶಾಂತಕ್ಕ, ಸನ್ನ ಪೂಜಿ ಮುಗೀತ ಬಂತು. ಒಂತಟಗು ಚಹಾಕ್ಕಿಟ್ಟು ಬಿಡು.

ರುಕ್ಮಿಣಿ : ಹೂಂ...ಇಡತಾಳ...ನೀವು ಪೂಜಿ ಆದರೂ ಮಾಡಿ ಮುಗಸರಿ ಮೊದಲ.

ಆಚಾ : (ಒಂದೆರಡು ನಿಮಿಷ ಜೋರಾಗಿ ಮಂತ್ರ ಪಠಣ ಮಾಡಿ) ಪೂಜಿ ಏನು ಈಗ ಆಗತದ...ವೈನೀ ಅವರ, ಒಂದ್ನಾಕಾಳು ಅವಲಕ್ಕೀನೂ ಹಚ್ಚಿಬಿಡ್ರಿ ಇವತ್ತ ಕುಲಕರ್ಣ್ಯಾರ ಮನ್ಯಾಗ ಊಟಾ ಎಷ್ಟೊತ್ತಿಗೋ ಏನೋ...

ದೇಸಾಯರು : (ಹೊರಗಿನಿಂದ ಗುಡುಗು ಹಾಕುತ್ತಾರೆ) ಗೋವಿಂದಾ, ಮುಂದ ನೋಡಿಕೊಂಡು ಪೂಜೀ ಮಾಡು ಮೊದಲ, ಚಹಾ ಅವಲಕ್ಕಿ ವಿಚಾರಾನ ಮಾಡಕೋತ ಕೂತೀಯೇನು ದೇವರ ಮುಂದ?

(ಆಚಾರ್ಯರು ತೆಪ್ಪಗೆ ಮಂತ್ರಪಠಣ ಮಾಡತೊಗುವರು. ಎರಡು ಕ್ಷಣ ಅಷ್ಟೇ....)

ಆಚಾ : ವೈನೀ ಅವರ, ಸುದ್ದೀ ಕೇಳಿದಿರೇನು?

ರುಕ್ಮಿಣಿ : ಯಾವ ಸುದ್ದೀ ?

ಆಚಾ : ಕುಲಕರ್ಣ್ಯಾರ ಮಗಳದು...ಈ ಸರೇ ಮ್ಯಾಟ್ರಿಕ್ಕಿಗಿತ್ತಲ್ಲಾ...ಏನು ಲತಾನೋ..ಪತಾನೋ...ಏನೋ ಅದ ಅಲ್ಲಾ ಹೆಸರು...

ರುಕ್ಮಿಣಿ : ಹೂಂ, ಲತಾನ... ಯಾಕ ಅದರದೇನು ಸುದ್ದಿ?

ಆಚಾ : ಆಗೂದೇನು? ಈಗಿನ ಹುಡುಗರು...ಹೂಂ ಅಂತ ಟಿ.ವಿ. ನೋಡತಾವ, ಅದರಾಗಿನ ಹಾಂಗ ಮಾಡತಾವ...ಆತು...ಓಡಿ ಹೋಗೇದಂತ ಅದು, ಸಾಲೀ ಮಾಸ್ತರನ ಜೋಡಿ...!

ರುಕ್ಮಿಣಿ : ಯಾವ ಮಾಡ್ತರಾ? ಛೆ ಇರಲಿಕ್ಕಿಲ್ಲ ಬಿಡ್ರಿ, ನೀವೊಬ್ಬರು...ಏನರ ಸುದ್ದೀ ತರತೀರಿ...ಹಾಂಗೇನಾರ ಇದ್ದರ ಶ್ಯಾಮ ಅಂತಿದ್ದಿಲ್ಲೇನು ಒಂದು ಮಾತು...ಅದ ಸಾಲ್ಯಾಗ ಇದ್ದಾನ.

ಆಚಾ : ಇಲ್ಲಾ ವೈನೀ ಅವರ, ದೇವರಾಣೆಗೂ ಖರೇ...

ದೇಸಾಯರು : (ಮತ್ತೆ ಗುಡುಗುವರು) ಹೂಂ, ಗೋವಿಂದಾ, ಮತ್ತ ಸುರು ಆತ ನಿನ್ನ ಕೆತ್ತೇಬಜಿ? ದೇವರ ಮುಂದ ಪೂಜಿಗೆ ಕೂತು ದೇವರಾಣಿ ಹಾಕತಾನ ಹುಚ್ಚ ಸೂ...ಮಗನ್ನ ತಂದು...ಮುನ್ನೋಡಿಕೊಂಡು ಪೂಜಿ ಮಾಡು, ನೋಡೂಣು...

(ಅಂತ್ತೆ ಜೋರಾಗಿ ಮಂತ್ರಪಠಣ ಕೇಳಿಸತೊಡಗುವದು)

ದೃಶ್ಯ - ೨

(ದೇಸಾಯರು ಪಡಸಾಲೆಯಲ್ಲಿ ತಮ್ಮ ಆರಾಮಕುರ್ಚಿಯ ಮೇಲೆ ಕುಳಿತ್ತಿದ್ದಾರೆ. ಸಂಜೆಯ ಸಮಯ ಶ್ಯಾಮ ಹೊರಗಿನಿಂದ ಬರುತ್ತಾನೆ. ಬಗಲಚೀಲವನ್ನು ಗೂಟಕ್ಕೆ ಹಾಕುತ್ತ)

ಶ್ಯಾಮ : ಏನು ಬಿಸಲದ ಅಂದ್ರಿ, ದಾದಾ, ಸಂಜೀ ಇದೂವರಿ ಆದ್ರೂ ಇನ್ನೂ ಉರಿ ಕಡಿಮಿ ಆಗಿಲ್ಲಾ...ನೋಡ್ರಿ...(ಪೇಪರಿನಿಂದ ಗಾಳಿ ಹಾಕಿಕೊಳ್ಳುತ್ತ) ಅನೂ, ಅನೂ ಬೇಟಾ, ಒಂದು ಗ್ಲಾಸು ನೀರು ತೂಗೊಂಡು ಬಾ.

ಶಾಂತಾ : (ನೀರಿನೊಂದಿಗೆ ಬಂದು) ತೊಗೋಳ್ರಿ...ಅನೂ ಎಲ್ಲೆ ಹೋಗ್ಯಾಳೋ ಏನೋ... ಮಧ್ಯಾಹ್ನದಿಂದ ಪತ್ತೇನ ಇಲ್ಲಾ ಚಿನ್ಮಯ, ಕಿರಣ ಅವರೂ ಕಾಣಸೂದುಲ್ಲಾ...ತೋಟಕ್ಕ ಹೋಗ್ಯಾರೋ ಏನೋ...

ದೇಸಾಯರು : ಹೌದು, ಹೌದು...ಮಧ್ಯಾಹ್ನ ನೀವೆಲ್ಲಾ ಮಲಗಿದ್ದಿರಿ, ಹೋಗುವಾಗ ನನಗ ಹೇಳಿ ಹೋದಳು.

ಶಾಂತ : ನಿಮಗ ಹೇಳಿದಳು, ನೀವು ಹೋಗಂದ್ರಿ, ಹೌದಲ್ಲೋ? ಬ್ಯಾಡಾ ಅನಬಾರದೇನು ದಾದಾ, ಆ ಗಂಡಹುಡುಗರ ಜೋಡಿ ಏನು ಆಟಾ ಇಕೀದು?

ದೇಸಾಯರು : ಆಡಲಿ ಬಿಡು, ಆಡೂ ವಯಸ್ಸು...ನಾಳೆ ಲಗ್ನಾ ಮಾಡಕೊಂಡು ಗಂಡನ ಮನೀಗೆ ಹೋದಮ್ಯಾಲೇನು ಅದಕ್ಕ ಆಡಲಿಕ್ಕೆ ಸಿಗತದೇನು? ಮ್ಯಾಲೆ ಯಾ ಹೊರಗಿನ ಹುಡುಗರ ಜೋಡಿ ಏನು ಹೋಗಿಲ್ಲಾ, ಎಲ್ಲಾ ಮನೀ ಹುಡುಗರು...ಕರಾರಾ ಮಾಡೀನಿ... ಲಗೂ ಮನೀಗೆ ಬರ್ರಿ ಅಂತ...ಬಂದಾರು ಈಗ...

ಶ್ಯಾಮ : ಮುಂಬಯಿ ಪಾಹುಣ್ಯಾರು ಎಲ್ಲಿದ್ದಾರ? ಕಾಣಸೂದುಲ್ಲಾ?

ದೇಸಾಯರು : ಮನೀ ನೋಡಲಿಕ್ಕೆ ಹತ್ಯಾರ...ಆನಂದಾ...ವಸುಧಾ ತೋರಸಲಿಕ್ಕೆ ಹತ್ಯಾರ...(ಅತ್ಯಂತ ನಿರುತ್ಸಾಹದ ಧ್ವನಿಯಲ್ಲಿ ಹೇಳುವರು)

ಶ್ಯಾಮ : ನೀವೇನು ವಿಚಾರಾ ಮಾಡಿದ್ರಿ, ದಾದಾ?

ದೇಸಾಯರು : ಏನೋಪಾ, ನನಗೇನು ತಿಳೀವಲ್ತು ಬಿಡು...ಯಾಕೋ ಆ ಮಂದಿನ್ನ ನಂಬಿ ಮನೀ ಕೊಡೂದು ಅಂದರ... ನನಗೇನು ವಿಶ್ವಾಸ ಆಗವಲ್ದು ಬಿಡು, ಅವರಿಲ್ಲೇ ಬಂದು ಇರ್ತಾರ ಅಂತ... ಹೆಚಿಗಿ ರೊಕ್ಕಕ್ಕ ಯಾವದರ ಹೊಟೆಲಿಗೆ ಗಿಟಲಿಗೆ ಮಾರಿ ಹೋಗೂ ಮಂದಿ ಅದು...ಟಿಪಿಕಲ್ ವ್ಯಾಪಾರೀ ಮಂದಿ ಕಾಣಸ್ತಾರ...

ಶಾಂತಾ : ದಾದಾ, ಅಣ್ಣಾನೂ ಹೇಳ್ಯಾನ, ಅವರೂ ತಮಗ ಇರಲಿಕ್ಕೆ ಬೇಕು ಅಂತ ಒತ್ತಿ ಒತ್ತಿ ಹೇಳ್ಯಾರ...ಇನ್ನೂ ಯಾಕ ಹಿಂಗ ಅನುಮಾನಾ ಮಾಡತೀರಿ?

ದೇಸಾಯರು : ಅದನ ಶಾಂತಿ, ನನಗ ಯಾಕೋ ಅವರ ಶಬ್ದದ ಮ್ಯಾಲೆ ವಿಶ್ವಾಸ ಕೂಡವಲ್ಲತು.

ರುಕ್ಮಿಣಿ : (ಒಳಗಿನಿಂದ ಅಡಿಗೆಯ ಸೌಟನ್ನು ಹಿಡಿದುಕೊಂಡು ಬಡಬಡಿ ಯಲ್ಲಿ ಬಂದು) ಆನಂದ ಇಲ್ಲೇನು ದಾದಾ, ಅದೆಲ್ಲಾ ಕಾಳಜಿ ತೊಗೊಳ್ಳಿಕ್ಕೆ? ಹಾಂಗೇನರ ಇದ್ದರ ಅಂವಾ ಅಂತಿದ್ದನೇನು ಮನೀ ಅವರಿಗೆ ಕೊಡ್ರಿ ಅಂತ?

ಶಾಂತಾ : ಹೌದು ದಾದಾ, ಒಮ್ಮೆ ಹೂಂ ಅಂದೀರಿ, ಇನ್ನ ಮತ್ತ ಮತ್ತ ಎರಡನೇ ವಿಚಾರ, ಮಾಡಬ್ಯಾಡ್ರಿ.

ಶ್ಯಾಮ : ನೀವೆಲ್ಲಾ ಯಾಕ ಇಷ್ಟು ಗಡಿಬಿಡಿ ಮಾಡ್ತೀರಿ? ಅವರು ಸಾವಕಾಶ ವಿಚಾರಾ ಮಾಡಿ ಹೇಳವಲ್ಲರ‍್ಯಾಕ...ನನಗೂ ಹಂಗ ಅನಸತದ ದಾದಾ, ನೀವು ಪೂರಾ ವಿಚಾರಾ ಮಾಡ್ರಿ...ವಿಚಾರಾ ಮಾಡೇ ಮುಂದ ಹೆಜ್ಜೀ ಇಡ್ರಿ.

ಶಾಂತಾ : (ಅವನನ್ನು ಒಂದು ಬದಿಗೆ ಎಳೆದು) ಸುಮ್ಮನಿರಲಾರದ ನೀವು? ನಾವು ಇಷ್ಟು ಕಷ್ಟಪಟ್ಟು ಒಪ್ಪಿಸೀವಿ ಅವರನ್ನ...ನೀವು ಮತ್ತ ನಡುವ ಅಡ್ಡ ಮಾತಾಡಬ್ಯಾಡ್ರಿ.

ಶ್ಯಾಮ : ಇಲ್ನೋಡು, ನೀವೆಲ್ಲಾ ನಿಮ್ಮ -ನಿಮ್ಮ ದೃಷ್ಟೀಲೇ ವಿಚಾರ ಮಾಡ್ತೀರಿ. ಈ ಮನೇ ಅಂದರ ದಾದಾ ಅವರ ಜೀವ ಇದ್ದಾಂಗ... ಅದೇನಾರ ಕೆಟ್ಟ ಮಂದೀ ಕೈಗ ಬಿದ್ದರ ಅವರಿಗೆ ಸಹನ ಆಗಲಿಕ್ಕೆ ಶಕ್ಯ ಇಲ್ಲಾ...ಅದರದೇನಾರ ವಿಚಾರಾ ಮಾಡೀರೇನು?

ಶಾಂತಾ : ಏನು ಕೆಟ್ಟ ಮಂದೀ ಕೈಗೆ ಬೀಳೂದುಲ್ಲಾ. ನಮ್ಮ ಹುಡುಗರ ಭವಿಷ್ಯದ್ದು ನಮಗ ವಿಚಾರಾ ಮಾಡಲಿಕ್ಕೆ ಬ್ಯಾಡೇನು? ನೀವು ಸುಮ್ಮನಿರ‍್ರಿ, ನಡುವ ಮಾತಾಡಬ್ಯಾಡ್ರಿ.

ಶ್ಯಾಮ : (ಸ್ವಲ್ಪ ಸಿಟ್ಟಿನಿಂದ) ಬೇಕಾದ್ದು ಮಾಡಿಕೊಳ್ರಿ...ನೀವೇನೋ ನಿಮ್ಮ ಮನೀ ಏನೋ...(ಹೊರಗೆ ಹೊರಡುವನು)

ದೇಸಾಯರು : ಶ್ಯಾಮಾ, ಎಲ್ಲಿ ಹೊಂಟ್ಯೋ? ಮನ್ಯಾಗಿರು ಅವರು ಬಂದಾಗ...ನೀ ಇದ್ದರ ನನಗೆಷ್ಟೋ ಆಧಾರ ಇರತದ.

ಶ್ಯಾಮ : ದಾದಾ, ನಡುವ ಮಾತಾಡಬ್ಯಾಡ್ರೀ ಅಂತ ನಮ್ಮ ಮನೀಯವರ ಹುಕುಮಾಗೇದ, ಇಲ್ಲೆ ಕೂತು ಏನು ಮಾಡ್ಲಿ? ಹೊರಗ ಘಾಳ್ಯಾಗ (ಅಷ್ಟೇ ಹೊತ್ತಿಗೆ ಆನಂದ, ಧನರಾಜಸೇಠ ಮತ್ತು ಅವರ ಮಗ ಪ್ರಫುಲ್ ಹೊರಗಿನಿಂದ ಬರುವರು. ಧನರಾಜಸೇಠ ಸಿಲ್ಕ ಕುರ್ತಾ ಮತ್ತು ಬೆಳ್ಳಗಿನ ಧೋತರ ಉಟ್ಟಿದ್ದಾರೆ - ಗುಜರಾತಿಗಳ ತರಹ. ಪ್ರಫುಲ್ ಸಿಲ್ಕ್ ಕುರ್ತಾ, ಪಾಯಜಾಮಾ ಹಾಕಿಕೊಂಡಿದ್ದಾನೆ. ಇಬ್ಬರ ಕೈಯಲ್ಲಿಯೂ ಬಂಗಾರದ ವಾಚುಗಳು, ಕೊರಳಲ್ಲಿ ದಪ್ಪ ಬಂಗಾರದ ಚೈನುಗಳು ಇವೆ)

ಧನರಾಜ : ಬಹುತ್ ಪುರಾನಾ ಹೈ... ಘರ್ ತೋ ಏಕ್‌ದಂ ಪುರಾನಾ ಹೈ, ಆನಂದ ಭಾಯೀ...ಬಹುತ್ ಖರಾಬ್ ಹುವಾ ಹೈ. (ಬಹಳ ಹಳೆಯ ಮನೆ, ಭಾಳ ಹಳೇದು ಮನಿ ಆನಂದ ಭಾಯಿ, ಎಲ್ಲಾ ಭಾಳ ಹಾಳಾಗಿ ಹೋಗೇದ)

ಪ್ರಫುಲ್ಲ : ಪರ್ ಉಡ್ ತೋ ಸಾಲಿಡ್ ಹೈ, ಬಾಪು...ಕಿತನಾ ವುಡ್ ಹೈ, ಸಾಲಿಡ್ ವುಡ್ (ಆದರ ಬಾಪೂ, ಕಟಗಿ ಎಷ್ಟು ಸಾಲಿಡ್ ಅದ...ಎಷ್ಟು ಕಟಿಗೆ ಕೆಲಸ ಅದ! ಸಾಲಿಡ್ ಕಟಗಿ)

ಧನರಾಜ : (ಮಗನ ಕಡೆಗೆ ತಿರುಗಿ ಪಿಸುದನಿಯಲ್ಲಿ) ತುಮ್ ಚುಪ್ ರಹೋ...ಹಾಂ, ಆನಂದ ಭಾಯೀ ಮೈ ಬೋಲ್ ರಹಾ ಥಾ... ಘರ ಬಹುತ್ ಖರಾಬ್ ಹೋ ಗಯಾ ಹೈ. (ನೀ ಸುಮ್ಮನಿರೋ... ಹಾಂ ಆನಂದಭಾಯಿ, ನಾಯೇನಂತೀನಿ, ಮನೀ ಭಾಳ ಕೆಟ್ಟ ಸ್ಥಿತೀ ಒಳಗದ)

ಆನಂದ : ಮೈ ಆಪಕೋ ಪಹಲೇ ಹೀ ಬೋಲಾ ...ಘರ್ ಪುರಾನಾ ಹೈ... ಪರ್ ವುಡ್ ವರ್ಕ್ ತೋ ದೇಖ್ ರಹೇ ಹೈನ ಆಪ... ಓ ತೋ ಮೈ ಆಪಕೋ ಠೀಕ್ ಬೋಲಾ ನ(ನಾ ನಿಮಗ ಮೊದ್ಲೇ ಹೇಳೇಬಿಟ್ಟದ್ದೆ... ಮನೀ ಹಳೇದು ಅಂತ. ಆದರ ಕಟಗೀ ಕೆಲಸಾ ನೋಡಿದಿರಲ್ಲಾ, ಅದು ನಾ ಹೇಳಿದಂಗ ಅದ ಹೌದಲ್ಲೋ)

ಪ್ರಫುಲ್ಲ : ಎಸ್, ಆನಂದಭಾಯೀ, ಸಾಲಿಡ್ ವುಡ್ ಹೈ, ಸಾಲಿಡ್ ವುಡ್ (ಯಸ್, ಆನಂದಭಾಯೀ, ಸಾಲಿಡ್ ಕಟಗೀ ಅದ, ಸಾಲಿಡ್)

ದೇಸಾಯರು : (ರೇಗಿಸ ದನಿಯಲ್ಲಿ) ಏ ಆನಂದಾ, ಏನ ಹಚ್ಚ್ಯಾನ ಇಂವಾ? ಸಾಲಿಡ್ ವುಡ್, ಸಾಲಿಡ್ ವುಡ್ ಅಂತ? ಅಂವಗ ಹೇಳು ಮೊದಲ... ಅವೆಲ್ಲಾ ನಮ್ಮ ನೀ ಬಾಗಲಾ ಖಿಡಕೀ ಅವ...ಬರೇ ಕಟಿಗಿ ಅಲ್ಲಾ...ಆ ಕಟಗೀ ಮ್ಯಾಲ ಕುಸುರಿನ ಕೆಲಸಾ ಮಾಡ್ಯಾರಲ್ಲಾ...ಅದರಾಗ ನಮ್ಮ ಮನಿತನದ ಇತಿಹಾಸಾ ಬರದಾರಂತ ಹೇಳು ಅವರಿಗೆ.

ಆನಂದ : ಕಾಕಾ, ಒಂದು ಸ್ವಲ್ಪ ಸುಮ್ಮನಿರ್ರಿ ನೀವು, ನಾ ಎಲ್ಲಾ ತಿಳಿಸಿಹೇಳ್ತೀನಿ ಅವರಿಗೆ.

ದೇಸಾಯರು : ಅವರಿಗೆ ಹೇಳು ಮನೀ ಹ್ಯಾಂಗದ ಹಾಂಗ ಇಟಗೊಂಡು ಇರಬೇಕು... ಏನೂ ಬದ್ಲೀ ಮಾಡೂ ಹಾಂಗಿಲ್ಲಾ...ಅಂತ.

ಆನಂದ : ಕಾಕಾ, ಮನೀ ಛಂದ ಕಾಣಸೇದ ಅಂತ ತೊಗೊಳ್ಳಿಕ್ಕೆ ಹತ್ತ್ಯಾರ ಅವರು.. ಅಂದವ್ಯಾಲೆ ಅಂಥಾದೇನು ಬದಲೀ ಮಾಡಲಿಕ್ಕೆ ಹೋಗೂದುಲ್ಲಾ. ಇನ್ನ ಅಲ್ಪ - ಸ್ವಲ್ಪ ಅಲ್ಲೆ, ಇಲ್ಲೆ ಬಾಥರೂಮ - ಪಾಯಖಾನಿ ಅವನ್ನಷ್ಟು ಬದ್ಲೀ ಮಾಡಿಸಿಗೋಬಹುದು.

ದೇಸಾಯರು : ಏನೇನೋ ಒಡ್ಯೂದು, ಕೆಡವೂದು ಮಾಡೂ ಹಾಂಗಿಲ್ಲಾ ನೋಡೂ.

ಆನಂದ : ಕಾಕಾ, ಹಾಂಗಂದರ ಹ್ಯಾಂಗ ನಡೀತದ? ಮನೀಕೊಂಡು ತೊಗೊಂಡ ಮ್ಯಾಲೆ ಅಷ್ಟು ಬದ್ಲೀ ಮಾಡಬ್ಯಾಡ್ರಿ ಅಂದರ ಯಾಕ ಕೇಳತಾರ ಅವರು?

ಧನರಾಜ : ಕ್ಯಾ... ಕ್ಯಾ ಬೋಲ ರಹೇ ಹೈ ಆಪಕೋ ಚಾಚಾಜೀ?

(ಏನು ಅಂತಾರ ನಿಮ್ಮ ಕಾಕಾ?)

ಆನಂದ : ಕುಛ್ ನಹೀ...ಪೂಛ್ ರಹೇ ಹೈ, ಕಬ್ ಆ ರಹೇ ಹೈ ಆಪ ಲೋಗ್ ಇಧರ್ (ಏನಿಲ್ಲಾ, ನೀವಿಲ್ಲೆ ಯಾವಾಗ ಬರತೇರಿ ಅಂತ ಕೇಳ್ಳಿಕ್ಕೆ ಹತ್ಯಾರ?

ಧನರಾಜ : ತೋ ಹಮಾರಾ ಆಫರ್ ಉನ್‌ಕೋ ಮಂಜೂರ್ ಹೈ? (ಹಾಂಗಾದರ ನಮ್ಮ ಆಫರ್ ಅವರಿಗೆ ಪಸಂದ್ ಅದ?)

ಆನಂದ : ಬಿಲ್‌ಕುಲ್ ..ಕಲ್ ಆಪ್ ನಿಕಲನೇ ಸೇ ಪಹಲೇ ಪೇಪರ್ಸ್ ಸೈನ್ ಹೋ ಜಾಯೇಂಗೇ (ಬಿಲ್‌ಕುಲ್... ನಾಳೆ ನೀವು ಹೊರಡೂದರಾಗ ಪೇಪರು ಸಹಿ ಮಾಡಿಸಿಬಿಡೂಣು)

ದೇಸಾಯರು : (ಇನ್ನೂ ತಮ್ಮ ಮಾತನ್ನೇ ಮುಂದುವರಿಸುತ್ತ) ಏನ ತಲೀ ತಿಳೀತದ ಇವರಿಗೆ? ಇತಿಹಾಸಾ, ಸಂಸ್ಕೃತಿ ಅಂದರ ಯಾವಗಿಡದ ತೊಪ್ಪಲಾ ಅಂತ ಅನ್ನೂದರ ಗೊತ್ತದ ಏನು? ಬರೇ ಶೇರಪ್ಯಾಟಿ, ಬಡ್ಡೀದರಾ ಇದರಾಗ ಮುಳಿಗೇಳತಾರ ಇಡೀದಿನಾ... ನಡೀರಿ ಅನ್ನು ಆನಂದಾ. ಒಳಗಿನ ಹಾಲಿಗೆ...ತೋರಸ್ತೀನಿ ನಮ್ಮ ವಂಶದ ಇತಿಹಾಸಾ ಅವರಿಗೆ..

ಧನರಾಜ : ಕ್ಯಾ ಬೋಲ್ ತೇ ಹೈ ಚಾಚಾಜೀ? (ಏನಂತಾರ ಚಾಚಾಜೀ?)

ಆನಂದ : ಅಂದರ್ ಹಾಲ್ ಮೇ ಹಮಾರೇ ಖಾನ್‌ದಾನ್ ಕೆ ಬಹುತ್ ಸೇ ಫೋಟೋಗ್ರಾಫ್ಸ್ ಹೈ,...ವೋ ಆಪಕೋ ದಿಖಾನಾ ಚಾಹತೇ ಹೈ(ಒಳಗ

ಹಾಲಿಸ್ಯಾಗ ನಮ್ಮ ಖಾನದಾನದ್ದು ಎಲ್ಲಾ ಫೋಟೋ ಅವ, ಅವನ್ನ ನಿಮಗ ತೋಸಬೇಕಂತಾರ)

ಧ - ಪರ : ಹಾಂ, ಹಾಂ, ಕ್ಯೋಂ ನಹೀ...ಕ್ಯೋಂ ನಹೀ... ದೇಖೇಂಗೇ ಚಲೋ (ಹಾಂ, ಹಾಂ, ನೋಡೂಣು, ನೋಡೂಣು...ನಡೀರಿ)
(ಎಲ್ಲರೂ ದಾದಾ ಅವರ ಹಿಂದೆ ಒಳಗೆ ಹೋಗುತ್ತಾರೆ)

ದೃಶ್ಯ - ೩

(ಒಳಗಿನ ಒಂದು ವಿಶಾಲವಾದ ಕೋಣೆ. ಪ್ರವೇಶಿಸಿದೊಡನೆ ಎದುರಿಗ ಎಂದು ಯಾವದೋ ಮಾರಾಠಾ ಸರದಾರನ ದೊಡ್ಡ ತೈಲಚಿತ್ರವಿದೆ. ಸುತ್ತ ನಾಲಕು ಗೋಡೆಗಳ ಮೇಲೆ ಹಳೆಯ ಫೋಟೋಗಳು - ದೇಸಾಯರ ಹಿರಿಯರು, ಹಿರಿಯರ ಜೊತೆ ಬ್ರಿಟಿಶ್ ಅಧಿಕಾರಿಗಳು ಇತ್ಯಾದಿ...ಇತ್ಯಾದಿ, ದೇಸಾಯರು ಕುದುರೆಯ ಮೇಲೆ ಕುಳಿತ ತಮ್ಮ ವಂಶಜರೊಬ್ಬರ ಫೋಟೋದ ಮುಂದೆ ನಿಂತು ಅಭಿಮಾನದಿಂದ ಹೇಳುತ್ತಿದ್ದಾರೆ. ಅವರ ಹಿಂದೆ ಆನಂದ ಮತ್ತು ಅವನ ಅತಿಥಿಗಳು ನಿಂತು ಕೇಳುತ್ತಿದ್ದಾರೆ.)

ದೇಸಾಯರು : ಇವರೇ ನಮ್ಮ ಮೂಲದೇಸಾಯರು...ನಮ್ಮ ಹಿರಿಯರು ಇವರಿಗೇ ನಾನಾ ಫಡನವೀಸ ಅವರ ಸರದಾರರು ಇಲ್ಲೇ ಹತ್ತು ಊರುಗಳನ್ನು ದೇಸಗತಿ ಹಾಕಿಕೊಟ್ಟರು. ಈ ವಾಡೇನೂ ಅವರ ಕಟ್ಟಿಸಿಕೊಟ್ಟದ್ದು. ಆಗಿನಿಂದ ನಮ್ಮ ಮನಿತನದವರು ಇಲ್ಲೇ ಇದ್ದೀವಿ. (ಆನಂದ ಅದನ್ನು ಹಿಂದಿಯಲ್ಲಿ ಭಾಷಾಂತರಿಸಿ ಸಂಕ್ಷಿಪ್ತವಾಗಿ ಹೇಳುತ್ತಾನೆ)

ಧ.ಪ್ರ : ಬಹುತ್ ಅಚ್ಛಾ...ಬಹುತ್ ಅಚ್ಛಾ (ಓಹೋ...ಹಿಂಗೇನು)

ದೇಸಾಯರು : (ಒಂದೊಂದೇ ಫೋಟೋದತ್ತ ಸಾಗುತ್ತ) ಇವರು ನಮ್ಮ ಮುತ್ತಜ್ಜಾ...ಬ್ರಿಟಿಶ್ ಸರಕಾರಕ್ಕ ಭಾಳ ಸಹಾಯಾ ಮಾಡಿದರು ಅಂತ ಇವರಿಗೆ ರಾವಬಹಾದುರ ಪದವಿ ಸಿಕ್ಕಿತ್ತು... ಇವರು ನಮ್ಮ ಅಜ್ಜಾ-ಅಜ್ಜಿ...ಗಿನ ಕಾಲದಾಗ ನಮ್ಮ ಅಜ್ಜಿ ಕುದರೀಸವಾರೀ ಮಾಡತಿದ್ದರು. ಸಂಸ್ಥಾನಿಕರ ಮಗಳಂತ ಅವರು...ಇವರು ನಮ್ಮ ತಂದೆ - ಇವರೂ ರಾವಬಹಾದ್ದೂರರು...ರಾವಬಹಾದ್ದೂರ ಭೀಮರಾವ್ ದೇಸಾಯರು...

(ಇವರು ಹೀಗೇ ಹೇಳುತ್ತ ಮುಂದೆ ಸಾಗುತ್ತಿದ್ದಂತೆ ಉಳಿದವರು ಅಲ್ಲಿಯೇ ಇದ್ದ ಕುರ್ಚಿಗಳ ಮೇಲೆ ಕುಳಿತು ತಮ್ಮ-ತಮ್ಮಲ್ಲೇ ಏನೋ ಚರ್ಚೆಯಲ್ಲಿ ತೊಡುಗತ್ತಾರೆ. ದೇಸಾಯರಿಗೆ ಅದರ ಅರಿವೇ ಇಲ್ಲ)

ದೇಸಾಯರು : ಇವರು ನಮ್ಮ ಕಾಕಾ... ಬ್ರಿಟಿಶ ಸರಕಾರದ ಭಾರೀ ದೊಡ್ಡ ಆಫೀಸರ್ ಇವರು.. ಅವರ ಸೂಟು-ಬೂಟು ಐಟು ನೋಡ್ರಿ... ಇದು ಅವರ ಮದಿವೀ ಫೋಟೋ ಧಾರವಾಡ ಜಿಲ್ಲಾದ ಆಗಿನ ಬ್ರಿಟಿಶ್ ಕಲೆಕ್ಟರ್ ಬಂದಿದ್ದನೂಂತ ಲಗ್ನಕ್ಕ...ಅವನ ಜೋಡಿ ನಿಂತು ಎಲ್ಲಾರೂ ಏನ ಡೌಲಲೇ ಫೋಟೋ ತಗಿಸಿಗೊಂಡಾರ.... ಇಲ್ಲೆ ಅದ ನೋಡ್ರೀ ಹಾಗೆಯೇ ಅವರು ಹೇಳುತ್ತ ಮುಂದೆ ಸಾಗುತ್ತಿದ್ದಾರೆ. (ಚಿನ್ಮಯ ಸದ್ದಾಗದಂತೆ ಬಂದು ಅವರ ಹಿಂದಿ ನಿಂತಿದ್ದಾನೆ. ಅವರಿಗೇನೂ ಬಾಹ್ಯ ಪ್ರಪಂಚದ ಅರಿವಿದ್ದಂತಿಲ್ಲ. ರಂಗದ ಒಂದು ಬದಿಗೆ ಕುಳಿತವರ ಚರ್ಚೆ ಸಾಗಿದೆ)

ಚಿನ್ಮಯ : ಇದು ಯಾರ ಫೋಟೋ? ಬಂದೂಕು ಹಿಡಕೊಂಡು ನಿಂತಾರ?

ದೇಸಾಯರು : ಇವರ ...ಇವರೂ ನಮ್ಮ ಅಜ್ಜನ...ಅವ್ವನ ಕಡೀ ಅಜ್ಜಾ...ಅವರು ಬ್ಯಾಟೀ ಆಡೂದರಾಗ ಭಾರೀ ಪ್ರಸಿದ್ಧಾ...ಆಗ ಬೆಳಗಾವೀ ಸುತ್ತ ಮುತ್ತಲ ರಗಡ ಜಂಗಲ ಇತ್ತು. ಬ್ರಿಟಿಶ್ ಆಫೀಸರು ಬರತಿದ್ದರು ಅವರ ಜೊಡಿ ಬ್ಯಾಟೀ ಆಡಲಿಕ್ಕೆ...ನಾವ ನೋಡಿವಿ ಸಣ್ಣವರಿದ್ದಾಗ...ಅವರು ತಾವರಗಟ್ಟೀ ಜಂಗಲಿನ್ಯಾಗಿಂದ ಹುಲೀ ಹೊಡಕೊಂಡ ಬಂದದ್ದು.

ಚಿನ್ಮಯ : ಹುಲೀದೂ ಫೋಟೋ ಅದ ಅಲ್ಲಾ, ಅಜ್ಜಾ, ಎಲ್ಲೆದ್ತ ಅದು?

ದೇಸಾಯರು : ಹಾಂ, ಅಪ್ತ ಅಲ್ಲಾ, ಈ ಕಡೇ ಅದ್ತ ಬಾ. ತೋರಸ್ತೀನಿ. (ಈಗ ಒಮ್ಮೆಲೇ ಚಿನ್ಮಯ ತಮ್ಮೊಡನಿದ್ದ ಅರಿವಾಗಿ) ಅರೇ ಲುಚ್ಚಾ, ನೀ ಯಾವಾಗ ಬಂದಿ? ಅವರೆಲ್ಲಾ ಎಲ್ಲೆ ಹೋದರು? (ಹಿಂತಿರುಗಿ ನೋಡುತ್ತಾರೆ - ಅವರೆಲ್ಲ ತಾನು ಅಲ್ಲಿದ್ದುದರ ಅರಿವೂ ಇಲ್ಲದಂತೆ ತಮ್ಮ ಚರ್ಚೆಯಲ್ಲೇ ಮುಳುಗಿದ್ದುದನ್ನು ನೋಡಿ ಅವಾಕ್ಕಾಗಿ ನಿಲ್ಲುತ್ತಾರೆ. ಕ್ರಮೇಣ ಮುಖದ ಮೇಲೆ ನೋವು ಕಾಣಿಸಿಕೊಳ್ಳುತ್ತದೆ. ಚಿನ್ಮಯ ಏನೂ ತಿಳಿಯದೆ ಅವರ ಕಡೆಗೊಮ್ಮೆ, ಅಜ್ಜನ ಕಡೆಗೊಮ್ಮೆ ನೋಡುತ್ತಿದ್ದಾನೆ. ದೂರದಿಂದ ಗಂಭೀರ ಹೃದಯಸ್ಪರ್ಶಿ ರಾಗದ ಅಲೆಯೊಂದು ತೇಲಿಬರುತ್ತದೆ. ಒಳಗಬಾಗಿಲಿನಿಂದ ಶಾಂತಾನ ಧ್ವನಿ)

ಶಾಂತಾ : ಚಿನೂ, ಅಜ್ಜಾಗ, ಸಂಧ್ಯಾವಂದನಿಗೆ ತಯಾರಿ ಮಾಡಿಟ್ಟೀನಿ ಅಂತ ಹೇಳು. ನೀ ಹೋಗಿ ನಿಮ್ಮ ಅಪ್ಪ ಎಲ್ಲಿದ್ದಾರ ನೋಡು...ತಾಟು ಹಾಕೇದ ಅಂತ ಹೇಳಿ ನಿಂತ ಕರಕೊಂಡ್ತ ಬಾ.

ಚಿನ್ಮಯ : ಹೂಂ, ಕರಕೊಂಡ್ತ ಬರ್ತೀನಿ. (ಹೊರಗೆ ಓಡುವನು)

(ದೇಸಾಯರು ಅದೇ ಭಾವದಲ್ಲಿ ಇನ್ನೂ ಅವರನ್ನೇ ನೋಡುತ್ತ ನಿಂತಿದ್ದಾರೆ. ರಂಗದ ಮೇಲೆ ಕ್ರಮೇಣ ಕತ್ತಲೆಯಾಗುವುದು).

ಅಂಕ : ೩

ದೃಶ್ಯ - ೧

(ಪಡಸಾಲೆಯ ದೃಶ್ಯ. ಮನೆ ಅತ್ಯಂತ ಶಾಂತವಾಗಿದೆ. ಹಿನ್ನೆಲೆಯಲ್ಲಿ ಮಧುರವಾದ ಕೊಳಲಿನ ಧ್ವನಿ ಕೇಳಿಬರುತ್ತಿದೆ. ಪಡಸಾಲೆಯ ಒಂದು ಬದಿಯ ಕಿಟಕಿಯಿಂದ ಆಚೆಯ ಕೋಣೆಯಲ್ಲಿ ಕೆಲಸಗಾರರಿಬ್ಬರು ಗೋಡೆಗೆ ಸುಣ್ಣ ಹಚ್ಚುವ ಕೆಲಸದಲ್ಲಿ ತೊಡಗಿದ್ದುದು ಕಾಣುತ್ತದೆ. ನಡು-ನಡುವೆ ಅವರ ಕೂಗಾಟ ಕೇಳಬರುತ್ತದೆ.

ದೇಸಾಯರು ಎಂದಿನಂತೆ ತಮ್ಮ ಆರಾಮಕುರ್ಚಿಯಲ್ಲಿ ಕುಳಿತಿದ್ದಾರೆ. ರುಕ್ಮಿಣಿಬಾಯಿ ಒಂದು ಬಾಗಿಲ ಹೊಸ್ತಿಲಲ್ಲಿ ಬತ್ತಿ ಹೊಸೆಯುತ್ತ ಕುಳಿತಿದ್ದಾಳೆ)

ದೇಸಾಯರು : ಹುಡುಗರಿಲ್ಲಾ...ಮನೀ ಮೂಕಾಧಂಗ ಆಗಿಬಿಟ್ಟದ ನೋಡು.

ರುಕ್ಮಿಣಿಬಾಯಿ: ಹೌದು...ನನಗಂತೂ ಎರಡು ದಿನದಾಗ ತಲೀ ಕೆಡೂಹಾಂಗ ಆಗೇದ. ಇಡೀ ದಿನಾ ಖಾಲಿ, ಖಾಲಿ...ಏನೇನೂ ಕೆಲಸನ ಇಲ್ಲಾ ಅದಕ್ಕ ಶಾಂತಾಗ ಹೇಳಿದೆ -''ಈಗ ಹೋಗಬ್ಯಾಡ್ರೆ, ಮುಂದಿನ ವಾರ ಹೋಗೀರಂತ'' ಅಂತ, ಕೇಳಲಿಲಲ್ಲಾ ಅವರೂ....

ದೇಸಾಯರು : ಹಾಂಗಂದರ ಹ್ಯಾಂಗ...? ಅಲ್ಲೆ ಹೋಗಬ್ಯಾಡ್ರಿ ಅಂದರ ಹ್ಯಾಂಗ ನಡದೀತು? ಶ್ಯಾಮನ ಅವ್ವಾ-ಅಪ್ಪನೂ ಮೊಮ್ಮಕ್ಕಳನ ಯಾವಾಗ ನೋಡೇನೋ ಅಂತ ಕೂತಿರ್ತಾರ. ಎರಡ ದಿನಾ... ಇವತ್ತ ರಾತ್ರಿ ಇಲ್ಲಾ ನಾಳೆ ಮುಂಜಾನೆ ಬಂದು ಬರ್ತಾರ.

ರುಕ್ಮಿಣಿಬಾಯಿ: ಹೌದು, ನೀವನ್ನೂದೂ ಖರೇನ...ಆದರ ಅತ್ಲಾಗ ಆನಂದಾ ಅವರು ಹೋದರು...ಇತ್ಲಾಗ ಇವರೂ ಹೋದರು... ತುಂಬಿದ ಮನೀ ಒಮ್ಮಿಗಿಲೇ ಬರೇದಾಧಂಗ ಆತು ನೋಡ್ರಿ ದಾದಾ, ಅದಕ್ಕ ತ್ರಾಸನಿಸಿತು... ಮುಂದಿನ ವಾರದ ತನಕಾ ಅಂದರ ಶೇಡಜೀ ಮನೀ ಅವರೂ ಬಂದಿರತಿದ್ದರ...ಶಕ್ಯ ಆದರ ಆನಂದಾ ವಸುಧಾನೂ ಬರತೀವಿ ಅಂದಾರ ಅವರ ಜೋಡಿ.

ದೇಸಾಯರು : ಶಕ್ಯ ಆದರ ಏನು, ಬಂದs ಬರತಾನ ನಿನ್ನ ಮಗಾ... ಅವನ ತಲ್ಯಾಗ ನಿನ್ನ ತೋಟಾ ಮಾರೂದು ಒಂದು ಹೊಕ್ಕsದ ಅಲ್ಲಾ... ಈಗೂ ಹೇಳ್ತೀನಿ, ನೀ ಸಹಿ ಮಾಡಬ್ಯಾಡಾ, ರುಕ್ಮಿಣಿ.

ರುಕ್ಮಿಣಿಬಾಯಿ: ಅಲ್ಲಾ ದಾದಾ, ಹಿಂಗ್ಯಾಕಂತೀರಿ... ಏನೋ ಫ್ಯಾಕ್ಟರೀ ಹಾಕತಾರಂತ ಶೇಡಜೀ ಅಲ್ಲೆ... ಊರಿನ ನಾಲ್ಕು ಹುಡುಗರಿಗೆ ಊರಾಗs ನೌಕರಿ ಸಿಗೂಹಾಂಗ ಆಗತsದ, ಪುಣ್ಯದ ಕೆಲಸಾ ಅಂತಾನ ಆನಂದಾ... ಖರೇ ಅಲ್ಲೇನು ಹೇಳ್ರಿ, ಅಂವಾ ಅನ್ನೂದು? ಇಲ್ಲಾಂದರ ಇಲ್ಲೇನದ ಹೇಳ್ರಿ ಹುಡುಗರಿಗೆ, ಪಾಪಾ, ಕಲಿಯೂದು ಮುಗದಕುಡಲೇ ಹುಡುಗರೆಲ್ಲಾ ಪುಣೆ - ಮುಂಬಯಿ - ಬೆಂಗಳೂರು ಅಂತ ಓಡತಾವ ..ಕೆಲಸಾ ಹುಡಿಕ್ಕೊಂಡು...

ದೇಸಾಯರು : ಹೌದು, ಅದೆಲ್ಲಾ ಖರೇನವಾ... ಆದರ ಎಂಥಾ ಫ್ಯಾಕ್ಟರೀ ಹಾಕತಾರೋ ಏನೋ... ಊರೆಲ್ಲಾ ಎಷ್ಟು ಹಾಳ ಮಾಡತಾರೋ ಏನೋ...

ರುಕ್ಮಿಣಿಬಾಯಿ: ಆನಂದಾ ಅಷ್ಟು ವಿಚಾರ ಮಾಡದs ಹೇಳತಾನೇನು? ಅಲ್ಲದs ಶೇಡಜೀ ಅವರೂ ನಾಳೆ ಬಂದು ಇಲ್ಲೇ ಇರಾವರಿದ್ದಾರ... ತಾವು ಇರೂ ಊರs ಯಾರು ಯಾಕ ಹಾಳ ಮಾಡ್ತಾರ ಹೇಳ್ರಿ?

ದೇಸಾಯರು : ಏನೋ, ನೋಡು, ನನಗಂತೂ ಇದೆಲ್ಲಾ ಬ್ಯಾಡಾ ಅನಸತsದ. ಶ್ಯಾಮ ಅಂತೂ ಮರ್ರ್ಯೋ ಬ್ಯಾಡಾ ಅಂತಾನ.

ರುಕ್ಮಿಣಿಬಾಯಿ: ಶ್ಯಾಮಂದು ಯಾವಾಗಲೂ ಹಿಂಗs... ತನಗ ಮುಂದ ಹೋಗಲಿಕ್ಕೆ ಬ್ಯಾಡಾ... ಬ್ಯಾರೇ ಅವರಿಗೂ ಏನೂ ಮಾಡಿಸಿಗೊಡೂ ಹಾಂಗಿಲ್ಲಾ. (ಹೊರಗಿನಿಂದ 'ಅವ್ವಾರ್ತ, ಒಂದ ಹರಕ ಅರಿವೀ ಕೊಡ್ರೀ ಒರಸಾಕ' ಎಂದು ಕೆಲಸಗಾರರ ದನಿ) ಹೂಂ, ಬರತೇನಪ್ಪಾ, ತಡೀ

(ಅಷ್ಟರಲ್ಲೇ, ಮತ್ತೊಮ್ಮೆ ಕೂಗುವನು - 'ಅವ್ವಾರ್ತ...) ತಡಿಯೋ ನಮ್ಮಪ್ಪಾ, ಏನ ಅವಸರಾ ಮಾಡ್ತೀ... ಎದ್ದು ಬರೂ ತನಕಾ ಪುರಸತ್ತಿಗಿಲ್ಲಾ... ಬರತೀನಿ ತಡಿ... (ಹೋಗಿ ಕೊಟ್ಟು ಸಾವಕಾಶವಾಗಿ ತಿರುಗಿ ಬರುವಳು) ಅಲ್ಲಾ, ಈ ಕೆಲಸದವರsಇದ್ದಾರ ಅಂತ ಭೋಲೋ ಅದ... ಮನ್ಯಾಗ ಒಂದಿಷ್ಟು ಉಲುವು ಅದ.

ದೇಸಾಯರು : ಹೂಂ, ಉಲುವದ...ಖರೇ...ಆದರೆ ಪುಕ್ಕಟ ಏನು ಬಂದಿಲ್ಲವಾ ಅದು...ಈ ಉಲುವು ಭಾರೀ ತುಟ್ಟಿ ಬಿತ್ತು ನಮಗ (ತೆರೆದ ಬಾಗಿಲ ಕಡೆಗೆ ನೋಡುತ್ತ) ಈ ಖೋಲಿಗೆ ಬಂದರೇನು ಈಗ ಕೆಲಸಕ್ಕ? (ಎದ್ದು ಬಾಗಿಲಲ್ಲಿ ನಿಂತು ಕೋಣೆಯಲ್ಲಿ ಬಗ್ಗಿ ನೋಡುತ್ತ) ಏನು ಸಾಮಾನಿಲ್ಲಾ ಹೌದಲ್ಲೋ? ಏನರ ತಪ್ಪಿ ಉಳದಿದ್ದರ ಈ ಬಾಜುದ ಖೋಲ್ಯಾಗ ಇಟ್ಟುಬಿಡ್ರೆಪಾ...

ರುಕ್ಮಿಣಿಬಾಯಿ: (ತನ್ನ ಮೊದಲಿನ ಜಾಗೆಯಲ್ಲಿ ಕುಳಿತು ಬತ್ತಿ ಹೊಸೆಯುತ್ತ) ನೀವು ಕಾಲೇಜಿನ್ಯಾಗಿದ್ದಾಗ ಇದ ಖೋಲ್ಯಾಗ ಓದಲಿಕ್ಕೆ ಕೂಡತಿದ್ದಿರಿ, ಅಲ್ಲ...?

ದೇಸಾಯರು : (ಹಿಂದಿನ ನೆನಪುಗಳಲ್ಲಿ ಮುಳುಗಿದಂತೆ) ಹೂಂ... ಇದ ಖೋಲ್ಯಾಗ ಅಲ್ಲೆ ಆ ಖಿಡಕೀ ಹತ್ತರ ನನ್ನ ಟೇಬಲ್ಲಿತ್ತು... ಇತ್ಲಾಕಡೆ ಮೂಲಿಗೆ ರಾಘುನ ಟೇಬಲ್ಲು...

ರುಕ್ಮಿಣಿಬಾಯಿ: ಹೂಂ, ಟೇಬಲ್ಲಿತ್ತು ಖರೇ, ಅವರೇನು ಒಂದದಿನಾ ಅಲ್ಲೆ ಓದಲಿಕ್ಕೆ ಕೂತದ್ದು ನೋಡಲಿಲ್ಲಾ ನಾ...ಬರೇ ಉಡಾಳ ಗೆಳ್ಯಾರ ಗುಂಪು ಕಟಿಗೊಂಡು ಊರಾಗಿನ ಹೆಣ್ಣುಹುಡುಗರನ್ನ ಕಾಡೂದರಾಗ ಹೊತ್ತು ಹೋಗತಿತ್ತು ಅವರದು...

ದೇಸಾಯರು : ನಿನಗೂ ಗೊತ್ತಿತ್ತು ಅನ್ನು, ಹಾಂಗಾದರ, ಅದೆಲ್ಲಾ?

ರುಕ್ಮಿಣಿಬಾಯಿ: ಗೊತ್ತಿರದ ಏನು...ನನ್ನ ಗೆಳತ್ಯಾರೆಲ್ಲಾ ಬ್ಯಾಸತ್ತು ಹೋಗಿದ್ದರು ಇವರ ಕಾಟಕ್ಕ...ಮನ್ಯಾಗರ ಏನು...ನನ್ನ ಏನು ಕಡಿಮೀ ಕಾಡತಿದ್ದರೇನು?

(ಕ್ರಮೇಣ ಬೆಳಕು ಆ ಕೋಣೆಯ ಭೂತಕಾಲದ ಮೇಲೆ ತಿರುಗುವುದು. ದೇಸಾಯರು ಕಾಲೇಜು ಹುಡುಗನಾಗಿದ್ದಾಗಿನ ದೃಶ್ಯ. ಕೋಣೆಯಲ್ಲಿ ತಮ್ಮ ಟೇಬಲ್ ಮುಂದೆ ಓದುತ್ತ ಕುಳಿತಿದ್ದಾರೆ. ಕಿರಿದೇಸಾಯರಿಗೆ ಯೋಗ್ಯವೆನ್ನಿಸುವಂತಹ ಸುಸಜ್ಜಿತ ಕೋಣೆ. ಕೆಳಗಿನಿಂದ ಅವರ ತಾಯಿಯ ಧ್ವನಿ ಕೇಳಬರುತ್ತದೆ- ''ರುಕ್ಮಿಣೀ, ಚಹಾ ಆಗೇದ... ಶೀನಪ್ಪಗ ಒಯ್ದು ಕೊಟ್ಟು ಬಾ.'' ಶೀನಪ್ಪನ ಕಿವಿಗಳು ಒಮ್ಮೆಲೇ ನೆಟ್ಟಗಾಗುತ್ತವೆ. ಎದ್ದು ಬಂದು ಬಾಗಿಲು ಮರೆಗೆ ನಿಂತು ಕಿವಿಗೊಟ್ಟು ಕೇಳುತ್ತಾನೆ. ''ಹೋಗವಾ, ನಾ ಒಲ್ಲೆ ಮಾಮೀ''

ರುಕ್ಮಿಣಿಯ ದನಿ. ''ಯಾಕ ಬೋಕಾಣಗಿತ್ತಿ, ನಾಳೆ ಗಂಡಾ ಆಗಾಂವಾ, ಅಂವಗ ಒಂದು ಕಪ್ಪು ಚಹಾ ಒಯ್ದುಕೊಡು ಅಂದರ ಒಲ್ಲೆ ಅಂತೀಯಾ?'' ಮಾಮಿ ಅಂದರೆ ದೇಸಾಯರ ತಾಯಿಯ ಧ್ವನಿ - ''ನೋಡ್ರಿ, ಭಾಗಕ್ಕಾ, ಕೇಳ್ರಿ, ನಿಮ್ಮ ಮಗಳ ಮಾತು''. ಭಾಗಕ್ಕನ ಧ್ವನಿ - ''ಹೋಗ ಅಕ್ಕಣ್ಣಿ, ಕೊಟ್ಟು ಬಾ ಹೋಗು. ಇನ್ನೂ ಏನು ಅಂವಾ ನಿನ್ನ ಗಂಡಾಗಿಲ್ಲಾ. ಈಗ ಯಾಕ ಇಂಥಾ ಪರೀ ನಾಚಿಗೊಳ್ಳುದು...'' ಕೋಣೆಯ ಕಡೆಗೆ ರುಕ್ಮಿಣಿ ಬರುತ್ತಿದ್ದುದನ್ನು ಕಂಡು ಶೀನಪ್ಪ ಓಡಿಹೋಗಿ ಮತ್ತೆ ಟೇಬಲ್ಲಿನ ಮುಂದೆ ಕುಳಿತು ಓದಿನಲ್ಲಿ ಮಗ್ನನಾಗಿರುವಂತೆ ನಟಿಸುವನು. ರುಕ್ಮಿಣಿ ಚಹದ ಕಪ್ಪನ್ನು ಕೈಯಲ್ಲಿ ಹಿಡಿದು ಕೋಣೆಯ ಹೊಸ್ತಿಲಲ್ಲಿ ನಿಂತು ಮೆಲ್ಲಗೆ ಹೇಳುತ್ತಾಳೆ - ''ಚಹಾ ತೊಗೋಳ್ರಿ'' ಶೀನಪ್ಪ ಕೇಳಿಯೂ ಕೇಳಿಸದಂತೆ ನಟಿಸುತ್ತಾನೆ. ಇಷ್ಟರಲ್ಲಿಯೇ ರಾಘು ಬಂದು ಹಿಂದಿನಿಂದ ಅವಳ ಸೆರಗನ್ನು ಹಿಡಿದು ಜಗ್ಗುತ್ತಾನೆ. ದಡಬಡಿಸಿ ಅವಳು ಹಿಂದಿರುಗಿ ನೋಡುವಾಗ ಕೈಯಲ್ಲಿಯ ಚಹಾದ ಕಪ್ಪು ಕೆಳಗೆ ಬೀಳುತ್ತದೆ. ಶೀನಪ್ಪ ತಟ್ಟನೇ ಎದ್ದುಬಂದು ಸಿಟ್ಟಿನಿಂದ ಕೂಗುತ್ತಾನೆ.)

ಶೀನಪ್ಪ : ರಾಘ್ಯಾ, ತಡೀ, ನಿನ್ನ ನೋಡ್ತೇನಿ.

ರುಕ್ಮಿಣಿಬಾಯಿ: (ಅಳುದನಿಯಲ್ಲಿ) ಚಹಾ...

ರುಕ್ಮಿಣಿಬಾಯಿ: ಹೋಗ್ಲಿ ಬಿಡು (ಬಿದ್ದ ಲೋಟವನ್ನು ಅವಳ ಕೈಯಲ್ಲೆತ್ತಿ ಕೊಡುತ್ತ) ನನಗೇನು ಈಗ ಚಹಾ ಬೇಕಾಗಿದ್ದೇ ಇಲ್ಲಾ...

(ರುಕ್ಮಿಣಿ ಕೋಣೆಯಿಂದ ಹೊರಗೆ ಹೋಗಲು ತಿರುಗುವಳು.)

ಶೀನಪ್ಪ : (ಗಡಿಬಿಡಿಯಿಂದ ಬಂದು ಅವಳ ಕೈ ಹಿಡಿದು) ನೀ ಹೇಳಿದ್ದೆಲ್ಲಾ, ಬೇಂದ್ರೆ ಅವರ ಕವಿತಾದ ಪುಸ್ತಕಾ ಬೇಕಂತ, ತಂದೀನಿ, ಬಾ ಕೊಡತೀನಿ

ರುಕ್ಮಿಣಿಬಾಯಿ: (ನಾಚಿಕೊಳ್ಳುತ್ತ) ಈಗ ಬ್ಯಾಡಾ, ಆಮ್ಯಾಲೆ...

ಶೀನಪ್ಪ : ಏ, ಬಾರ, ಒಂದ ಮಿನಿಟು...ಬಾ. ಇಲ್ಲೆ ಕೂಡು. ಆದರಾಗ ಒಂದ ಕವಿತಾ ಭಾಳ ಛಂದ ಅದ. ಓದಿ ತೋರಸ್ತೇನಿ ಬಾ. (ಕೈ ಹಿಡಿದೆಳೆದು ಕುರ್ಚಿಯ ಮೇಲೆ ಕೂಡಿಸುವನು. ತಾನು ಟೇಬಲ್ಲಿನ ಮೇಲೆ ಕುಳಿತು ಬೇಂದ್ರೆಯವರ ಕವಿತೆಯೊಂದನ್ನು ಭಾವಪರವಶನಾಗಿ ಓದತೊಡಗುವನು. ಕ್ರಮೇಣ ಬೆಳಕು ವರ್ತಮಾನದ ಕಡೆಗೆ)

ುಕ್ಮಿಣಿಬಾಯಿ: (ಕನಸಿನಿಂದ ಎಚ್ಚತ್ತವರಂತೆ, ಉಸಿರ್ಗರೆದು) ಏನ ಛಂದ ದಿನಾ ಇದ್ದೂ್ವ ಅವು!

ೇಸಾಯರು : ಇಷ್ಟೆಲ್ಲಾ ಗೊತ್ತಿದ್ದರೂ ನಾ ತಿರಗಿ ಬರೂದರಾಗ ಅದೇ ರಾಘುನ್ನ ಲಗ್ನಾ ಮಾಡಿಕೊಂಡು ಕೂತುಬಿಟ್ಟಿದ್ದೆಲ್ಲಾ (ಆಕ್ಷೇಪದ ಧ್ವನಿ)

ುಕ್ಮಿಣಿಬಾಯಿ: ಹೂಂ, ಏನ ಮಾಡತೀನಿ...ಮಾಡಿಕೊಳ್ಳ ಬೇಕಾತು... ನಾ ಒಲ್ಲೆ ಅಂದರ ಕೇಳವರ್ಯಾರಿದ್ದರು? ನೀವು ಕಾಲೇಜು ಬಿಟ್ಟು ಚಳವಳಿಗೆ ಸೇರಿದಿರಿ...ಊರೂರು ತಿರಗಲಿಕ್ಕೆ ಹತ್ತಿದಿರಿ...ಆಮ್ಯಾಲ ಮನೀ ಒಳಗ ಎಂಥಾ ಮಹಾಭಾರತಾ ಸುರು ಆತೂ ಅನ್ನೂದರ ಕಲ್ಪನಾ ಇತ್ತೇನು ನಿಮಗ? ಮಾಮಾ ದಿನಾ ತಲೀ ತಿರಗಿ ಒದರ್ಯಾಡೂ ಅವರು...ಮಾಮಿ ಕಣ್ಣೀರು ಹಾಕೂ ಅವರು...

ೇಸಾಯರು : ಅದು ಗೊತ್ತಿತ್ತು ಬಿಡು... ಅಪ್ಪ ನನಗ ಹೋಗೂ ಮುಂದ ಹೇಳೇ ಬಿಟ್ಟಿದ್ರು...'ತಿರಗಿ ನಿನ್ನ ಮಾರೀ ನೋಡೂದುಲ್ಲಾ ಜೀವಂತ ಇರೂ ತನಕಾ ಅಂತ. ಇಂಥಾ ದೊಡ್ಡ ರಾವಬಹಾದ್ದೂರ ಮನಿತನದ ಮಗಾ, ಗಾಂಧೀ ಚಳವಳಿ ವಳಗ ಬಿದ್ದ ಅಂದರ ಎಂಥಾ ಅಪಮಾನಾ! ನಾನೂ ಹೇಳಿದೆ ಅವರಿಗೆ - ದೇಶಕ್ಕ ಸ್ವಾತಮತ್ರ್ಯ ಸಿಗೂ ತನಕಾ ತಿರಗಿ ಬರೂದುಲ್ಲಾ ಅಂತ...ಹಾಂಗ ಮಾಡಿದೆ. ಆದರ ಅವರೂ ಏನು ಹಟೀ ನೋಡು. ಸಾಯೂವಾಗ ಸಹಿತ ನನಗ ಒಂದು ಮಾತು ಹೇಳಿಕಳಸಲಿಲ್ಲಾ...

ುಕ್ಮಿಣಿಬಾಯಿ: ಎಲ್ಲಿಂತ ಹೇಳಿಕಳಸ್ತಾರ? ನೀವೆಲ್ಲಿದ್ದೇರಿ ಅಂತ ಯಾರಿಗೆ ಗೊತ್ತಿತ್ತು? ಬಾಯಲೇ ಅನದಿದ್ದರೇನಾತು, ಅವರ ಕಣ್ಣು ಜೀವ ಹೋಗೂ ತನಕಾ ಬಾಗಲ ಕಡೆಗೇ ಇದ್ದವು...ಒಂದ ಸವನ ಹಾದೀ ನೋಡತಿದ್ದರು... ಆದರ ಬಾಯಿಬಿಟ್ಟು ಮಾತ್ರ ಕೇಳಲಿಲ್ಲಾ... ಅವರು ತಮ್ಮ ಹಟಾ ಸಾಧಿಸಿದರು...ನೀವು ನಿಮ್ಮ ಹಟಾ ಸಾಧಿಸಿದಿರಿ...ನಡುವ ನಾವು ಮನ್ಯಾಗಿನ ಹೆಂಗಸರು ಮಾತ್ರ ಅಡಕೊತ್ತಿನ್ಯಾಗ ಸಿಕ್ಕಹಾಂಗ ಆತು...ನೀವೆದ್ದು ಹೋಗಿ ಇನ್ನೂ ಎರಡು ತಿಂಗಳರ ಆಗಿತ್ತೋ ಇಲ್ಲೋ...

(ಕ್ರಮೇಣ ಬೆಳಕು ಭೂತಕಾಲದ ಕಡೆಗೆ...ರಂಗದ ಒಂದು ಬದಿಗೆ ಮಾತ್ರ ಬೆಳಕಿನ ವರ್ತುಳ - ಅದರಲ್ಲಿ ದೊಡ್ಡ ದೇಸಾಯರು, ಅವರ ಅಕ್ಕ ಭಾಗಕ್ಕ ಮತ್ತು ಪತ್ನಿ ಕುಳಿತಿದ್ದಾರೆ)

ದೊಡ್ಡ.ದೇ : ಇಲ್ನೋಡು ಭಾಗಕ್ಕಾ, ಇನ್ನ ಆ ಶೀನ್ಯಾನ ಆಶಾ ಬಿಟ್ಟುಬಿಡು.. ದೇಶಕ್ಕ ಸ್ವಾತಂತ್ರ್ಯ ಬಂದಮ್ಯಾಲೇ ಬರಾಂವಂತ ಅಂವಾ...ಅದೇನು ಉಂಡೀ ಹೊಡಧಂಗ ಅಂತ ಮಾಡ್ಯಾರೇನು ಮಕ್ಕಳು? ಬ್ರಿಟಿಶರು ಇವರನ್ನೆಲ್ಲಾ ಬಡದು ಜೇಲಿನ್ಯಾಗ ಹಾಕತಾರ ನಾಳೆ. ಅಂವಾ ಒಬ್ಬ ಹುಚ್ಚ ಗಾಂಧಿ ಕೇಳಾಂವಾ, ಇವನಂಥಾವರು ಕೇಳಾವರು. ಅದೇನು ಆಗೂದಲ್ಲಾ-ಹೋಗೂದಲ್ಲಾ..(ನಶ್ಯವನ್ನೇರಿಸುತ್ತ ಒಂದು ಕ್ಷಣ ತಡೆದು) ನಾ ಹೇಳಿಧಂಗ ಕೇಳು, ಮಗಳನ ರಾಘುಗ ಕೊಟ್ಟು ಬಿಡು...ಮುಂದಿನ ತಂಗಳ ಲಗ್ನಾ ಮಾಡಿ ಮುಗಸೂಣು.

ಪತ್ನಿ : ಅಷ್ಟು ಅವಸರ ಯಾಕ? ಒಂದ ಮಾತು ಶೀನನ್ನ ಕೇಳಿ...

ದೊ.ದೇ. : ಆ ಹುಚ್ಚ ಸೂಳೇಮಗನ ಹೆಸರು ತಗೀಬ್ಯಾಡಾ ಇನ್ನೊಮ್ಮೆ... ರಾಘುನ ಲಗ್ನಾ ಮಾಡಲಿಕ್ಕೆ ಅವನ್ನ ಯಾಕ ಕೇಳಬೇಕು? ನಾ ಜೀವಂತ ಇದ್ದೀನಿ ಇನ್ನೂ...ತಿಳೀತೇನು?

ಭಾ : ಹಾಂಗಲ್ಲ ಅಣ್ಣಾಅ...ಮೊದಲಿನಿಮದ ರುಕ್ಮಿಣೆನ್ನ ಅವಂಗ ಕೊಡಬೇಕು ಅಂತ...

ದೊ.ದೇ. : ಅಂದರೇನು...ಅವನ ಹಿಂದ ತಿರಗೂ ಆಕೀ ಏನು ಮುಗಳ್ನ ಕಟ್ಟಿಗೊಂಡು...ಲಗ್ನಾ ಮಾಡಕೋಳಪ್ಪಾ ಅಂತ? ಏನಿಲ್ಲಾ ಲಗ್ನದ ತಯಾರಿಗೆ ತೊಡಗರಿ ಇನ್ನ...ಯಾಕ ಏನ ಹೇಳಿದೆ, ಕೇಳಿಸಿತೋ ಇಲ್ಲೋ...?

ಪತ್ನಿ : ಹೂಂ...ಕೇಳಿಸಿತು.

ಭಾ : ರುಕ್ಮಿಣೀನ್ನ ಒಂದ ಮಾತು...

ದೊ.ದೇ. : ಆಕೀದೇನು ಮತ್ತ ಕುರು - ಕುರೂ ಇದರಾಗ ...? ನೀನೂ ಕೇಳು ಭಾಗಿರ್ತಿ..., ನಿನ್ನ ಮಗಳು ನನ್ನ ಮನೀ ಸೊಸೀ ಆಗಬೇಕು ಅಂತಿದ್ದರ ರಾಘುಗ ಕೊಟ್ಟು ಲಗ್ನಾ ಮಾಡು. ಇಲ್ಲಾಂದರ ನೀ ಏನೋ ನಿನ್ನ ಮಗಳೇನೋ...ಎಲ್ಲೆ ಬೇಕಲ್ಲೆ ಲಗ್ನಾ ಮಾಡಿಕೊಡು...ಇನ್ನೊಮ್ಮೆ ನನ್ನ ಮುಂದ ಆ ಮಾತೆತ್ತಬ್ಯಾಡಾ.

ನಾ : ಇಲ್ಲಪಾ ಅಣ್ಣಾ, ಹಾಂಗೆಲ್ಲಾ ಅನಬ್ಯಾಡಾ, ಇಷ್ಟೆಲ್ಲಾ ನನ್ನ ಸಲುವಾಗಿ ಮಾಡೀದಿ...ನಿನ್ನ ಮಾತಿಗೆ ಹೊರಗೇನು ನಾನು? ನೀ ಹೇಳಿಧಂಗ ಆಗಲಿ.

(ಬೆಳಕು ಕ್ರಮೇಣ ರಂಗದ ಇನ್ನೊಂದು ಮೂಲಗ ಹರಿಯುವದು. ರುಕ್ಮಿಣಿ ಕಿಡಕಿಯಿಂದಾಚೆಗೆ ನೋಡುತ್ತ ಮ್ಲಾನವದನಳಾಗಿ ನಿಂತಿದ್ದಾಳೆ. ಹಿಂದಿನಿಂದ ರಾಘು ಬಂದು ಕಿಡಿಗೇಡಿತನದಿಂದ ಅವಳ ಹೆರಳು ಹಿಡಿದು ಜೋರಾಗಿ ಎಳೆಯುತ್ತಾನೆ.)

ರಾಘಪ್ಪ : ನಾ ಹೇಳಿದ್ದಿನಿಲ್ಲೋ ನಿನಗ...ನಾನ ನಿನ್ನ ಮದಿವಿ ಆಗಾಂವಾ ಅಂತ...ಆತಿಲ್ಲೋ ನಾ ಅಂಧಂಗ? ಆ ಹುಚ್ಚ ಶೀನಣ್ಣನ ನಾದಾ ಬಿಡು ಅಂತ ಯಾವಾಗೋ ಹೇಳಿದ್ದೆ ನಿನಗ. ಅದು ಲಗ್ನಾ-ಪಗ್ನಾ ಮಾಡಿಕೊಳ್ಳೂ ಜಾತಿ ಅಲ್ಲ ಬಿಡು...ಮೈಗೆಲ್ಲಾ ಬೂದಿ ಬಡಕೊಂಡು ಸನ್ಯಾಸಿ ಆಗೂ ಜಾತಿ ಅದು.

ರುಕ್ಮಿಣಿಬಾಯಿ: ಬಿಡೋ, ನನ್ನ ಹೆರಳು ಬಿಡು (ಕೊಸರಾಡುತ್ತಾಳೆ.)

ರಾಘಪ್ಪ : ಬಿಡ್ರಿ ಅನ್ನು...ಇನ್ನ ಹಿಂಗ ಏಕವಚನ ನಡ್ಯೂದುಲ್ಲಾ, ನಿನ್ನ ಗಂಡಾ ಆಗಾಂವಾ ನಾನು, ಹುಂ, ಅನ್ನು, ಬಿಡ್ರಿ, ನನ್ನ ಹೆರಳು ಬಿಡ್ರಿ ಅಂತ. (ಮತ್ತೆ ಜೋರಾಗಿ ಜಗ್ಗುತ್ತಾನೆ)

ರುಕ್ಮಿಣಿಬಾಯಿ: ಅವ್ವಾ, ನವ್ವಾಗತದ ...(ಮುಖ ಕಿವಿಚಿ ಒದ್ದಾಡುತ್ತಾಳೆ)

ರಾಘಪ್ಪ : ಅನ್ನು - ಬಿಡ್ರೀ, ನನ್ನ ಹೆರಳು ಬಿಡ್ರೀ..ಅಂತ.

ರುಕ್ಮಿಣಿಬಾಯಿ: (ಕಣ್ಣು ಒರಸುತ್ತ) ಬಿಡ್ರಿ, ನನ್ನ ಹೆರಳು ಬಿಡ್ರಿ... ಅವ್ವಾ...

ರಾಘಪ್ಪ : ಹಾಂ, ಹಾಂಗ ಹಾದಿಗೆ ಬಾ. (ಸಿಳ್ಳು ಹಾಕುತ್ತ ಹೊರಗೆ ಹೋಗುವನು. ರುಕ್ಮಿಣಿ ಸೆರಗಿನಿಂದ ಕಣ್ಣೊರೆಸುತ್ತ ನಿಲ್ಲುತ್ತಾಳೆ.)

(ಬೆಳಕು ವರ್ತಮಾನದೆಡೆಗೆ ಪೂರ್ಣ ರಂಗಭೂಮಿಯ ಮೇಲೆ)

ದೇಸಾಯರು : ನನಗಿದೆಲ್ಲಾ ಗೊತ್ತಿದ್ದಿದ್ದಿಲ್ಲಾ ಬಿಡು...ದೇಶಕ್ಕ ಸ್ವಾತಂತ್ರ್ಯ ಸಿಕ್ಕ ಮ್ಯಾಲೆ ಓಡೋಡ್ಕೋತ ಮನೀಗೆ ಬಂದೆ...ಅಷ್ಟರಾಗ ಎಲ್ಲಾ ಮುಗದ

ಹೋಗಿತ್ತು, ನೀ ಬಾಣಂತೀ ಖೋಲೀ ಸೇರಿದ್ದಿ ಆಗಳೇ...ನನಗ ಭಾಳ ಸಿಟ್ಟು ಬಂದಿತ್ತು ನೋಡು ನಿನ್ನ ಮ್ಯಾಲ.

ರುಕ್ಮಿಣಿಬಾಯಿ: ಹುಂ, ನೆನಪದ ನನಗ... ಒಳಗ ಬಂದು ನನಗ ಭೆಟ್ಟಿ ಸಹಿತ ಆಗಲಿಲ್ಲಾ ನೀವು, ಹಂಗ ಹೊರಗಿಂದ ಹೊರಗ ಹೋಗಿಬಿಟ್ರಿ. (ಹೊರಗಿನಿಂದ ಸ್ತ್ರೀ ಧ್ವನಿ - ''ರುಕ್ಮಿಣೀ, ರುಕ್ಮಿಣೀ... ಶಾಂತವ್ವಾ'' ಯಾರಿದ್ದೀರೋ ಇಲ್ಲೋ ಮನ್ಯಾಗ...''ಶಾಂತಾ, ಶಾಂತಕ್ಕಾ'')

ರುಕ್ಮಿಣಿಬಾಯಿ: ಅಯ್ಯಯ್ಯಾ , ಇದೇನು ಗೋದಕ್ಕನ ಧನಿ ಇದ್ಧಂಗ ಅದ. (ರಂಗದ ಬದಿಗೆ ಹೋಗಿ ಹೊರಗೆ ನೋಡುತ್ತ) ಅಯ್ಯ, ಖರೇನ ಗೋದಕ್ಕನ... ಬಾ, ಬಾರ ಗೋದಕ್ಕ ಒಳಗ ಬಾ, ಇದೇನು ಅಕಸ್ಮಾತ್...ಪತ್ರ ಇಲ್ಲಾ, ಉತ್ತರಿಲ್ಲಾ...

ಗೋದಕ್ಕ : ಏನೋ ನೋಡು, ನಿನ್ನ ಭೆಟ್ಟ್ಯಾಗಬೇಕನಿಸಿತ ... ಮಧ್ಯಾಹ್ನ ಬಸ್ಸು ಹಿಡಿದು ಬಂದುಬಿಟ್ಟೆ... ಮೂಲೀಮನೀ ಅವರೂ ಯಾರೋ ಲಗ್ನೋ-ಮುಂಜಿವ್ಯೋ ಅಂತ ಹೊಂಟಿದ್ದರ... ಅವರ ಜೋಡಿ ನಾನೂ ಹೊಂಟಬಿಟ್ಟೆ... ಏನಪ್ಪಾ ಶೀನಪ್ಪಾ, ನೀ ಹ್ಯಾಂಗಿದ್ದೀ? ಆರಾಮ?

ದೇಸಾಯರು : ಹೂಂ, ಇದ್ದೀನಿ ನೋಡನಾ ಹಿಂಗ, ಈ ವಯಸ್ಸಿನ್ಯಾಗ ಹ್ಯಾಂಗಿರಬೇಕೋ ಹಾಂಗ ಇದ್ದೀನಿ ಆತು.

ಗೋದಕ್ಕ : ಅಷ್ಟ ಅಲ್ಲಾ ಮತ್ತ...ಎಲ್ಲಾರದೂ ಅಷ್ಟ ನೋಡು..ಇರೂ ತನಕಾ ಇಷ್ಟು ಸ್ವತಂತ್ರಾಗಿರಬೇಕು...ಕೈಕಾಲು ಘಟ್ಟಿ ಇರೋದರಾಗ ಆ ಮಹಾರಾಯ ಎತ್ತಿಗೊಂಡು ಹೋದರ ಸಾಕು... ಅಲ್ಲಪಾ, ಏನೋ ಮನೀ ಮಾರಲಿಕ್ಕೆ ಕೊಡಾಂವ ಇದ್ದೀ ಅಂತ ಕೇಳಿದೆ...ಖರೇ ಏನು? ಕೇಳಿದಮ್ಯಾಲೆ ಮನಸಿಗೆ ಸಮಾಧಾನ ಆಗಲಿಲ್ಲಾ... ಭೆಟ್ಟಿ ಆಗೇ ಹೋದರಾತು ಅಂತ ಬಂದೆ.

ಶೀನಪ್ಪ : ಆತು, ಮಾರೂದೂ ಆತು...ಎಲ್ಲಾ ಆತು.

ಗೋದಕ್ಕ : ಇಷ್ಟು ಜೀವಪ್ರಾಣಾ ನಿನಗ ನಿನ್ನ ವಾಡೇ ಅಂದರ...ಮಾರಿದಿ ಹ್ಯಾಂಗಪ್ಪಾ ಅದನ್ನ?

ಶೀನಪ್ಪ : ಏನ ಮಾಡೂದು ನೋಡು, ಗೋದಕ್ಕ...ರೊಕ್ಕದ ಅಡಚಣಿ...ಈ ವಯಸ್ಸಿನ್ಯಾಗೇನು ಇನ್ನ ದುಡದು ಫಳಸಲಿಕ್ಕೆ ಶಕ್ಯ ಅದನು...ಎಲ್ಲಾರೂ ಒಂದ ಸವನ ಬೆನ್ನು ಹತ್ತಿದರು 'ಮಾರಿಬಿಡು' ಅಂತ...

ರುಕ್ಮಿಣಿಬಾಯಿ: ಇಲ್ಲ ಗೋದಕ್ಕ, ಹಾಂಗೇನು ಪೂರಾ ಮನೀ ಮಾರಿಲ್ಲಾ...ನಾವೀಗ ಬಳಸತೀವಿ ಅಷ್ಟ ಭಾಗಾ ನಾವಿಟಗೊಂಡ ಇಟಗೊಂಡೀವಿ... ಅತ್ಲಾಗಿನ ಖೋಲೀ ಎಲ್ಲಾ ಕೀಲೀ ಹಾಕಿ ಇಟ್ಟಿದ್ದೇವಲ್ಲಾ, ಅವನ್ನಷ್ಟು ಕೊಟ್ಟೇವಿ.

ಗೋದಕ್ಕ : ಆದರೂ ನೋಡು ದೇಸಾಯರ ವಾಡೇ ಬ್ಯಾರೇ ಅವರ ಕೈಯಾಗ ಬಿದ್ದಂಗ ಆತಿಲ್ಲೋ? ಎಷ್ಟು ದಿನದ ವಾಡೇ, ಏನ ಕಥೀ...

ರುಕ್ಮಿಣಿಬಾಯಿ: ಅಲ್ಲ ಗೋದಕ್ಕ, ನಾವು ಮುದಕರಾದಿವಿ....ಆನಂದಾ ಮುಂಬಯಿಯಾಗ...ನಾಳೆ ಅರವಿಂದನೂ ಹೊಂಟಾಗ ಅಲ್ಲೇ,... ಶಾಂತಾ, ಶ್ಯಾಮ ಸುದ್ಧಾ ಏನು ಕಾಯಂ ಇರತಾರೇನು ಇಲ್ಲೇ? ಎಲ್ಲಿ ಬದ್ಲೀ ಆಗತದ ಅಲ್ಲೆ ಹೋಗವರ ಅಲ್ಲಾ ನಾಳೆ...

ಗೋದಕ್ಕ : ಹೌದು ಬಿಡು...

ರುಕ್ಮಿಣಿಬಾಯಿ: ಅದಕ್ಕ ಶೇಡಜೀ ಅಂದರ ಮನೀ ಕೊಂಡವರು ಇಲ್ಲೇ ಬಂದು ಇರ್ತೀವಿ. ಅಂದರು...ನಮಗೂ ಒಂದು ಜೋಡಿ ಆಗತದ ನೋಡು...ಮ್ಯಾಲೆ ಆನಂದನ ಭೋಲೋ ಪರಿಚಯದವರು.. ರೊಕ್ಕಾನೂ ಭೋಲೋ ಕೊಟ್ಟರು...ಐದು ಲಕ್ಷ ಕೊಟ್ಟರು ನೋಡಿ ಈ ಹಳೇ ಮನೀಗೆ...

ಶೀನಪ್ಪ : ಏನ ಅನ್ನು ನೀ...ನನಗಂತೂ ಇನ್ನೂ ತಪ್ಪು ಮಾಡಿದೆ ಅಂತ ಅನಸತದ.

ರುಕ್ಮಿಣಿಬಾಯಿ: (ಮಾತು ಮರೆಸುತ್ತ) ಅವರೂ ಇನ್ನೊಂದೆರಡು ದಿನದಾಗ ಬರಾವರಿದ್ದಾರ. ಅದಕ್ಕ ಸುಣ್ಣಾ - ಸಾರಣೀ ಮಾಡಸಲಿಕ್ಕೆ ಹತ್ತೀವಿ.

ಗೋದಕ್ಕ : ಅಯ್ಯ, ಅವರೆಲ್ಲಾ ಬಂದಮ್ಯಾಲೆ ಮಾಡಿಸಿಗೋತಿದ್ದರು, ನೀವ್ಯಾಕ ಈಗ ಅದೆಲ್ಲಾ ಮಾಡಿಸಿಗೋತ ಕೂತ್ರಿ?

ಶೀನಪ್ಪ : ಛೆ, ಅಷ್ಟು ಹೊಲಸಾದ ಮನೀ ಹಾಂಗ ಹ್ಯಾಂಗ ಕೊಡುತಾರ? ಹೇಣ್ತಿ - ಮಕ್ಕಳು - ಮೊಮ್ಮಕ್ಕಳನ್ನ ಕರಕೊಂಡು ಬಂದರ ನಮ್ಮ ದೇಸಾಯರ ವಾಡೆ ಝುಕಾಸ ಕಾಣಸಬೇಕಿಲ್ಲೋ.

ಗೋದಕ್ಕ : (ತನಗೇ ಹೇಳಿಕೊಂಡಂತೆ) ದೇಸಗತಿ ಹೋದರು ದೇಸಾಯರ ಠೀವಿ ಹೋಗೂದುಲ್ಲಾ.

(ಹೊರಗೆ ಮಾತುಗಳು ಕೇಳಿಬರುವವು. ಶಾಂತಾ, ಶ್ಯಾಮ, ಅನೂ, ಚಿನ್ಮಯ ಎಲ್ಲರೂ ಒಳಗೆ ಬರುವರು. ಕೂಲಿಯವನು ಒಂದೆರಡು ಸಾಮಾನುಗಳನ್ನು ಹಿಡಿದುಕೊಂಡು ಬಂದು ಒಳಗಿಳಿಸುವನು. ಶ್ಯಾಮ ಅವನೊಡನೆ ಒಂದೆರಡು ನಿಮಿಷ ಚರ್ಚಿಸಿ ಹಣಕೊಟ್ಟು ಕಳಿಸುವನು)

ರುಕ್ಮಿಣಿಬಾಯಿ: ಅಯ್ಯ, ಬಂದ ಬಿಟ್ರೇನು? ಛೊಲೋ ಆತು, ಲಗೂ ಬಂದ್ರಿ, ದೀಪಾ ಹಚ್ಚೂದರಾಗ...

(ಶಾಂತಾ ಏನೂ ಮಾತಾಡದೆ ಅನೂನನ್ನು ಇನ್ನೊಂದು ಕೋಣೆಗೆ ಎಳೆದೊಯ್ದು ಬಾಗಿಲು ಹಾಕಿಕೊಳ್ಳುವಳು)

ಏನಾತ ಶಾಂತಾ, ಹಿಂಗ್ಯಾಕ?

ದೇಸಾಯರು : ಏನೋ ಶ್ಯಾಮಾ, ಏನಾತು?

ಶಾಮ : ಏನೋ ನನಗೂ ಗೊತ್ತಿಲ್ಲಾ ದಾದಾ, ಹಾದೀ ಒಳಗ ತೋಟದ ಮನೀ ಕಾಯೂ ನಿಂಗಪ್ಪನ ಹೇಣ್ತಿ ಭೆಟ್ಟಿ ಆಗಿದ್ದಳು. ಇಬ್ಬರದೂ ಏನೋ ಗುಸ-ಗುಸ ನಡದಿತ್ತು. ಆ ಮ್ಯಾಲೆ ಯಾರ ಜೋಡೀ ಮಾತ ಇಲ್ಲಾ...; ಈಗ ಒಳಗ ಬಂದಕೂಡಲೇ ಹಿಲಿಗ...ಅನೂನ ಮ್ಯಾಲೆ ಯಾಕ ಸಿಟ್ಟ ಬಂದದ ಯಾರಿಗ್ಗೊತ್ತು? ಆಕೀ ತಲೀ ತಿರಗಿದರ ಹೀಂಗ...ನಡೀರಿ ಕಾಕಾ, ನಾವು ಕತ್ತಲ್ಯಾಗೂದರಾಗ ತೋಟದ ಕಡೇ ಇಷ್ಟು ನೋಡಿಕೊಂಡು ಬಂದಬಿಡೋಣು.

ದೇಸಾಯರು : ಹೌದೋ, ನಡೀ ಹೋಗೂಣು, ನೀ ಇದ್ದಿದ್ದಿಲ್ಲಾ ಅಂತ ನಾನೂ ಮೂರು ದಿನಾ ಹೋಗೇ ಇಲ್ಲಾ (ಕೋಟು, ಟೊಪ್ಪಿಗೆ ಹಾಕಿಕೊಂಡು ಚಪ್ಪಲಿ ಮೆಟ್ಟಿಕೊಳ್ಳುತ್ತ,) ಹೂಂ, ನಡೀ... (ಇಬ್ಬರೂ ಹೋಗುವರು)

(ಒಳಗಿನಿಂದ ಅನೂನ ಅಳುವ ಧ್ವನಿ - ''ಅವ್ವಾ, ಹೊಡೀಬ್ಯಾಡ.,... ಅವ್ವಾ...ನನಗ ಗೊತ್ತಿದ್ದಿದ್ದಿಲ್ಲ ...ಆ.... ಅವ್ವಾ...)

ರುಕ್ಮಿಣಿಬಾಯಿ: ಅಯ್ಯ ಇಕೀಗೇನು ಮೈಯ್ಯಾಗ ದೆವ್ವ ಹೊಕ್ಕದ ನಮ್ಮವ್ವಾ? ಹುಡಿಗಿನ್ನ ಹಿಂಗ ಹೊಡೀಲಿಕ್ಕೆ ಹತ್ಯಾಳ...ಎಂದು ಮಕ್ಕಳ ಮ್ಯಾಲೆ ಕೈ ಎತ್ತಿದಾಕಿ ಅಲ್ಲಾ...ಶಾಂತಾ...ಏ ಶಾಂತೀ, ಬಾಗಲಾ ತಗೀ....

ಗೋದಕ್ಕ : ಯಾಕ ಹಾಂಗ ಕೂಸಿನ್ನ ದನಾ ಬಡಧಂಗ ಬಡೀಲಿಕ್ಕೆ ಹತ್ತೀಯ ಶಾಂತವ್ವಾ? ಬಾಗಲಾ ತಗೀಯವ್ವಾ..(ಬಾಗಿಲು ತೆರೆಯುವದಿಲ್ಲ, ಚಿನ್ಮಯ ಗಾಬರಿಯಿಂದ ಅಳುತ್ತ ಬಾಗಿಲು ತಟ್ಟುತ್ತಿದ್ದಾನೆ - ''ಅವ್ವಾ.ಅವ್ವಾ'')

ರುಕ್ಮಿಣಿಬಾಯಿ: ಇದೇನ ನಡಸೀಯ ಶಾಂತಿ? ಹುಡುಗ ಘಾಬರ್‍ಯಾಗಿ ಅಳ್ಳಿಕ್ಕೆ ಹತ್ತೇದ ನೋಡು...ಬಾಗಲಾ ತಗೀ ನೋಡೂಣು.

ಗೋದಕ್ಕ : ಆಕೀ ತಗ್ಯೂದುಲ್ಲಾ, ಚಿನೂ, ಹೋಗಿ ಪರಸಪ್ಪನ್ನ ಕರಕೊಂಡು ಬಾ ಮರೀ, ಅಂವಾ ಒಂದು ಒದ್ದರ ತಾನು ತಗೀತದ ಬಾಗಲಾ.

(ಕೂಡಲೇ ಶಾಂತಾ ಬಾಗಿಲು ತೆಗೆದು ಹೊರಗೆ ಬರುವಳು. ತಲೆ ಕೂದಲು - ಬಟ್ಟೆ ಎಲ್ಲ ಆಸ್ತವ್ಯಸ್ತವಾಗಿವೆ. ಕಣ್ಣಲ್ಲಿ ನೀರು ಸುರಿಯುತ್ತಿವೆ. ಅಲ್ಲಿಯೇ ಬಾಗಿಲ ಹತ್ತಿರ ತಲೆಗೆ ಕೈ ಹಚ್ಚಿಕೊಂಡು ಕೂಡುವಳು. ಒಳಗೆ ಅನೂ ಅಳುವ ಸದ್ದು ಕೇಳುವದು. ಚಿನ್ಮಯ ತಾಯಿಯ ಮೈಗೆ ಹತ್ತಿಕೊಂಡು ಕಣ್ಣೊರೆಸುತ್ತ ಕುಳಿತಿದ್ದಾನೆ)

ರುಕ್ಮಿಣಿಬಾಯಿ: ಏನಾತ ಶಾಂತಿ ಎಂಥಾ ಛಂದ ನಕ್ಕೋತ ಹೋಗಿದ್ದಿರಿ, ಬರೂದರಾಗ ಏನಾತ ನಮ್ಮವ್ವಾ ಇದು?

ಶಾಂತಾ : ಕಾಕೂ... (ಕಣ್ಣೊರೆಸಿಕೊಳ್ಳುತ್ತ) ..ಚಿನೂ, ನೀ ಹೊರಗ ಹೋಗು, ಬಾಳಾ, ನಿನ್ನ ಗೆಳ್ಯಾರ ಜೋಡಿ ಆಡಲಿಕ್ಕೆ ಹೋಗು.

(ಅವನು ಕಣ್ಣೊರೆಸಿಕೊಳ್ಳುತ್ತ ಇನ್ನಷ್ಟು ತಾಯಿಯ ಮೈಗೆ ಅಂಟಿಕೊಳ್ಳುವನು. ಶಾಂತಾ ಸಿಟ್ಟಿನಿಂದ) ಹೋಗು, ಹೊರಗ ಹೋಗು ಆಡಲಿಕ್ಕೆ...ಇಲ್ಲೆ ದೊಡ್ಡವರೊಳಗೇನದ ನಿನ್ನ ಕೆಲಸಾ...?

(ಚಿನೂ ಹೆದರಿಕೊಂಡಂತೆ ತಾಯಿಯ ಮುಖ ನೋಡುತ್ತ ಹೊರಗೆ ಹೋಗುವನು ಒಂದೆರಡು ನಿಮಿಷ ಅಸಹ್ಯ ಮೌನ.)

ಗೋದಕ್ಕ : ಹೂಂ, ಏನಾತು ಹೇಳ ಶಾಂತಾ, ನೀ ಹಿಂಗ ಸುಮ್ಮಕೂತರ ನಮಗ ಹ್ಯಾಂಗ ತಿಳೀಬೇಕವಾ?

ಶಾಂತಾ : ಕಾಕೂ...ನಿಂಗಪ್ಪನ ಹೇಣ್ತೀ... (ಅವಳಿಗೆ ಗಂಟಲು ಕಟ್ಟಿದಂತಾಗುವದು)

ರುಕ್ಮಿಣಿಬಾಯಿ: ಹೇಳ ಶಾಂತವ್ವಾ, ನೀ ಪೂರಾ ಹೇಳದ ನಮಗ ಹ್ಯಾಂಗ ತಿಳೀಬೇಕು? ನಿಂಗಪ್ಪನ ಹೇಣ್ತಿ ಏನು ಮಾಡಿದಳು? ಅಲ್ಲಾ, ನೀ ಕೂಸಿನ್ನ ಯಾಕ ದೆವ್ವ ಬಡದವರ ಹಾಂಗ ಹೊಡೀಲಿಕ್ಕೆ ಹತ್ತೀದಿ?

ಶಾಂತಾ : (ಮತ್ತೆ ಕೋಪವೇರುತ್ತದೆ) ನಿಂಗಪ್ಪನ ಹೇಣ್ತಿ ಯಾಕ ಏನು ಮಾಡ್ತಾಳ...ಇದಕ್ಕ ಅಕ್ಕಲಿಲ್ಲಾ...ಮತ್ತ ಆ ನಿನ್ನ ಲಫಂಗ ಮೊಮ್ಮಗಾ ... (ಮೆಲ್ಲಗೆ ಹೇಳುವಳು) ಇಕೀ ಮತ್ತ ಅಂವಾ ಎರಡು ದಿನಾ ತೋಟದ ಮನೀಗೆ ಹೋಗಿದ್ದರಂತ (ಮತ್ತೆ ಅಳು ಬರುವದು)

ರುಕ್ಮಿಣಿಬಾಯಿ: ಹೋಗಿದ್ದಾರು ಅಡಲಿಕ್ಕೆ..... ಅದಕ್ಯಾಕಿಷ್ಟು ರಸತನೇ ಮಾಡಬೇಕೂ? ನೀ ಇಲ್ಲದ್ದs ಸಂಶಯಾ ತೊಗೋಬ್ಯಾಡಾ ಶಾಂತ.... ಕಿರಣಾ ಹಾಂಗ ಭೋಲೋ ಹುಡುಗ ಅದ.

ಶಾಂತಾ : (ಆಶ್ಚರ್ಯದಿಂದ) ಹೌದು, ಭಾಳ ಭೋಲೋ ಹುಡುಗಾ....(ಅಳು ದನಿಯಲ್ಲಿ) ಇಲ್ಲವಾ ಕಾಕೂ (ಪಿಸುದನಿಯಲ್ಲಿ ಅವರಿಬ್ಬರಿಗೂ ಏನೋ ಹೇಳುವಳು) ನಿಂಗಪ್ಪನ ಹೇಣ್ತಿ ಸ್ವಥಾ ಕಣ್ಣಲೇ ನೋಡ್ಯಾಳಂತ. ''ಹೆಣ್ಣು ಹುಡುಗಿ ಏನಕೇನಾರs ಆದೀತು, ಕಾಳಜೀ ತೋಗೋಳ್ರಿ'' ಅಂದಳು....ಒಂದ ಗಂಡಹುಡುಗರ ಜೋಡಿ ಮಾತಾಡಿದಾರೆ ಅಲ್ಲ ಇಲ್ಲೀತನಕಾ.... ಆ ಹುಚ್ಚರಂಡೇಗಂಡಾ ಏನ ಮಳ್ಳ ಮಾಡಿದನೋ..... ಇದು ಹುಚ್ಚು ಅವನ ಬೆನ್ನು ಹತ್ತಿ ಹೋಗೇದ.(ಕಣ್ಣೀರು ಒರೆಸಿಕೊಳ್ಳುತ್ತಾಳೆ).

ರುಕ್ಮಿಣಿಬಾಯಿ: ಅಯ್ಯs ದೇವರs , ಇದೇನು ಅನಾಹುತಾ ಆತವಾ? ಅತೀ ಅಂಥಂಗ ಏನರs ಆದರ ಏನ ಗತೀನs, ಗೋದಕ್ಕಾ? ಶಾಂತೀ, ಆ ನಿಂಗಪ್ಪನ ಹೇಣ್ತೀಗೆ ಊರಾಗೆಲ್ಲಾ ಹೇಳಕೋತ ತಿರಗಬ್ಯಾಡಾ ಅಂತ ತಾಕೀದ ಮಾಡಿದ್ಯೋ ಇಲ್ಲೋ?

ಶಾಂತಾ : ಹೇಳೀನೆನಾ.... ಆದರ ಅಂಥವರಿಗೆ ಏನ ಉಪಯೋಗ ಆದ ಏನು...? ಈಗಾಗಲೇ ಊರ ತುಂಬ ಸುದ್ದಿ ಆಗಿರಬೇಕು?......ಅದರಕಿಂತಾ ಹೆಚಿಗಿ ಇಕೀ ಏನರ ಮಾಡಕೊಂಡ ಕೂತರ ಏನು ಗತಿ ಅಂತ ಚಿಂತಿ ಹತ್ತೇದ... ನನಗ ಏನೂ ತಿಳೀದಂಗ ಆಗೇದವಾ ಕಾಕೂ...

ಗೋದಕ್ಕ : ನೋಡು ಶಾಂತಿ ...ಬೆಣ್ಣೀ ಹತ್ತರ ಬೆಂಕೀ ತಂದಟ್ಟರ ಬೆಣ್ಣಿ ಕರಗೂದನವಾ...ಸಹಜ ಅದ... ಈಗೊಂದ ಹಾದಿ ನೋಡು.

ಶಾಂ-ರು : ಏನು ಹಾದಿ ಅಂತೀ, ಗೋದಕ್ಕ?

ಗೋದಕ್ಕ : ಮೊದಲಿನಿಂದ ನಿಮ್ಮ ಮನಸಿನ್ಯಾಗ ಅನೂನ್ನ ಕಿರಣಗ ಕೊಡೂದು ಅಂತ ಅದನೋ ಇಲ್ಲೋ...? ಸಣ್ಣ ಹುಡುಗರಾಗಿದ್ದಾಗಿಂದ ಅವರಿಗೆ ಗಂಡಾ-ಹೇಣ್ತಿ ಅಂತ ಚ್ಯಾಷ್ಟೀ ಮಾಡಕೋತ ಬಂದೀರಿ...ಈಗ ಭರಕ್ಕನ ಮದಿವೀ ಮಾಡಿಬಿಡ್ರಿ ಇಬ್ಬರದೂ...ಅದ ಒಂದು ಹಾದಿ.

ಶಾಂತಾ : ಮದಿವೀ ಮಾಡೂದ ? ಗೋದಕ್ಕಾ, ಏನು ಹೇಳ್ತೀ ನೀನೂ ಒಬ್ಬಾಕಿ...ಅನೂಗ ಇನ್ನೂ ಹದಿನೈದು ತುಂಬಿಲ್ಲಾ.

ರುಕ್ಮಿಣಿಬಾಯಿ: ಶಾಂತೀ, ಅದು ಖರೇ...ಆದರ ನನಗೂ ಅನಸತದ ಗೋದಕ್ಕ ಹೇಳೂದು ಬರೋಬ್ಬರಿ...ಏಮಕೇನಾರು ಆಗಿ ಮಂದೀ ಒಳಗ ಹರ್ಲಿ ಆಗೂದಕಿಂತಾ ಮೊದಲ ಲಗ್ನಾ ಮಾಡಿಬಿಡಬೇಕು...

ಶಾಂತಾ : ಇಲ್ಲವಾ ಕಾಕೂ, ಇವರು ಒಪ್ಪೂದುಲ್ಲಾ... ಹೆಣ್ಣು ಹುಡುಗರ್ನ ಕಲಿಯಾದು ಮುಗ್ಯೂಕಿಂತಾ ಮೊದಲ ಲಗ್ನಾ ಮಾಡಿ ಕೂಡಸೂದು ಬಿಲ್‌ಕುಲ್ ಅವರಿಗೆ ಪಸಂದಿಲ್ಲಾ...ಅಣ್ಣಾ - ವೈನೀ ಅರ ಒಪ್ಪತಾರೇನು?

ರುಕ್ಮಿಣಿಬಾಯಿ: ಶಾಮನ್ನ ನೀನ ಹ್ಯಾಂಗರೇ ಒಪ್ಪಸಬೇಕು...ಖರೇ ಇದ್ದದ್ದು ಹೇಳಿದರ ಒಪ್ಪೇ ಒಪ್ಪತಾನ...ದಾದಾ ಏನು ಬ್ಯಾಡನಲಿಕ್ಕಿಲ್ಲಾ... ಆನಂದನ್ನ ಒಪ್ಪಸೂದು ನನಗ ಕೂಡಿದ್ದು...ಹ್ಯಾಂಗೂ ಇನ್ನೊಂದೆರಡು ದಿನದಾಗ ಬರವರ ಇದ್ದಾರ.. ನಾ ಒಪ್ಪಸತೀನಿ ಅವರನ...

ಗೋದಕ್ಕ : ಮಾಡಿಬಿಡ್ರಿ, ಶುಭಸ್ಯ ಶೀಘ್ರಮ್ ...ಮನ್ಯಾಗ ಮಂಗಳಕಾರ್ಯ ಆಗದ ಯಾವ ದಿನಾ ಆತು.

ಶಾಂತಾ : ಗೋದಕ್ಕ, ಇಷ್ಟ ಲಗೂ ಲಗ್ನಾ ಅಂದರ...ಇದೇನು ಲಗ್ನದ ವಯಸ್ಸೇನ ಆಕೀದು...? ನನ್ನ ಮಗಳು ಕಲತು ಮುಂದಾಗಬೇಕು ಅಂತಿತ್ತವ್ವಾ ನನ್ನ ಮನಸಿನ್ಯಾ.

ಗೋದಕ್ಕ : ನಾವೆಲ್ಲಾ ಲಗ್ನಾದಾಗ ಎಷ್ಟು ವರ್ಷದವರಿದ್ದಿವಿ ಅನಕೊಂಡಿ? ನನಗಂತೂ ಇನ್ನೂ ಹನ್ನೆರಡೂ ಆಗಿದ್ದಿಲ್ಲಾ ನೋಡು... ಇಡೀ ನಿನ್ನ ಕಾಕೂ ಅನೂನಷ್ಟ ಇದ್ದಲೂ ಲಗ್ನ ಆದಾಗ...

ರುಕ್ಮಿಣಿಬಾಯಿ: ಹೌದ ಶಾಂತೀ, ಕಲಿಯೂದೇನು, ಲಗ್ನಾಗಿಂದನೂ ಕಲೀಲಿಕ್ಕೆ ಬರ್ತದ ಬಿಡು...ಅಷ್ಟಾಗಿ ಏನು ಹೊರಗಿನವರ ಮನೀಗೆ ಹೋಗತಾಳ...ಮ್ಯಾಲೆ ಮುಂಬಯಿಯಂಥಾ ಊರಾಗಿದ್ದ ಮ್ಯಾಲೆ ಬೇಕಾದ್ದು ಕಲೀಲಿಕ್ಕೆ ಬಂದೀತು.

(ಚಿನ್ಮಯ ಜಗಿದು ಜಗಿದು ದೀಪಗಳ ಸ್ವಿಚ್ಚುಗಳನ್ನೊತ್ತುತ್ತಿದ್ದಾನೆ. ಎಲ್ಲೆಡೆಗೆ ಝುಗ್ಗನೇ ಬೆಳಕು ಬೀಳುವುದು. ಎಲ್ಲರೂ ಕೂಡಲೇ ದೀಪಕ್ಕೆ ಕೈಮುಗಿಯುವರು)

ದೃಶ್ಯ - ೨

(ಎರಡು ದಿನಗಳ ನಂತರ ಬೆಳಗಿನ ಹೊತ್ತು ಸ್ಟವ್ವ ಮುಂದೆ ಕುಳಿತು ಶಾಂತಾ ಬೆಳಗಿನ ತಿಂಡಿಯ ತಯಾರಿಯಲ್ಲಿದ್ದಾಳೆ. ಗೋದಕ್ಕ ಒಂದೆಡೆಗೆ ಗೋಡೆಗಾತು ಜಪಮಾಲೆಯನ್ನು ಹಿಡಿದು ಕುಳಿತಿದ್ದಾಳೆ. ರುಕ್ಮಿಣಿಬಾಯಿ ದೇವರ ನಾಮವನ್ನು ಹಾಡುತ್ತ ಪೂಜೆಯ ತಯಾರಿಯಲ್ಲಿದ್ದಾಳೆ.)

ರುಕ್ಮಿಣಿಬಾಯಿ: ಶಾಂತೀ, ಅನೂ ಎದ್ದು ಬಂದೇ ಇಲ್ಲಾ ಇನ್ನೂ...ಹೋಗು, ನೀನ ರಮಿಸಿ ಎಬ್ಬಿಸಿಗೊಂಡು ಬಾ.. ನಿನ್ನೆ ರಾತ್ರೀನೂ ಛೊಲೋತ್ನ್ಯಾಗಿ ಊಟಾ ಮಾಡಿಲ್ಲಾ ಹುಡಗಿ.

ಶಾಂತಾ : (ಕೈಯಲ್ಲಿಯ ಪಾತ್ರೆಯನ್ನು ನೆಲಕ್ಕಪ್ಪಳಿಸಿ ಹೊಟ್ಟೆಯಲ್ಲಿಯ ಸಿಟ್ಟನ್ನು ಹೊರಗೆಡವುತ್ತಾಳೆ) ಬರತಾಳ, ಹೊಟ್ಟೆ ತೆರದರ ತಾನ ಎದ್ದು...

ರುಕ್ಮಿಣಿಬಾಯಿ: ಯಾಕ ಹಂಗ ತಲೀತಿರಕರ ಹಾಂಗ ಮಾಡ್ತೀಯ? ತಲೀ ಶಾಂತ ಇಟಗೋ ಒಂದಿಷ್ಟು.

ಶಾಂತಾ : ಏನ ಶಾಂತ ಇಟಗೋಳ್ಳಿ? ನನ್ನ ಹೊಟ್ಯಾಗ ಉರೀ ಬಿದ್ದ ಹಾಂಗಾಗೇದ, ನಿನಗೇನು ಗೊತ್ತು ಅದು?

ರುಕ್ಮಿಣಿಬಾಯಿ: ಹೌದವಾ, ನನಗೇನು ಗೊತ್ತ ಇಲ್ಲಾ ನೋಡು, ...ನಿಮ್ಮ ಅಪ್ಪಾ ಹೋದಮ್ಯಾಲ ನಿನ್ನ ಇಷ್ಟ ಇದ್ದಾಕಿನ್ನ ಇಷ್ಟು ಧೊಡ್ಡಾಕಿನ್ನ ಮಾಡಿದೆ. ನೀ ಶ್ಯಾಮನ ಬೆನ್ನು ಹತ್ತಿ ಓಡ್ಯಾಡಲಿಕ್ಕೆ ಹತ್ತಿದಾಗೇನ ಕಡಿಮೀ ತ್ರಾಸಾಗಿತ್ತೇನು ನನಗ? ಇದೆಲ್ಲಾದರಾಗಿಂದ ಹಾಯ್ದು ಬಂದೀನೇನವಾ ನಾನು...ಮನ್ಯಾಗ ಯಾರ ಮುಂದರ ಹೇಳೇನಮದರ ಇನ್ನೊಂದು ಹೆಣ್ಣ ಹುಳಾ ಸಹಿತ ಇದ್ದಿದಿಲ್ಲಾ.

ಗೋದಕ್ಕ : ಹುಶ್..... ಸುಮ್ಮನಾಗರಿ ಇನ್ನ...ಶೀನಪ್ಪ ಬಂದಾ.

ದೇಸಾಯರು : (ಒಳಗೆ ಬರುತ್ತ) ಆನಂದಾ ಹೇಳಿದ್ದರ ಪ್ರಕಾರ ಶೇಡಜೀ ಅವರ ಮನೀ ಮಂದೆಲ್ಲಾ ಇವತ್ತ ಬರಬೇಕಲ್ಲೇನು? ಎಷ್ಟೊತ್ತಿಗೆ ಬರತಾರ, ಏನರ ತಿಳಿಸ್ಯಾರೇನು?

ರುಕ್ಮಿಣಿಬಾಯಿ: ಏನ ತಿಳಿಸಿಲ್ಲಾ...ಬಂದಾಗ ಬರವಲ್ಲರ‍್ಯಾಕ... ಆನಂದಾ...ವಸುಧಾ... ಮಾತ್ರ ನಾಳೆ ಬರ‍್ತೇವಿ ಅಂತ ತಿಳಿಸ್ಯಾರ.

ದೇಸಾಯರು : ಫರಾಳಾ ಒಂದಿಷ್ಟು ಜಾಸ್ತೀನ ಮಾಡಿಬಿಡ್ರಿ...ಅವರು ಬಂದ ಮ್ಯಾಲೆ ಅವರಿಗೂ ಒಂದಿಷ್ಟು ಚಹಾ-ಫರಾಳಾ ಅಲ್ಲೇ ಕಳಿಸಿ ಕೊಟ್ಟ ಬಿಡ್ರಿ.

ಗೋದಕ್ಕ : ಕಳಸ್ತಾರೇಳೋ ಶೀನಪ್ಪಾ...ಅದನ್ನೇನು ಅವರಿಗೆ ಹೇಳ ಬೇಕಾಗತದೇನು? ದೇಸಾಯರ ಮನೀ ಪದ್ಧತಿ ಗೊತ್ತಿಲ್ಲೇನು ಅವರಿಗೆ?

ದೇಸಾಯರು : ಏನೋ ನೋಡವಾ ಗೋದಕ್ಕ, ಅವ್ವಾ-ಅಪ್ಪಾ ಹಾಕಿಕೊಟ್ಟದ್ದ ಪದ್ಧತಿ. ಇಲ್ಲೀ ತನಕಾ ಅಂತೂ ನಾವು ಪಡಿಸಿಕೊಂಡು ಬಂದೀವಿ. ಮುಂದ ನಡಸೂದು ಬಿಡೂದು ಮಕ್ಕಳಿಗೆ ಕೂಡಿದ್ದು. (ಹೊರಗೆ ಟ್ರಕ್ಕು ಬಂದು ನಿಂತ ಸದ್ದು)

ಶೇಡಜೀ ಮನೀ ಸಾಮಾನು ಬಂದವೋ ಏನೋ, ಟ್ರಕ್ಕಿನ ಸಪ್ಪಳ ಆಗಲಿಲ್ಲ? ಅರವಿಂದಾ...ಏ ಅರವಿಂದಾ...

ಶಾಂತಾ : ಅರವಿಂದ ಹೊರಗ ಇದ್ದಾನ, ತಟ್ಟಿ-ಗಿಟ್ಟೀ ತೊಳಸಲಿಕ್ಕೆ ಹತ್ಯಾನ ಅಂವಾ ಎಲ್ಲಾ ನೋಡ್ತಾನೇಳ್ರಿ, ದಾದಾ (ಹೊರಗಿನಿಂದ ಸಾಮಾನುಗಳನ್ನು ಒಗೆದ ಸದ್ದು) ಅಯ್ಯಯ್ಯ, ಇಂಥಾ ಪರೀ ಏನು ಸಾಮಾನು ಒಗೀಲಿಕ್ಕೆ ಹತ್ಯಾರ? ಯಾತಕ್ಕ ಬರಬೇಕು ಅವು ಸಾಮಾನು?

ರುಕ್ಮಿಣಿಬಾಯಿ: ಅಲ್ಲಾ, ಅವರೂ ...ತಾವು ಮನೀ ಮಂದಿ ಒಬ್ಬರು ಯಾರರ ಮೊದಲ ಬರಬೇಕಿಲ್ಲೋ ಸಾಮಾನು ಇಳಿಸಿಗೊಳ್ಳಿಕ್ಕೆ?

(ಅರವಿಂದ ಹೊರಗಿನಿಂದ ಓಡಿಬರುತ್ತಾನೆ...ಮುಖದಲ್ಲಿ ಗಾಬರಿ ತುಂಬಿದೆ)

ಅರವಿಂದ : ದಾದಾ...ದಾದಾ...

ಎಲ್ಲರೂ : ಏನಾತೋ, ಹಿಂಗ್ಯಾಕ ಗಾಬರ‍್ಯಾಗೀದಿ?

ಅರವಿಂದ : ಕೂಲೀ ಮಂದಿ ಬಂದಾರ ಟ್ರಕ್ಕು ತುಂಬಿ...ಗುದ್ದಲೀ, ಸಲಿಕೆ-ಸುತಿಗಿ ತೊಗೊಂಡು...ಗೋಡೀ ಒಡೀತಾರಂತ.

ಎಲ್ಲರೂ : ಹಾಂ...! .,..(ದೇಸಾಯರು ಹೊರಗೋಡುತ್ತಾರೆ. ಅಷ್ಟರಲ್ಲಿಯೇ ಗೋಡೆ ಒಡೆಯುವ ಸದ್ದು ಪ್ರಾರಂಭವಾಗುತ್ತದೆ. ಎಲ್ಲರೂ ಕಕ್ಕಾಬಿಕ್ಕಿಯಾಗಿ ಒಬ್ಬರ ಮುಖವನ್ನೊಬ್ಬರು ನೋಡುತ್ತಿದ್ದಾರೆ. ಅನೂ ಸಹ ಕೋಣೆಯಿಂದ ಹೊರಗೋಡಿ ಬಂದಿದ್ದಾಳೆ. ಹೊರಗೆ ಒದರಾಟದ ಕೋಲಾಹಲ ಕೇಳುತ್ತದೆ. ಐದು ನಿಮಿಷಗಳಲ್ಲಿ ದೇಸಾಯರು ತಿರುಗಿ ಬರುತ್ತಾರೆ. ಮುಖ ಸಂತಪ್ತವಾಗಿದೆ)

ದೇಸಾಯರು : ಅರವಿಂದಾ, ಪೊಲೀಸ ಸ್ಟೇಶನ್ನಿಗೆ ಫೋನ್ ಹಚ್ಚೋ...ಯಾವನೋ ಸೂಳೇಮಗಾ...ಮುಂಬಯಿ ಕಾಂಟ್ರ್ಯಾಕ್ಟರಂತ...ಶೇಡಜೀ ಸಹೀ ಮಾಡ್ಯಾನಂತ...ಕಾಗದಾ ನನ್ನ ಕಣ್ಣುಮುಂದ ಅಗಳ್ಯಾಡಸತಾನ ಮಗನ ತಂದು...ಮೋಸಾ ಮಾಡ್ಯಾರ ಹುಚ್ಚಸೂ...ಮಕ್ಕಳ ತಂದು...ಪೋಲೀಸ ಕಂಪ್ಲೇಂಟ ಕೊಡತೀನಿ. ಫೋನು ಹತ್ತಿತೇನು? ಇನ್ ಸ್ಪೆಕ್ಟರ್ ಗುರುಪಾದಪ್ಪಾ ಇದ್ದಾರೇನು ಕೇಳು. ಇದ್ದಾರ, ಹಾಂ...ತಾ. ಇಲ್ಲೆ...ಹಲೋ, ಹಲೋ...

(ಎಲ್ಲರೂ ಅವಾಕ್ಕಾಗಿ ಗೊಂಬೆಗಳಂತೆ ನಿಂತಿದ್ದಾರೆ)

ದೇಸಾಯರು : ಹಲೋ... ಯಾರು ಗುರಪಾದಪ್ಪಾ ಅವರೇನು..ನಮಸ್ಕಾರಾ, ನಮಸ್ಕಾರಾ...ಗುರಪಾದಪ್ಪನವರ, ಅರ್ಜೆಂಟ ನಾಲ್ಕು ಮಂದಿ ಪೊಲೀಸರನ ಕಳಸರಿ...ಯಾವನೋ ಮುಂಬಯಿ ಕಾಂಟ್ರ್ಯಾಕ್ಟರಂತ... ಹುಚ್ಚ ಸೂ...ಮಗಾ...ನಮ್ಮ ಮನೀ ಗೋಡೀ ಕೆಡವಲಿಕ್ಕೆ ಹತ್ಯಾನ...ಹಾಂ, ಏನಂದ್ರಿ ಹೌದು...ಹೌದು...ಮಾರಾಟ ಆಗೇದ...ಕಾಗದಾ ಪತ್ರಾನೂ ಆಗ್ಯಾವ...ಹೌರೆಪಾ...ಶೇಡಜೀಗೆ ಮಾರಿದ್ದಿವಿ, ಅಂವಾ ತನಗ ಇರಲಿಕ್ಕೆ ಬೇಕೂಮತ ತೊಗೊಂಡಿದ್ದಾ... ಹೂಂ ಅದ, ಶೇಡಜೀ ಸಹಿ ಇದ್ದದ್ದು ಏನೋ ಒಂದು ಕಾಗದಾ ಅದ ಅವನ ಹತ್ತರ...ಆದರೇನಾತ್ರೀ, ಹಾಂಗ ಹ್ಯಾಂಗ ಗೋಡೀ ಕೆಡವತಾನ್ರೀ ಅಂವಾ...? ಏನಂದ್ರೀ...? ಛೇ, ಹಾಂಗ ಹ್ಯಾಮುಗಂತೀರಿ? ದೇಸಾಯರ ವಾಡೇ ಇದು...ನೂರಾರು ವರ್ಷದ್ದು, ಹಾಂಗ ಹ್ಯಾಂಗ ಕೆಡವಲಿಕ್ಕೆ ಬಿಡತೀವಿ? ಕಳಸರಿ ಲಗೂನ, ಇಲ್ಲಾಂದರ ಸುಮ್ಮನ ನೀವ ಬಂದವಿಡ್ರೆಪಾ, ಸ್ವಲ್ಪ ವ್ಯಾಳ್ಯಾ ತಗದು ಹ್ಯಾಂಗರ ಮಾಡಿ ಬಂದಬಿಡ್ರಿ, ಏನಂದ್ರಿ, ಮಾರಲಿಕ್ಕೆ ಕೊಟ್ಟಮ್ಯಾಲೆ ನಾವೇನು ಮಾತಾಡಲಿಕ್ಕೆ

ಬರೂದುಲ್ಲ...? ನಾವು ಕೊಡೂವಾಗ ಹೇಳೇ ಕೊಟ್ಟೀವರೆಪಾ ಆ ಶೇಡಜೀಗೆ..

ಅರವಿಂದ : ಆದರ, ದಾದಾ, ಕಾಗದಾ-ಪತ್ರದಾಗ ಆ ಕಂಡೀಶನ್ನು...

ದೇಸಾಯರು : ನೀ ಸುಮ್ಮನಿರೋ ಸ್ವಲ್ಪ, ನಡವ ಮಾತಾಡಬ್ಯಾಡಾ, ಆಂ... ಏನಂದ್ರಿ? ... ಏನೂ ಮಾಡಲಿಕ್ಕಾಗೂದುಲ್ಲ...ಇಲ್ಲಾ, ಇಲ್ಲಾ, ಲೇಖೀ ಏನೂ ಇಲ್ಲಾ...ಎಲ್ಲಾ ಮಾತಿನ್ಯಾಗ ಆಗಿತ್ತು. (ಹೊರಗಿನಿಂದ ದೊಪ್ಪನೇ ಗೋಡೆ ಬಿದ್ದ ಸದ್ದು, ದೇಸಾಯರು ಎದೆಯನ್ನು ಒತ್ತಿ ಹಿಡಿದುಕೊಂಡು ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕೂಡುವರು. ಕೈಯಲ್ಲಿಯ ಫೋನು ಕೆಳಗೆ ಬೀಳುವುದು.)

ಶಾಂತಾ : ದಾದಾ, ನೀವು ಹೀಂಗ ತ್ರಾಸ ಮಾಡಕೋಬ್ಯಾಡ್ರಿ, ತೊಗೋಳ್ರಿ, ನೀರು ಕುಡದು ಅಡ್ಡಾಗನಡ್ರಿ.

ದೇಸಾಯರು : ತ್ರಾಸೇನು ಮಾಡಕೋಬ್ಯಾಡಾ ಅಂತೀ? ಅಲ್ಲೇ ನಮ್ಮ ಹಿರೇರ ವಾಡೇ ಕೆಡವಲಿಕ್ಕೆ ಹತ್ಯಾರ, ನಾ ಹ್ಯಾಂಗ ಅಡ್ಡಾಗಲೇ ಶಾಂತಿ?

ರುಕ್ಮಿಣಿಬಾಯಿ: ದಾದಾ, ಶಾಂತ ಆಗ್ರಿ, ಅರವಿಂದಾ, ನೋಡೋ ಫೋನ ಮಾಡಿ, ಆನಂದ ಸಿಗತಾನೇನೋ...ಅಂವಾ ಅರ ಅವರ ಜೋಡಿ ಮಾತಾಡಲಿ.

ಅರವಿಂದ : (ಫೋನು ಎತ್ತಿ ಪ್ರಯತ್ನ ಮಾಡುವನು) ಯಾರೂ ಇಲ್ಲಾ ಅನಸತದ ಮನ್ಯಾಗ...ಎತ್ತವಲ್ಲರು.

ರುಕ್ಮಿಣಿಬಾಯಿ: ಆಫೀಸಿಗೆ ಮಾಡಿ ನೋಡೋ...ಆ ಡೈರಿ ವಳಗ ಅದ ನೋಡು ನಂಬರು...ಲಗೂ ಮಾಡು...ರಾಕ್ಷರು ಪೂರಾ ಮನೀನ ಕೆಡವಿ ಬಿಡ್ತಾರೋ ಏನೋ....

ಅರವಿಂದ : (ಮತ್ತೊಂದು ನಂಬರನ್ನು ತಿರುಗಿಸುವನು) ಹಲೋ, ಹಲೋ...ಅಣ್ಣಾ ನಾನು...ಅರವಿಂದಾ...ಅಣ್ಣಾ..ಅಣ್ಣಾ... ಹಲೋ, ಹಲೋ (ನಿರಾಶನಾಗಿ ಫೋನನ್ನು ಕೆಳಗಿಡುವನು) ಅಣ್ಣಾ ಇಲ್ಲಂತ.

ದೇಸಾಯರು : ಮತ್ತ ಅಣ್ಣಾ, ಅಣ್ಣಾ ? ಅಂತ ಮಾತಾಡಿದೀ?

ಅರವಿಂದ : ಅತ್ಲಾಗಿಂದ ಅಣ್ಣನ ಧನೀ ಹಂಗ ಕೇಳಿತು.

ರುಕ್ಮಿಣಿಬಾಯಿ: ಅರವಿಂದಾ, ನೀನ ಹೋಗಿ ಅವರಿಗೊಂದಿಷ್ಟು ಹೇಳೋ ನಾಳಿನ ತನಕಾ ತಡೀರಿ ಅಂತ...ನಾಳೆ ಹ್ಯಾಂಗೂ ಆನಂದ ಬಂದ ಬರ್ತಾನ...ಎಲ್ಲಾ ಸರಿ ಮಾಡ್ತಾನ ಬಂದನಂತರ....

(ಅರವಿಂದ ಮಾತಾಡದೆ ಹೊರಗೆ ಹೋಗುವನು)

ದೇಸಾಯರು : ಎಲ್ಲಾರೂ ಒಂದಾಗ್ಯಾರ ಸೂ...ಮಕ್ಕಳು...!

ಶಾಂತಾ : ದಾದಾ, ನಡೀರಿ., ನೀವು ಒಳಗ...ನಾವೆಲ್ಲಾ ಅವರಿಗೆ ಹೇಳಿ ಬಂದ ಮಾಡಸತೀವಿ....

(ಶಾಂತಾ ತಂದೆಯನ್ನು ಕೈ ಹಿಡಿದು ನಡೆಸಿಕೊಂಡು ಒಳಗೆ ಕರೆದೊಯ್ಯುವಳು. ಅರವಿಂದ ಹೊರಗೆ ಹೋಗುವನು.)

ಗೋದಕ್ಕ : (ತನ್ನಷ್ಟಕ್ಕೆ) ನನಗನಿಸಿತ್ತು...ಏನೋ ಅನಾಹುತ ಆಗತದಂತ... ಶೀನಪ್ಪಗ ಏನೋ ಟೊಪಿಗಿ ಬಿದ್ದದ ಅಂತ.

ರುಕ್ಮಿಣಿಬಾಯಿ: ಏನು ಟೊಪ್ಪಿಗಿಲ್ಲಾ...ಗಿಪ್ಪಿಗಿಲ್ಲಾ...ಇವರೊಂದಿಷ್ಟು ನಾಳೆ ಆನಂದ ಬರೂತನಕಾ ನಿಂತರ ಎಲ್ಲಾ ಠೀಕ ಆಗ್ತದ.

ಶಾಂತಾ : (ತನ್ನಷ್ಟಕ್ಕೆ) ಇಕೀಗೊಂದು ಹುಚ್ಚು... ಆನಂದಗ ಗೊತ್ತಿಲ್ಲದ ಇದೆಲ್ಲಾ ಆಗೇದ ಅಂತ ತಿಳಕೊಂಡಾಳ.

ಅನು : ಹೌದ ಅಜ್ಜೀ...ಕಿರಣ ಹೇಳತಿದ್ದಾ... (ಒಮ್ಮೆಲೇ ಹೆದರಿ ಅವರಿಬ್ಬರ ಮುಖ ನೋಡಿ ಸುಮ್ಮನಾಗುವಳು)

ಗೋದಕ್ಕ : ಏನ ಹೇಳತಿದ್ದ...? ಹೇಳು ಮತ್ತ...ಸುಮ್ನ್ಯಾಕಾದೀ?

ಅನು : ಮತ್ತ... ಶೇಡಜೀ ಇಲ್ಲೆ ಶಾಪಿಂಗ್ ಕಾಂಪ್ಲೆಕ್ಸ್ ಮಾಡಾವರಿದ್ದಾರ ಅಂತ ...ಆನಂದಮಾಮಾನ ಜೋಡಿ ಎಲ್ಲಾ ಮಾತಾಗೇದ ಅಂತ...ಅಂವಗ ಮೊದಲ ಎರಡು ಲಕ್ಷ ರೂಪಾಯಿ ಕೊಟ್ಟಾರಂತ.

ರುಕ್ಮಿಣಿಬಾಯಿ: ಸುಮ್ಮನಿರ ಸಾಕು...ಇಲ್ಲದ್ದ ಏನರ ಹೇಳಬ್ಯಾಡಾ...

ಅನೂ : ಇಲ್ಲ ಅಜ್ಜೀ...ಖರೇನ ...ಆನಂದಮಾಮಾ ಹೊಸಾ ಕಾರು ತೊಗೊಂಡಾನಂತ ಆ ರೊಕ್ಕದಲೇ...ಕಿರಣ ತಮ್ಮ ಹೊಸಾ ಕಾರಿನ ಸುದ್ದಿ ಹೇಳೇ ಹೇಳಿದಾ... ಭಾಳ ಛಂದ ಅದು ಅಂತ ಕೆಂಪು ಬಣ್ಣದ್ದು...

ಗೋದಕ್ಕ : ಕೇಳಿದ್ಯಾ ರುಕ್ಮಿಣಿ? ಆನಂದ ಬಂದರೂ ಏನೂ ಆಗೂದುಲ್ಲಾ ...ಎಲ್ಲಾ ಅಂವಗಗೊತ್ತಿದ್ದ ಆಗೇದ... ಪಾಪಾ, ಶೀನಪ್ಪಾ ವ್ಯರ್ಥ ಜೀವಾ ಬಿಡ್ತಾನ...ಇದನ್ನೆಲ್ಲಾ ಹ್ಯಾಂಗ ಕಣ್ಣಿಂದ ನೋಡ್ಯಾನು, ಹೇಳು?

(ರುಕ್ಮಿಣಿ ಅಲ್ಲಿಯೇ ಹೊಸ್ತಿಲದ ಹತ್ತಿರ ತಲೆ ಹಿಡಿದು ಕೊಂಡು ಕೂಡುವಳು. ಅರವಿಂದ ಹೊರಗಿನಿಂದ ಬಂದು)

ಅರವಿಂದ : ಕಾಕೂ ಅವರೇನು ನಾಳಿನ ತನಕಾ ತಡೀಲಿಕ್ಕೆ ತಯಾರಿಲ್ಲಾ. ಇವತ್ತ ಸಂಜೀ ವಳಗ ಎಷ್ಟಾಗತದ ಅಷ್ಟು ಕೆಲಸಾ ಮುಗಸ ಬೇಕಂತ ಅವರು...ಅವರು ಬರೇ ಖಂಬಾ, ಖಿಡಕಿ, ಬಾಗಲಾ ಅಷ್ಟು ತಕ್ಕೊಂಡು ಹೋಗತಾರಂತ...ಹಳೇ ಕಟ್ಟಿಗೀ ಸಾಮಾನು . ಪರದೇಶದಾಗ ಭಾರೀ ಕಿಮ್ಮತ್ತು ಬರತದಂತ... ಆವನ್ನೆಲ್ಲಾ ಶೇಡಜೀ ಇವರಿಗೆ ಹದಿನೈದು ಲಕ್ಷಕ್ಕೆ ಮಾರ್‍ಯಾರಂತ...

ಗೋ-ರು : ಹದಿನೈದು ಲಕ್ಷ...!

ರುಕ್ಮಿಣಿಬಾಯಿ: ನಮಗ ಬರೇ ಐದು ಲಕ್ಷ ಕೊಟ್ಟಾರಲ್ಲೋ? ಮೋಸಾತು ಬಿಡು.

ಅರವಿಂದ : ಭಾರೀ ವ್ಯಾಪಾರಿಗೋಳು ಬಿಡು ಅವರೆಲ್ಲಾ. ಇವರು ಹೇಳ್ತಾರ ಇದರ ಹತ್ತುಪಟ್ಟು ಘಳಸತೀವಿ ಅಂತ ಪರದೇಶದಾಗ...ಎಷ್ಟು ಭೊಲೋ ಕಟಗಿ ಅದ, ಎಷ್ಟ ಛಂದ ಕೆಲಸಾ ಮಾಡ್ಯಾರ ಅಂತ ಭಾರೀ ಸಂತೋಷಾಗೇದ ಅವರಿಗೆ.

ಗೋದಕ್ಕ : ಆಗದೇನು ಮಾಡೀತು, ಇಷ್ಟು ಫಾಯದೇ ಮಾಡಿಕೊಂಡಾರ? ಅಷ್ಟು ಫಾಯದೇ ಇಲ್ಲದ ಹೊರತು ಅವರ್‍ಯಾಕ ಬರತಿದ್ದರು ಹೇಳು ಮುಂಬಯಿಯಿಂದ ಇಲ್ಲೀ ತನಕಾ?

(ಅವರಿಬ್ಬರೂ ತಮ್ಮ-ತಮ್ಮ ಮಾತುಗಳಲ್ಲಿ ಮಗ್ನರಾಗಿದ್ದಾರೆ. ರುಕ್ಮಿಣಿಯ ಕಡೆಗೆ ಇಬ್ಬರದೂ ಲಕ್ಷ್ಯವಿಲ್ಲ. ತಲೆಗೆ ಕೈ ಹಚ್ಚಿ ಕುಳಿತ ರುಕ್ಮಿಣಿ ಹತ್ತಿರದಲ್ಲಿಯೇ

ಸುತ್ತಿಗೆಯ ಹೊಡೆತದ ಸದ್ದು ಕೇಳಿ ಬೆಚ್ಚಿಬಿದ್ದು ಎದ್ದು ನಿಂತು ಕಿಡಕಿಯ ಹೊರಗೆ ನೋಡುವಳು. ನೋಡಿದೊಡನೆ ಒಮ್ಮೆಲೇ ಹುಚ್ಚುಹಿಡಿದವರಂತೆ)

ರುಕ್ಮಿಣಿಬಾಯಿ: ಅಯ್ಯಯ್ಯೋ, ಅರವಿಂದಾ, ಅವರು ದೊಡ್ಡದೇವರಕೋಣೆಗೆ ಕೈ ಹಚ್ಚಿದರಲ್ಲೋ...ಅರವಿಂದಾ, ಹೋಗೋ ಬಾಳಾ, ಅದು ಒಂದು ಖೋಲೀ ಕೆಡವಬ್ಯಾಡ್ರಿ ಅಂತ ಹೇಳಪ್ಪಾ...ಹೋಗೋ, ಅರವಿಂದಾ, ಹೇಳಹೋಗೋ...(ಅರವಿಂದ ಸ್ತಂಭಿತನಾಗಿ ನಿಂತಿದ್ದಾನೆ. ಅವನು ಸ್ಥಳಬಿಟ್ಟು ಅಲ್ಲಾಡದಿದ್ದುದನ್ನು ಕಂಡು ತಾನೇ ಹೊರಗೋಡುತ್ತಾಳೆ) ಏ, ಸರೀರಿ, ಆ ಖೋಲೀ ಒಡೀಬ್ಯಾಡ್ರಿ...ಪುಣ್ಯ ಬರತದ, ನಿಮಗ, ಆ ಖೋಲೀ ಒಡೀಬ್ಯಾಡ್ರಿ... (ಶಾಂತಾ ಬದಿಯ ಕೋಣೆಯಿಂದ ಓಡಿ ಬರುತ್ತಾಳೆ. ಅರವಿಂದ- ಗೋದಕ್ಕನೂ ಕಕ್ಕಾಬಿಕ್ಕಿಯಾಗಿ ಏನೂ ಮಾಡಲು ತಿಳಿಯದೇ ನೋಡುತ್ತಿದ್ದಾರೆ) ಏಯ್ ಬಿಡ್ರಿ ಅದನ್ನ...ಒಡೀಬ್ಯಾಡ್ರಿ... ಆ ಗೋಡೀ ಒಡೀಬ್ಯಾಡ್ರೋ... (ಯಾರೂ ಆಕೆಯ ಕಡೆಗೆ ಲಕ್ಷ್ಯವನ್ನೇ ಕೊಡುವದಿಲ್ಲ, ಸುತ್ತಿಗೆಯ ಹೊಡೆತಗಳು ದಣ್.... ದಣ್... ಎಂದು ಬೀಳುತ್ತಲೇ ಇವೆ. ರುಕ್ಮಿಣಿ ಮತ್ತೆ ಹುಚ್ಚಿಯಂತೆ ಒಳಗೆ ಓಡಿಬರುತ್ತಾಳೆ.)

ರುಕ್ಮಿಣಿಬಾಯಿ: ಹೇಳ್ರೆವ್ವಾ, ಯಾರರ ಹೇಳ್ರೀ ಅವರಿಗೆ...ಆ ಖೋಲೀ ಒಂದು ಒಡೀಬ್ಯಾಡ್ರಿ ಅಂತ ಹೇಳ್ರೀ...(ಗೋದಕ್ಕನನ್ನು ಹಿಡಿದು ಅಲ್ಲಾಡಿಸುತ್ತ) ಗೋದಕ್ಕಾ, ನೀನರ ಹೇಳ...ನಿನಗ ಎಲ್ಲಾ ಗೊತ್ತದ ಅಲ್ಲಾ...ನೀನರ ಹೇಳ...ಆ ಖೋಲ್ಯಾಗ ಸತ್ಯಬೋಧನ ಜೀವ ಅದ...ಅಲ್ಲಿಂದನೂ ಅದನ್ನ ಓಡಸಬ್ಯಾಡ್ರಿ ಅಂತ ನೀನರ ಹೇಳ....

ಗೋದಕ್ಕ : ರುಕ್ಮಿಣೀ, ಸಂಭಾಳಿಸಿಗೋ, ಏನು, ಬುದ್ಧೀ ಎಲ್ಲಿಟ್ಟೀದಿ? (ಒಂದು ಬದಿಗೆ ಅವಳನ್ನೆಳೆದುಕೊಂಡು ಹೋಗಿ) ಮೈಮ್ಯಾಲ ಎಚ್ಚರ ಅದ ಇಲ್ಲೋ... ಹುಡುಗರ ಮುಂದ ಏನು ಮಾತಾಡಲಿಕ್ಕೆ ಹತ್ತೀ.... ಸಂಭಾಳಿಸಿಕೋ ನಿನ್ನ ನೀನು...

ರುಕ್ಮಿಣಿಬಾಯಿ: ಅಯ್ಯಯ್ಯೋ, ಇಲ್ಲವಾ...ಆ ಖೋಲಿಗೆ ಕೈ ಹಚ್ಚಬ್ಯಾಡಾ ಅಂತ ಹೇಳ...ಮೊದಲ ಈ ಮನಿತನಕ್ಕ ಅವನ ಶಾಪ ಹತ್ತೇದ...ಆ ಖೋಲೀ ಒಡೀಬ್ಯಾಡಾ ಅಂತ ಹೇಳವಾ....ನನಗ ನೋಡಲಿಕ್ಕಾಗೂದುಲ್ಲಾ...

(ಶಾಂತಾ, ಅನೂ, ಅರವಿಂದ ಆಶ್ಚರ್ಯ-ಗಾಬರಿಯಿಂದ ಕಾಕೂನ ಕಡೆಗೆ ನೋಡುತ್ತ ನಿಂತಿದ್ದರೆ ಆ ಕಡೆಗೆ ಕೋಣೆಯಿಂದ ದೇಸಾಯರ ನರಳುವ ಧ್ವನಿ ಕೇಳಿ ಅರವಿಂದ, ಅನೂ ಅವರ ಹತ್ತಿರ ಓಡುತ್ತಾರೆ. ಗೋದಕ್ಕ ಒರಲುತ್ತಿರುವ ರುಕ್ಮಿಣಿಯನ್ನು ಜುಲುಮೆಯಿಂದ ಎಳೆದುಕೊಂಡು ಹೋಗಿ ಇನ್ನೊಂದು ಕೋಣೆಯಲ್ಲಿ ಕೂಡಿಸಿ ಬರುತ್ತಾಳೆ. ಅಲ್ಲಿಯ ವರೆಗೆ ಶಾಂತಾ ಕಲ್ಲುಗೊಂಬೆಯಂತೆ ನಿಂತಲ್ಲಿಯೇ ನಿಲ್ಲುತ್ತಾಳೆ.)

ಗೋದಕ್ಕ : ಇಬ್ಬರೂ ಸುಮ್ಮನ ತಲೀಗೆ ತ್ರಾಸು ಮಾಡಕೋತಾರ ನೋಡು... (ಮತ್ತೆ ತನ್ನ ಮೊದಲಿನ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳುತ್ತಾಳೆ) ಕೊಟ್ಟಾರ ಅಂದಮ್ಯಾಲೆ ಇನ್ನ ಏನ ಆದದ್ದು ಆತು ಅಂತ ಸುಮ್ಮನಿರಬೇಕು ಮತ್ತ... ಒಮ್ಮೆ ವ್ಯಾಪಾರೀ ಮಂದೀ ಕೈಯಾಗ ಬಿದ್ದ ಮ್ಯಾಲೆ ಮುಗೀತು ನೋಡು.

ಶಾಂತಾ : (ಅವಳ ಬದಿಯಲ್ಲಿ ಹೋಗಿ ಕುಳಿತು) ಗೋದಕ್ಕಾ, ಕಾಕೂಗ ಒಮ್ಮಿಂದೊಮ್ಮಿಗೀಲೇ ಏನಾತು? ಹಾಂಗ್ಯಾಕ ದೆವ್ವ ಬಂದವರ ಹಾಂಗ ಮಾಡಿದಳು?

ಗೋದಕ್ಕ : ಏನಿಲ್ಲ ಅಕ್ಕಾ... ಈಗೆರಡು ದಿನದಿಂದ ಹಿಂಗ ನಡೀಬಾರದ್ದು ನಡೀಲಿಕ್ಕೆ ಹತ್ಯಾವ, ನೋಡು, ತಲೀಗೆ ತ್ರಾಸಾಗೇದ ಆಕೀಗೆ.

ಶಾಂತಾ : ಇಲ್ಲಾ ಗೋದಕ್ಕಾ... ಆ ಖೋಲೀದು ಏನೋ ಅದ... ಇಷ್ಟು ದಿನದ ತನಕಾ ನಮಗೊಬ್ಬರಿಗೂ ಆ ಖೋಲ್ಯಾಗ ಹೋಗಗೊಟ್ಟಿಲ್ಲಾ ಕಾಕೂ... ಎಲ್ಲಾ ಮುಚ್ಚಿದ ಖೋಲೀ ತಗದು ನಾನ ಕಸಾ ಬಳೀತಿದ್ದೆ... ಆದರ ಆ ಖೋಲೀ ಮಾತ್ರ ಕೀಲೀನ ತಗೀಗೊಡತಿದ್ದಿಲ್ಲಾ...

ಗೋದಕ್ಕ : ಅಂಥಾದೇನಿಲ್ಲಾ ಬಿಡ... ಏನೋ ಆಕೀ ಮನಸಿನ ಸಮಜೂತು ಆತು... ಆಕೀ ತಲ್ಯಾಗ ಭಾಳ ದಿನದಿಂದ ಏನೋ ಕೂತದ ... ಆತು.

ಶಾಂತಾ : ಗೋದಕ್ಕಾ, ಏನದು ಹೇಳೆ ಹೇಳು... ನಾಳೆ ನೀ ಹೋದ ಮ್ಯಾಲೆ ಹಿಂಗ ಏನರ ಆದರ ಏನ ಮಾಡಲಿ? ಕಾಕೂಗ ಏನ ತಲ್ಯಾಗ ಅದ ಅಂತ ತಿಳಿದರ ತಿಳೀಬೇಕಲ್ಲಾ ನನಗ...

ಗೋದಕ್ಕ : ಹೋಗ್ಲಿ ಬಿಡ ಶಾಂತವ್ವಾ... ಏನು ಮಾಡ್ತೀ ಆ ಹಳೇ ಕಥೀ ಎಲ್ಲಾ ತೊಗೊಂಡು...

ಶಾಂತಾ : ದೇಸಾಯರ ಮನೀ ಕಥೀ ಇರೂದೆಲ್ಲಾ ಹಳೇ ಕಥೀನ ಗೋದಕ್ಕಾ ...ಇರಲಿ, ಹೇಳವಾ ನನಗ...ಆ ಖೋಲ್ಯಾಗ ಅಂಥಾದ್ದೇನದ? ತಿಳೀದ ಹೊರತು ನನಗ ಚೈನ ಬೀಳೂದುಲ್ಲಾ ನೋಡು.

ಗೋದಕ್ಕ : ಏನ ಹೇಳ್ಳೆವಾ ನನಗ ...(ಆಚೆ-ಈಚೆ ಬಗ್ಗಿ ನೋಡಿ ಬೇರೆ ಯಾರೂ ಇಲ್ಲವೆಂದು ಖಾತ್ರಿ ಮಾಡಿಕೊಳ್ಳುವಳು) ಪೂಜೆಗೆ ನಮ್ಮ ಗೋವಿಂದಾಚಾರಿ ಬರ್ತಾನಲ್ಲಾ...ಇವನ ಕಾಕಾ ಒಬ್ಬಾಂವ ಇದ್ದ ಸತ್ಯ ಬೋಧಾ ಅಂತ...ಭಾಳ ಭೊಲೋ ಹುಡುಗಾ...ನೋಡಲಿಕ್ಕೂ ಭೊಲೋನ ಇದ್ದಾ... ಆನಂದಾ ಸಣ್ಣ ಕೂಸು ಇದ್ದಾಗಿನ ಕಥೀ ಇದು.. ಆಗ ಇಲ್ಲೆ ಮನೀಗೆ ಸತ್ಯಬೋಧನ ಪೂಜಿಗೆ ಬರತದ್ದಾ... ಸತ್ಯಬೋಧಾ, ರುಕ್ಮಿಣಿ ಕುಡಿ ಆಡಿದವರು.

(ಕ್ರಮೇಣ ಬೆಳಕು ಭೂತಕಾಲದ ಕಡೆಗೆ ಸತ್ಯಬೋಧ ದೇವರ ಮುಂದೆ ಪೂಜೆಗೆ ಕುಳಿತಿದ್ದಾನೆ. ಹದಿನೆಂಟು ಇಪ್ಪತ್ತರ ಯುವತಿ ರುಕ್ಮಿಣಿ ದೇಸಾಯಿತಿಗೆ ಒಪ್ಪುವಂತೆ ಸಾಲಂಕೃತೆಯಾಗಿದ್ದಾಳೆ, ಪೂಜೆಗೆ ಅಣಿ ಮಾಡಿ ಕೊಡುತ್ತಿದ್ದಾಳೆ, ಮಡಿಯನ್ನುಟ್ಟಿದ್ದಾಳೆ)

ಸತ್ಯಬೋಧ : ರಾಘಪ್ಪ ದೇಸಾಯರು ಮನ್ಯಾಗಿದ್ಧಂಗ ಕಾಣುದುಲ್ಲಾ...?

ರುಕ್ಮಿಣಿಬಾಯಿ: ಮನ್ಯಾಗೆಂದು ಇದ್ದರು ಅವರು? (ಸೆರಗಿನ ಅಂಚಿನಿಂದ ಕಣ್ಣೊರೆಸಿ ಕೊಳ್ಳುತ್ತ) ಮನ್ಯಾಗ ಎಂದ ಕಾಲು ನಿಂತಿದ್ದೂ ಅವರವು?

ಸತ್ಯಭೋಧ : ಹಿಂಗ ನೀ ಕಣ್ಣೀರು ಹಾಕಬ್ಯಾಡs ರುಕ್ಮಿಣಿ, ನನಗ ನೋಡಲಿಕ್ಕಾ ಗೂದುಲ್ಲಾ..... ಅಲ್ಲಾ, ನಿನ್ನಂಥಾ ಚೆಲವಿ, ಸುಶೀಲ ಹೇಣ್ತಿ ಮನ್ಯಾಗ ಇದ್ದಾಗ ಹೊರಗ ಏನು ಹುಡುಕತಿದ್ದಾನು ಈ ಮನಶ್ಯಾ......

ರುಕ್ಮಿಣಿಬಾಯಿ: ಊರೂರಿಗೊಂದು ಮನೀ, ಅವರಿಗೇನು ಕಡಿಮಿ? ಒಂದು ತಿಂಗಳ ಮ್ಯಾಲಾತು ನೋಡು, ಮನೀಕಡೆ ಹಾಯದs... ಮನೀವಳಗ ನಾವು ಹೆಂಗಸರು ಕುದ್ದು- ಕುದ್ದು ಸಾಯಬೇಕು.

ಸತ್ಯಬೋಧ : ಈ ದೇವಕ್ಕ ಒಂದಿಷ್ಟು ತುಪ್ಪಾಹಾಕಿ ಸಮಾ ಮಾಡು, ಕುಡೀ ಬಂದsದ. (ಅವಳು ಮುಂದೆ ಬಗ್ಗಿ ದೀಪಕ್ಕೆ ತುಪ್ಪ ಹಾಕುತ್ತಿದ್ದಾಳೆ, ಸತ್ಯಬೋಧ ಅವಳನ್ನೇ ನೋಡುತ್ತಿದ್ದಾನೆ. ಬಾಗಿಲಲ್ಲಿ ಮೆಲ್ಲಗೆ ರಾಘಪ್ಪ ದೇಸಾಯಿ ಬಂದು ನಿಂತಿದ್ದಾನೆ, ಅವರಿಬ್ಬರಿಗೂ ಅದರ ಅರಿವಿಲ್ಲ)

ರುಕ್ಮಿಣಿಬಾಯಿ: (ದೀಪದ ಕುಡಿಯನ್ನು ಸರಿಮಾಡುತ್ತ, ಓರೆಗಣ್ಣಿನಿಂದ ಸತ್ಯಬೋಧನ ಕಡೆಗೆ ನೋಡುತ್ತ) ಹಂಗೇನು ಹುಳು-ಹುಳು ನೋಡ್ತೀ? ಎಂದೇನು ನೋಡಿಲ್ಲೇನು?

ಸತ್ಯಭೋಧ : ದಿನಾನು ನೋಡ್ತೇನಿ, ನೋಡಿಲ್ಲ್ಯಾಕ.... ಆದರ ಆ ದೀಪದ ಮಂದ ಬೆಳಕಿನ್ಯಾಗ ಅಗದೀ ಗೌರಿ ಕಂಡಹಂಗ ಕಾಣಸ್ತೀ ನೋಡು.

ರುಕ್ಮಿಣಿಬಾಯಿ: (ಕೇಳಿ ಅವಳು ನಾಚಿಗೊಂಡು) ಸಾಕ ಬಿಡೋ, ನೀನೂ ಒಬ್ಬಾಂವಾ... ಸುತ್ತಿ ಮಾಡೂದು ನಿನ್ನಿಂದs ಕಲೀಬೇಕ ನೋಡು. (ಅಲ್ಲಿಂದ ಎದ್ದು ತಿರುಗಿದಾಗ ಗಂಡ ನಿಂತದ್ದು ಕಣ್ಣಿಗೆ ಬೀಳುವದು. ಬೆಚ್ಚಿ ಬೀಳುವಳು. ಕೈಯಲ್ಲಿಯ ತುಪ್ಪದ ಪಾತ್ರೆ ಕೆಳಗೆ ಬೀಳುವದು) ನೀವು....? ಯಾ.... ಯಾವಾಗ ಬಂದ್ರಿ?

ರಾಘಪ್ಪ : (ಅಕ್ಕಸದಿಂದ) ನಾ ಬಂದು ರಗsಡ ಹೋತ್ತಾತು... ಇರ್ಲಿ... ಇಲ್ಲಿ.... ನಡೀಲಿ ನಿಮ್ಮದು (ಇಬ್ಬರನ್ನು ತೀಕ್ಷಣವಾಗಿ ನೋಡಿ ಕಾಲಪ್ಪಳಿಸುತ್ತ ಹೊರಗೆ ಹೋಗುವನು)

(ರುಕ್ಮಿಣಿ- ಸತ್ಯಬೋಧ ಇಬ್ಬರೂ ಒಬ್ಬರೋಬ್ಬರ ಮುಖ ನೋಡುತ್ತಿದ್ದಾರೆ. ಇಬ್ಬರ ಕಣ್ಣಲ್ಲಿಯೂ ಭೀತಿ- ಕಳವಳ ತುಂಬಿದೆ. ಕ್ರಮೇಣ ಬೆಳಕು ವರ್ತಮಾನದ ಕಡೆಗೆ ಗೋದಕ್ಕ- ಶಾಂತಾ ಕುಳಿತಿದ್ದಾರೆ)

ಶಾಂತಾ : ಆಮ್ಯಾಲೆ.... ಆಮ್ಯಾಲೇನಾತು?

ಗೋದಕ್ಕ : ಆಮ್ಯಾಲೇನಾಗೂದು? ನಿಮ್ಮ ಕಾಕಾ ಎಂಥಾ ಸಿಟ್ಟನವಾ ಇದ್ದ ಅನ್ನುದೂ ನಿನಗೂ ಗೊತ್ತಿರಬೇಕಲ್ಲಾ.... ನೀ ಹುಟ್ಟೂದರಾಗs ಹೋಗೇ ಬಿಟ್ಟಿದ್ದಾ, ಬಿಡರಿ, ಅಂವಾ.... ಆದರೂ ಎಲ್ಲಾರೂ ಮಾತಾಡಿದ್ದು ಕೇಳಿರಬೇಕಲ್ಲಾ..... ಆತ ನೋಡು, ಅವತ್ತಿನಿಂದ ಸುರು

ಆತು... ಬರೇ ಸಂಶಯಾ... ಸಂಶಯಾ ಮಾಡಿ ರುಕ್ಮಿಣೀ ಜೀವಾ ತಿಂದಬಿಟ್ಟಾ.

ಶಾಂತಾ : ತಾವು ತಿಂಗಳಾನುಗಟ್ಟಲೇ ಹೊರಗಿದ್ದರ ಚಿಂತಿಲ್ಲಾ....ಹೇಣ್ತಿಯಾ ಗಂಡಸಿನ ಜೋಡಿ ಬಂದು ನಕ್ಕೋಲ್ ಮಾತಾಡಬಾರದು ಈ ಗಂಡಸರಿಗೆ....ಪಾಪಾ, ಶಾಕೂ ಭಾಳ ಅನುಭೋಗಿಸ್ಯಾಳ ಬಿಡು.

ಗೋದಕ್ಕ : ಹೂಂ, ಹಣೇಬರದಾಗ ಬರದದ್ದನ್ನ ಯಾರು ತಪ್ಪಿಸತಾರ ಹೇಳು? ಆಮ್ಯಾಲ ನೋಡು, ಒಂದ ದಿನಾ ಅಂತೂ...

(ಬೆಳಕು ಮತ್ತೆ ಭೂತಕಾಲದ ಕಡೆಗೆ .ಸತ್ಯಬೋಧಮಂತ್ರಗಳನ್ನು ಪುಟಪುಟಿಸುತ್ತಾ ಒಳಗೆ ಬರುತ್ತಾನೆ. ಕೂಡಲೇ ಅಲ್ಲಿಯೇ ಕತ್ತಲಲ್ಲಿ ನಿಂತಿದ್ದ ಇಬ್ಬರು ದಾಂಡಿಗರು, ರಾಘಪ್ಪ ಅವನನ್ನು ಹಿಡಿದೆಳೆದು ದೇವರ ಖೋಲಿಗೆ ಒಯ್ಯುತ್ತಾರೆ. ಬಾಗಿಲು ಮುಚ್ಚಕೊಳ್ಳುತ್ತದೆ. ಒಳಗಿನಿಂದ ಅಯ್ಯೋ ......ಅವ್ವಾ....ಹೊಡೀ ಬ್ಯಾಡ್ರೋ....ನಾ ಏನೂ ಮಾಡಿಲ್ಲೋ ರಾಘಪ್ಪಾ....ನಿನ್ನ ಕಾಲ ಬೀಳ್ತೀನಿ....ಬಿಟ್ಟಬಿಡೋ ...ಎಂದು ಒರಲುವದು ಕೇಳುತ್ತದೆ. ಕ್ರಮೇಣ ಒರಲುವ ದನಿ ನಿಲ್ಲುತ್ತದೆ. ಇದೆಲ್ಲ ನಡೆಯುವಾಗ ರುಕ್ಮಿಣಿ ಒಂದು ಮೂಲೆಯಲ್ಲಿ ಹೆದರಿ ಮುದ್ದೆಯಾಗಿ ಕುಳಿತಿದ್ದಾಳೆ. ಅವರು ಮೂವರು ಬಟ್ಟೆಗಳನ್ನು ಸರಿಪಡಿಸುತ್ತ ಬಾಗಿಲು ತೆರೆದು ಹೊರಬರುತ್ತಾರೆ.)

ರಾ : ಭಡಕ್ಕನೆ ಆಚಾರೀಗೊಂದಿಷ್ಟು ಗತೀ ಕಾಣಿಸಿಬಿಡ್ರಿ.(ಮೂಲೆಯಲ್ಲಿ ಕುಳಿತ ಹೆಂಡತಿಯನ್ನು ತಿರಸ್ಕಾರದಿಂದ ನೋಡಿ, ಕೈಯಲ್ಲಿದ್ದ ಬಡಿಗೆಯನ್ನು ಅವಳೆದುರು ಎಸೆದು, ಟೊಪ್ಪಿಗೆ ಚಪ್ಪಲು ಹಾಕಿಕೊಂಡು ಹೊರಗೆ ಹೋಗುತ್ತಾನೆ. ಬಡಿಗೆ ಹತ್ತಿರ ಬಂದು ಬಿದ್ದಾಗ ರುಕ್ಮಿಣಿ ಹೆದರಿ ಕಂಗಾಲಾಗಿ ಒಂದು ಬದಿಗೆ ಸರಿಯುತ್ತಾಳೆ.)

ಗೋದಕ್ಕ : ಅಂದಿನಿಂದ (ಬೆಳಕು ವರ್ತಮಾನದ ಕಡೆಗೆ) ಆ ಖೋಲಿಗೆ ಕಾಲು ಹಾಕಲಿಲ್ಲಾ ನೋಡು, ಆಕೀ...ಮುಂದ ಒಂದ ವರ್ಷದಾಗ ರಾಘಪ್ಪನೂ ಸತ್ತಿ.... ಯಾವಾಕೀ ಮನ್ಯಾಗೋ ಬಿದ್ದು....ಏನಾತು, ಹ್ಯಾಂಗ ಸತ್ತಾ ಒಂದೂ ತಿಳೀಲಿಲ್ಲಾ.....

ಶಾಂತಾ : ಯಾರೋ ಏನೋ ಹಾಕಿದರು ಅಂತಾರ ಊರಾಗೆಲ್ಲಾ....

ಗೋದಕ್ಕ : ಹೂಂ...ಹತ್ತು ಮಂದಿ ಹತ್ತು ಥರಾ ಮಾತಾಡತಾರ.... ನಾ ಅನ್ನೋದು ಆ ಬಡ ಆಚಾರೀ ಶಾಪ ಹತ್ಯು ಅಂತ.....ನನಗಂತೂ ಹಂಗ ಅನಸತ್ಯದ.

(ಹೊರಗೆ ಏಕೋ ಗೋಡೆ ಒಡೆಯುವ ಸದ್ದು ನಿಂತಿದೆ. ದೇಸಾಯರು ಕನಸಿನಲ್ಲಿದ್ದವರಂತೆ ಎದ್ದು ಬರುತ್ತಾರೆ)

ಶಾಂತಾ : ಅಯ್ಯಾ, ದಾದಾ ಯಾಕ ಎದ್ದು ಬಂದ್ರು? ಗುಳಿಗೀ ಕೊಟ್ಟು ಮಲಗಿಸಿದ್ದೆ, ನೋಡು ಅಂದ್ರೂ ಎದ್ದಬಂದಾರ.

ದೇಸಾಯರು : (ಕನಸಿನಲ್ಲಿದ್ದವರಂತೆ ನಡೆಯುತ್ತ) ಹೂಂ....ಚಿನೂ ಕೇಳುತಿದ್ದ ದೇವರಿಲ್ಲದ ಗೋಡೀ ಎಲೆಲವ ಅಂತ...ಇಲ್ಲೆವ ನೋಡು, ಚಿನು ಇವ ದೇವರಿಲ್ಲದ ಗೋಡೀ.... ಕೈಕಾಲು ಹಚಿಗೊಂಡು ಮನಶ್ಯಾರ ಹಾಂಗೇ ಒಡ್ಯಾಡತಾವ..(ಶಾಂತಾ ಹತ್ತಿರ ಬಂದೊಡನೆ) ಹೋದರ ಅವರು ತಿರಗಿ? ಆನಂದ ಬಂದನೇನು? ಶೇಡಜೀ ಅವರ ಮನೀ ಅವರೂ ಬಂದರೇನು? ಅವರ ಬಂದು ನಿಂದರಸಿರಬೇಕು ಇವರ ಅಡ್ನಾಡಿ ಕೆಲಸಾ....(ಅನ್ನುತ್ತ ಕಿಡಕಿಯ ಹತ್ತಿರ ಹೋಗಿ ಹೊರಗೆ ನೋಡುತ್ತಾರೆ. ಹೊರಗೆಲ್ಲ ಬಟ್ಟ ಬಯಲಾಗಿದೆ. ಕೂಲಿಗಳು ದೊಡ್ಡ ದೊಡ್ಡ ಕಂಬಗಳನ್ನು ಟ್ರಕ್ಕಿನಲ್ಲಿ ಹೇರುವ ಸದ್ದು.... ವ,ತೂ ಬಾಜೂಸೇ ಉಠಾವೋಜೀ...ಆಯಿಸ್ತಾ.. ಆಯಿಸ್ತಾ.. ಡ್ಯಾಮೇಜ್ ನಹೀ ಹೋನಾಕಾ ಇತ್ಯಾದಿ ಮಾತುಗಳು ಕೇಳ ಬರುತ್ತವೆ.)

ದೇಸಾಯರು : (ಒಮ್ಮೆಲೇ ಆವೇಶದಿಂದ)ಏ, ಹುಚ್ಚ ಸೂ....ಮಕ್ಕಳ, ಏನ ಮಾಡ್ತೀರಿ ...(ಹೊರಗಿನ ಒಬ್ಬ ಬಯಲನ್ನು ನೋಡಿ) ಅಯ್ಯೋ ದೇವರ ಭಗವಂತಾ.....ನಮ್ಮ ವಾಡೇ, ನಮ್ಮ ವಾಡೇ....

(ಅವರ ಕೂಗನ್ನು ಕೇಳಿ ಒಳಗಿನಿಂದ ರುಕ್ಮಿಣಿ, ಹೊರಗಿನಿಂದ ಅರವಿಂದೇ ಓಡಿ ಬರುತ್ತಾರೆ. ಶಾಂತಾ ಆಗಲೇ ಅವರನ್ನು ಆಧಾರ ಕೊಟ್ಟು ಹಿಡಿದಿದ್ದಾಳೆ.)

ದೇಸಾಯರು : ಅರವಿಂದಾ, ನೋಡೋ, ಎಲ್ಲಾ ತೊಗೊಂಡೇ ಹೋಗಲಿಕ್ಕೆ ಹತ್ಯಾರ ಅವರು... ನೋಡೋ ಅಲ್ಲೇ... ತಡೆಯೋ ಅವರನ್ನ... (ಕೈ ಕೊಸರಿ ಓಡಲು ಪ್ರಯತ್ನಿಸುತ್ತಾರೆ, ಎಚ್ಚರದಪ್ಪಿ ಕುಸಿಯುತ್ತಾರೆ)

ಶಾಂತಾ : ದಾದಾ.....ದಾದಾ... ಹೋಗೋ ಅರವಿಂದಾ, ಲಗೂ ಡಾಕ್ಟರ್‌ನ ಕರಕೊಂಡು ಬಾ... ಅನೂ, ನೀ ಬಾ. ಹಿಡೀ ಬಾ... ಗೋದಕ್ಕಾ ಇಲ್ಲೆ ಒಂದಾ ಗುಡಾರಾ ಹಾಕು... ದಾದಾ... ದಾದಾ (ರುಕ್ಮಿಣಿ, ಗೋದಕ್ಕ, ಅನೂ ಎಲ್ಲರೂ ಓಡಿ ಬರುತ್ತಾರೆ. ಕ್ರಮೇಣ ರಂಗದ ಮೇಲೆ ಕತ್ತಲೆ)

ದೃಶ್ಯ -೩

(ರಂಗ ಇಬ್ಭಾಗವಾಗಿದೆ. ಒಂದು ಭಾಗದಲ್ಲಿ ಎಲ್ಲರೂ ನೆರೆದಿದ್ದಾರೆ. ಆನಂದ-ವಸುಧಾ ಕುರ್ಚಿಗಳ ಮೇಲೆ ಕುಳಿತುಚಹ ಕುಡಿಯುತ್ತತಮ್ಮ-ತಮ್ಮಲ್ಲೇ ಮಾತನಾಡುತ್ತಿದ್ದಾರೆ. ಹತ್ತಿರದಲ್ಲೇ ಇನ್ನೊಂದು ಕುರ್ಚಿಯ ಮೇಲೆ ಶ್ಯಾಮ ಮೌನವಾಗಿ ಚಹ ಕುಡಿಯುತ್ತ ಕುಳಿತಿದ್ದಾನೆ. ಶಾಂತಾ, ಗೋದಕ್ಕ ಮತ್ತು ರುಕ್ಮಿಣಿ ಒಂದು ಬದಿಗೆ ಗೋಡೆಗಾತು ನಿರ್ವಿಣ್ಣರಾದವರಂತೆ ಕುಳಿತಿದ್ದಾರೆ.)

ಗೋದಕ್ಕ : (ಮೆಲ್ಲಗೆ) ರುಕ್ಮಿಣೀ, ಮೊದಲ ಅನೂನ ವಿಷಯಾ ಮಾತಾಡು ನಿನ್ನ ಮಗನ ಜೋಡೀ...ಗೋಡೀ ಒಡದದ್ದರ ಬಗ್ಗೆ ಝಗಳಾಡಬ್ಯಾಡಾ, ತಿಳೀತೇನು?

ರುಕ್ಮಿಣಿ : ಹೂಂ.... ನಾನೂ ಅದ ಅಂತೀನಿ...ನನಗೂ ಹುಡಿಗೀದು ಕಾಳಜೀ ಹತ್ತೇದ (ಆನಂದನ ಕಡೆಗೆ ತಿರುಗಿ)ಆನಂದಾ, ವಸುಧಾ, ಏನು ವಿಚಾರಾ ಮಾಡಿದ್ರಿ?

ವಸುಧಾ : ಯಾತರ ಬಗ್ಗೆ...? ಏನು ವಿಚಾರಾ ಮಾಡೂದು?

ರುಕ್ಮಿಣಿ : ಅದ, ಪೋನ..ಯಾವಾಗ ಮೂರ್ತಾ ತಗಸತೀರಿ?

ವಸುಧಾ : ಛಿ ...ಏನಾ ಹುಚ್ಚತನಾ ಇದು... ಅದೆಲ್ಲಾ ಏನಿಲ್ಲಾ, ಅವನ ಕಲಿಯೂದು ಮುಗಿಯೂ ತನಕಾ.. ಏನೂ ಮಾತಿಲ್ಲಾ.... ಲಗ್ನದ ವಯಸ್ಸೇನು ಈಗ ಅವಂದು?

ಶಾಂತ : (ವ್ಯಂಗ್ಯವಾಗಿ) ಲಗ್ನದ ವಯಸ್ಸಲ್ಲಾ, ಇದೆಲ್ಲಾ ಮಾಡೂ ವಯಸ್ಸು ಮಾತ್ರ ಅಂತ ಕಾಣಿಸತದ.

ವಸುಧಾ : ಶಾಂತಕ್ಕಾ, ಬರೇ ಅಂವಗ ನಂಬ್ಯಾಡ್ರಿ...ನಿಮ್ಮ ಮಗಳಿಗೆ ತಿಳೀಬಾರದೇನು, ಹೆಣ್ಣು ಹುಡಿಗ್ಯಾಗಿ ?

ಶಾಂತಾ : ಹೌದರೆವ್ವಾ, ಎಲ್ಲಾ ಹೆಣ್ಣ ಹುಡುಗರಿಗೇ ತಿಳೀಬೇಕು ನೋಡ್ರಿ, ಗಂಡು ಹುಡುಗರಿಗೇನೂ ತಿಳಿಯೂ ಕಾರಣ ಇಲ್ಲಾ.

ರುಕ್ಮಿಣಿ : ನೀವು ಸುಮ್ಮನಿರ್ರೀ ಇಬ್ಬರೂ, ಬರೇ ವಾದಿಸ್ಯಾಡಬ್ಯಾಡ್ರಿ, ನೀ ಹೇಳು ಆನಂದಾ, ಏನಂತೀ?

ಆನಂದ : ನಾ...ನಾ... ಏನನ್ನೊದು ವಸುಧಾ ಅಂತಾಳ ದು ಬರೇ ಅದ... ಈ ಗತಿ ಲಗ್ನಾ ಮಾಡಿ ಕೂಡಿಸಿದರ ಕಲಿಯೂ ಕಡೇ ಏನು ಲಕ್ಷ್ಯ ಹತ್ತೀತು ಅವಂದು?

ರುಕ್ಮಿಣಿ : ಅಲೇಲ ಬರೇ ವಂದ ಹೇಳ್ತೀರಲ್ಲಾ ನೀವಿಬ್ಬರೂ..... ನಾಳೆ ಏನಕೇನಾರ ಆದರ ೀನ ಗತಿ ಹುಡುಗೀದು?

ವಸುಧಾ : ಹಾಂಗೇನಾರ ಆದರ ಬೇಕಾದಷ್ಟು ಮಂದಿ ಡಾಕ್ಟರಿದ್ದಾರ,

ಆನಂದ : ಹೌದು, ಅವ್ವಾ ಇಲ್ಲೆ ಆಗಲಿಲ್ಲಾಂದರೇ ಮುಂಬಯಿಗೆ ಬರ್ರಿ, ಏನರ ವ್ಯವಸ್ಥಾ ಮಾಡೂಣಂತ, ಖರ್ಚು ನಾ ಕೊಡಿತೀನಿ.

ಶಾಂತಾ : ಕೇಳಿದೆಲ್ಲಾ ಶಾಕೂ .... ಖರೇ ಅಂದರ ಲಗ್ನಾ ಮಾಡೂದು ನಮ್ಮ ಮನಸ್ಯಾಗೂ ಇಲ್ಲಾ... ಆದರ ಇವರೇನಂತಾರ ನೋಡಬೇಕೂ ಅಂತ ಸುಮ್ಮನಿದ್ದೆ. ಇಷ್ಟೊತ್ತನಕಾ ಅವರೆಲ್ಲಾ ರೊಕ್ಕ ಇದ್ದವರವಾ, ರೊಕ್ಕದ ಮಾತಾಡ್ತಾರ...ಎಲ್ಲಾ ಪ್ರಾಬ್ಲಮ್ಸ ರೊಕ್ಕದಲೇನ ಬಿಡಿಸತಾರ.

ಶಾಮ : ಶಾಕೂ, ಬಿಟ್ಟುಬಿಡ್ರಿ ಈ ಮಾತು ಇಲ್ಲಿಗೇ ...ಇಂಥಾ ಬೇಜವಾಬ್ದಾರ ಹುಡುಗರ...ಇಂಥಾ ಹೊಲಸು ಸಂಸ್ಕೃತಿ ಒಳಗ ಬೆಳದ ಹುಡುಗಗ ಅವರ ಬಂದು ಕಾಲಬಿದ್ದರೂ ನಾವು ನಮ್ಮ ಮಗಳನ ಕೊಡೂದಲ್ಲಾ (ಸಿಟ್ಟಿನಿಂದ ಹೊರಗೆದ್ದು ಹೋಗುವನು)

(ಬೆಳಕು ನಿಧಾನವಾಗಿ ಇನ್ನೊಂದು ಭಾಗಕ್ಕೆ ಸರಿಯುತ್ತದೆ. ದೇಸಾಯರು ಮಂಚದ ಮೇಲೇ ಕಣ್ಮುಚ್ಚಿ ಮಲಗಿದ್ದಾರೆ. ಶಾಂತಾ ಅವರಿಗೆ ಔಷಧಿ ಕುಡಿಸುವ ಪ್ರಯತ್ನದಲ್ಲಿದ್ದಾಳೆ. ಆನಂದ, ವಸುಧಾ, ರುಕ್ಮಿಣಿ, ಗೋದಕ್ಕ ಒಳಗೇ ಬರುತ್ತಾರೆ.)

ಆನಂದ : ಹ್ಯಾಂಗಿದ್ದಾರ ಕಾಕಾ ಈಗ? ಎಚ್ಚರಿಕ್ಯಾಗ್ಯಾರ ಏನು?

ರುಕ್ಮಿಣಿ : ನೋಡಪಾ, ನೀನ, ಹಿಂಗಿದ್ದಾರ.. ನಿನ್ನಿಯಿಂದ ಒಂದ ಕಾಳು ನೀರು ಹೋಗಿಲ್ಲಾ ಹೊಟ್ಯಾಗ...ಏನೂ ತೊಗೊಳ್ಳೋಕ್ಕೇ ತಯಾರಿಲ್ಲಾ....

ಆನಂದ : ಹಿಂಗ ಹ್ಯಾಗಾತೇ ಒಮ್ಮಿಗಿಲೇ.....?

ರುಕ್ಮಿಣಿ : ಮತ್ತ... ವಾಡೇ ಅಂದರ ಜೀವಪ್ರಾಣಿ ಅವರಿಗೆ, ಅವರ ಕಣ್ಣಮುಂದ ಅದನ್ನ ಧ್ವಂಸ ಮಾಡಿದರ ಅವರಿಗೆ ಏನನಸಬ್ಯಾಡಾ ಹೇಳು? ನಿನ್ನೆ ಆ ಜನಾ ಗೋಡೀ ಒಡಿಲೀಕ್ಕೆ ಹತ್ತಿದಾಗ ಒಂದೊಂದು ಸುತಿಗೀ ಪೆಟ್ಟೂ ಅವರ ಎದೀಮ್ಯಾಲ ಬಿದ್ದಂಗ ಆಗಿರಬೇಕು.. ಅರ್ಧಾ ಮನೀ ಎಲ್ಲಾ ಕೆಡವಿ ಬಿಟ್ಟರಪಾ ಸಂಜಿ ಅನ್ನೊದರಾಗ ...ಎಲ್ಲಾ ಖಂಬಾ-ಗಿಂಬಾ ಟ್ರಕ್ಕಿನ್ಯಾಗ ತೊಗೊಂಡೇ ಹೋದರು....(ಅವಳು ಕಣ್ಣೊರೆಸಿ ಕೊಳ್ಳುವಳು)

ಆನಂದ : ಹಳೇ ಮನಿ.... ಇವತ್ತಲ್ಲಾ ನಾಳೆ ಬೀಳೂದ.....

ರುಕ್ಮಿಣಿ : (ರೇಗಿದ ದನಿಯಲ್ಲಿ) ಹಳೇ ಮನೀ ಏನಂತೀ? ಹಿರೇರ ವಾಡೆ ಇದು ಬೀಳದಂಗ ಆಧಾರ ಕೊಟ್ಟು ನಿಂದರಸೂದು ಬಿಟ್ಟು ಎಲ್ಲಾ ಒಡದ ಹಾಕೂ ಗತಿ...ನಾವೂ ಇವತ್ತಲ್ಲಾ ನಾಳೆ ಸಾಯೂ ಅವರ... ಬಿಟ್ಟುಬಿಡು ನಮ್ಮನ್ನ ಸಾಯಲಿಕ್ಕೆ...

ಆನಂದ : ಅವ್ವಾ, ಹಿಂಗ್ಯಾಕ ಮಾತಾಡತೀ?

ರುಕ್ಮಿಣಿ : ಮತ್ತ ಏನ ಮಾಡ್ಲಿ? ನೀ ಬರೂದ ಹಾದೀ ನೋಡುತಿದ್ದೆ. ಇನ್ನುಳದದ್ದರ ಕೆಡವಬ್ಯಾಡ್ರೇ ಅಂತ ಹೇಳತೀನಿ ಅವರಿಗೇ ಅಂತ, ನೀ ಹೀಂಗೇ ಮಾತಾಡ್ತೀನಿ.

ಆನಂದ : ಈಗ ಹ್ಯಾಂಗ ನಮಗ ಮಾತಾಡಲಿಕ್ಕೇ ಬರತದ ಮಾರಲಿಕ್ಕೆ ಕೊಟ್ಟ ಮ್ಯಾಲ ಮುಗೀತು. ಅವರೇ ತಮಗೇನು ಬೇಕು ಅದು ಮಾಡ್‌ತಾರ. ಹಾಂಗ ಮಾಡಬ್ಯಾಡ್ರಿ ಅಂತ ನಮಗ ಹ್ಯಾಂಗ ಅನಲಿಕ್ಕೇ ಬರತದ?

ಶಾಂತಾ : ಮಾರಲಿಕ್ಕೆ ಕೊಟ್ಟ ಮ್ಯಾಲೋ ಏನು ಅವರು ಕೊಟ್ಟ ಕಾರು ತೊಗೊಂಡ ಮ್ಯಾಲೋ.....? ಖರೇ ಅದ.. ಲಂಚಾನ ತೊಗೊಂಡ ಮ್ಯಾಲೆ ಇನ್ನೇನೇ ಮಾತಾಡಲಿಕ್ಕೆ ಬರೂದುಲ್ಲಾ.

ವಸುಧಾ : ಶಾಂತಾಕ್ಕ, ನೀವು ಇಲ್ಲದ್ದ ಮಾತಾಡಬ್ಯಾಡ್ರಿ...ಎಲ್ಲೀ ಕಾರು,ಏನ ಮಾತಾಡ್ತೀರಿ... ನಿಮ್ಮದು ನಿಮಗರ ಗೊತ್ತದ ಏನು?

ಶಾಂತಾ : ನಿಮ್ಮ ಮಗನ ಹೇಳ್ಯಾನ ಎಲ್ಲಾ, ಅಂವನ್ನ ಕೇಳ್ರಿ.

ಆನಂದ : (ಸಿಟ್ಟಿನಿಂದ) ಡ್ಯಾಮಿಡ್ ! ಈ ಮೂರ್ಖಗೊಂದು ಎಲ್ಲೇನು ಮಾತಾಡಾಬೇಕನ್ನೂದು ತಿಳಿಯೂದುಲ್ಲಾ.

ಶಾಂತಾ : ಆತ...ಈಗರ ಖರೇ ಹೊರಬಿತ್ತಲ್ಲಾ...

ವಸುಧಾ : ನಡೀರಿ ಸಾಕಿನ್ನ, ಇಷ್ಟು ಅಪಮಾನಾದದ್ದು. ನಾ ಇಲ್ಲೇ ಒಂದ ಕ್ಷಣ ನಿಂದ್ರೂದಲ್ಲಾ ಇನ್ನ.

ಆನಂದ : ತಡೀಯ ನೀನೂ ಒಬ್ಬಾಕಿ... ಬಂದದ್ದಾಯತಕ್ಕ ನಾವು? ಮೊದಲ ಆ ಕೆಲಸಾವರ ಮುಗಸೂಣು.

(ಹೊರಗೆ ಹೋಗಿ ತನ್ನ ಬ್ರಿಫ್‌ಕೇಸ್‌ನ್ನು ತಂದು ಅದರಿಂದ ಕಾಗದಗಳನ್ನು ಹೊರತೆಗೆದು)

ಅವ್ವಾ, ತೋಟದ ಕಾಗದಾ-ಪತ್ರಾ ತಯಾರ ಮಾಡಿಕೊಂಡ ಬಂದೀನಿ. ಸಹೀ ಮಾಡಿಬಿಡು...ತೊಗೋ, ಆಗಳೇ ಆರು ಲಕ್ಷಕ್ಕ ಚೆಕ್ಕೂ ಬರದುಬಿಟ್ಟಾರ ಶೇಡಜೀ...

ಶಾಂತಾ : ತೋಟಾ ಯಾತಕ್ಕೇ ತೊಗೋತಾರ ನಿಮ್ಮ ಶೇಡಜೀ? ಗಿಡಾ ಕಡದು ಕಟಿಗೀ ಮಾರಲಿಕ್ಕೇ ಇರಬೇಕು.

ಆನಂದ : ನೀ ಸುಮ್ಮನಿರು ಶಾಂತಿ, ಇದರಾಗ ನಡುವ ಮಾತಾಡೇಬ್ಯಾಡಾ..ಇದು ನನ್ನ ಮತ್ತು ಅವ್ವನ ನಡುವಿನ ಮಾತು. ನಿನಗೇನೂ ಸಂಬಂಧ ಇಲ್ಲಾ.

ಶಾಂತಾ : ಈ ವ್ಯವಹಾರದಾಗ ಸುಳ್ಳು ಹೇಳಲಿಕ್ಕೆ ಏನು ಕೊಟ್ಟಾರ ನಿಮ್ಮ ಶೇಡಜೀ...? ವಿಮಾನಾನ ಕೊಟ್ಟಾರೇನು?

ಆನಂದ : ಯೂ ಶಟ್ ಅಪ್ ...ಜಾಸ್ತೀ ಮಾತಿಡಾದೆಂದ್ರೇ ನೋಡು (ಕೈಯೆತ್ತುತ್ತಾನೆ)

ರುಕ್ಮಿಣಿ : (ಅವನ ಕೈಯನ್ನು ಹಿಡಿದು) ಖಬರದಾರ, ಮನೀ ಹೆಣಮಗಳ ಮ್ಯಾಲೇ ಕೈಯೆತ್ತತೀ ಏನು? ತಾ ಇಲ್ಲೆ, ತಾ ಆ ಕಾಗದಾ...

ಆನಂದ : ತೊಗೋ ಇಲ್ಲೇ ಸಹಿಮಾಡು... ಈ ಚೆಕ್ ತೊಗೋ.

ರುಕ್ಮಿಣಿ : ನೀನ ತೊಗೋ ಎಲ್ಲಾ (ಎರಡನ್ನು ಹರಿದು ಚೂರು ಚೂರು ಮಾಡಿ ಅವನ ಮುಂದೆ ಚೆಲ್ಲುವಳು.) ನನಗೇನೂ ಬ್ಯಾಡಾ... ನೀನ ತೊಗೋ ನಿನ್ನ ಚೆಕ್ಕು... ನಿನ್ನ ಶೇಡಜೀಗೆ ಹೇಳು-ಇನ್ನ ಈ ಕಡೇ ಕಾಲು ಹಾಕಬ್ಯಾಡಾ ಅಂತ... ತಪ್ಪಿಬಂದರ ಅವನ ಕಾಲು ಮುರದು ಕೈಯಾಗ ಕೊಡ್ತೀನಿ ಅಂತ ಹೇಳು. ಹೋಗು ಈಗ, ನಿನ್ನ ಹೆಣ್ತಿ ಹೊರಗ ಹಾದಿ ಕಾಯಕೋತ ನಿಂತಾಳ. ಹೋಗ ಈಗ ಸಧ್ಯಾ... ನನ್ನ ಕಣ್ಣ ಮುಂದ ನಿಂದರಬ್ಯಾಡಾ.

(ಆನಂದ ದಂಗು ಬಡಿದವರಂತೆ ನಿಂತಿದ್ದಾನೆ. ಇದೆಲ್ಲ ನಡೆದಾಗ ಶಾಂತಾ ಕೂಗಿಕೊಳ್ಳುತ್ತಾಳೆ.)

ಶಾಂತಾ : ಶಕ್ಕೂ... ಶಕ್ಕೂ.. ನೋಡ ಇಲ್ಲೇ... ದಾದಾ, ಹ್ಯಾಂಗ ಮಾಡಲಿಕ್ಕೆ ಹತ್ಯಾರ.

ರುಕ್ಮಿಣಿ : (ಹೋಗಿ ಹತ್ತಿರ ಕುಳಿತು) ಡಾಕ್ಟರರನ್ನ ಕರಕೊಂಡು ಬರ್ರ್ಯೋ ಯಾರರ... ಅರವಿಂದಾ....

ಗೋದಕ್ಕ : (ಹತ್ತಿರೇ ಕುಳಿತು ಅವರ ಕೈ ಮುಟ್ಟಿ ನೋಡಿ) ಯಾ ಡಾಕ್ಟರೂ ಬ್ಯಾಡಾ ಇನ್ನ... ಆತು ಮುಗೀತು... ಪಾರಾದಾ... ಪುಣ್ಯವಂತಾ.... ಪಾರಾದಾ...

ಶಾಂತಾ : ದಾದಾ,.... ದಾದಾ... (ಅಳತೊಡಗುತ್ತಾಳೆ, ಅರವಿಂದ, ಮಕ್ಕಳು ಹೊರಗಿನಿಂದ ಓಡಿಬರುತ್ತಾರೆ. ನಿಧಾನವಾಗಿ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಹಿನ್ನೆಲೆಯಲ್ಲಿ ಮತ್ತೆ ಗೋಡೆಗಳನ್ನು ಒಡೆಯುವ ಸದ್ದು ಪ್ರಾರಂಭವಾಗುತ್ತದೆ.)

-ಸಮಾಪ್ತ-

7 IInd
III F


ಬಿ.ವಿ. ಕಾರಂತರ ಬಗ್ಗೆ ಅವರ ಸಾಧನೆಗಳ ಬಗ್ಗೆ ಹಾಗೂ ಅವರ ಅಸಾಧಾರಣ ವ್ಯಕ್ತಿತ್ವದ ಬಗ್ಗೆ ನಾನು ಯಾರಿಗೂ ವಿಶೇಷವಾಗಿ ಹೇಳಬೇಕಾದ್ದೇನೂ ಇಲ್ಲ. ಬದುಕಿನಲ್ಲಿ ಯಾವ ಸುಖವನ್ನು ಅಪೇಕ್ಷಿಸದ ಕಾರಂತರಿಗೆ ರಂಗ ಕಲೆ, ರಂಗ ಸಂಗೀತ, ರಂಗ ಸಾಹಿತ್ಯ, ರಂಗ ಪ್ರದರ್ಶನಗಳು ಇವೇ ಮಹಾಮಂತ್ರಗಳಾಗಿದ್ದವು.

ಪ್ರೇಮಾ ಕಾರಂತ



ಬಿ.ವಿ. ಕಾರಂತರ ನೆನಪನ್ನು ಹಸಿರಾಗಿಡಲು ಪ್ರತಿಷ್ಠಾನದ ವತಿಯಿಂದ ನಾಟಕ ರಚನಾ ಸ್ಪರ್ಧೆ ಏರ್ಪಡಿಸಿ, ಬಹುಮಾನ ಪಡೆದ ನಾಟಕಗಳನ್ನು ಪ್ರಕಟಿಸುತ್ತಿರುವುದು ಸಂತೋಷದ ವಿಷಯ.

ಸಿ.ಆರ್. ಸಿಂಹ



ಇಲ್ಲಿಯ ಎರಡೂ ನಾಟಕಗಳು ಉತ್ತರ ಕರ್ನಾಟಕ ಭಾಷೆಯಲ್ಲಿವೆ. ನಾಟಕಗಳ ರಚನೆಯೇ ಸ್ಥಗಿತವಾಗಿದ್ದು ಚರ್ವಿತ ಚರ್ವಣದಲ್ಲೇ ತೃಪ್ತರಾಗ ಬೇಕಾಗಿರುವ ಪ್ರಸ್ತುತ ಸಂದರ್ಭದಲ್ಲಿ ಇಂಥ ಪ್ರಯೋಗಶೀಲ ನಾಟಕಗಳು ಸ್ವಾಗತಾರ್ಹ.

ಎಚ್.ಜಿ.ಎಸ್. ರಾವ್



ಇವೆರಡು ನಾಟಕಗಳು ತಾಂತ್ರಿಕ ದೃಷ್ಟಿಯಿಂದ ಉತ್ತಮ ನಾಟಕಗಳೇ ಸರಿ. ವಸ್ತು ಪಾತ್ರ, ಭಾಷೆ ಪರಿಕರಿಗಳೆಲ್ಲವೂ ಕಾರ್ಯೈಕ್ಯ ಕ್ರಿಯೈಕ್ಯ, ಸ್ಥಳೈಕ್ಯಗಳ ಜೊತೆ ಒಂದನ್ನೊಂದು ಕೈ ಹಿಡಿದು ನಡೆಯುತ್ತವೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ



ನನ್ನ ಮಕ್ಕಳ ನಾಟಕ ಜಂಬೂ ಸವಾರಿಯನ್ನು ರಂಗದ ಮೇಲೆ ವಿಶಿಷ್ಟ ರೀತಿಯಲ್ಲಿ ತಂದ, ಸಾವಿರಾರು ಪ್ರೇಕ್ಷಕರನ್ನು ರಂಜಿಸಿದ ಕಾರಂತರು ಎಂದಿಗೂ ಶ್ರೇಷ್ಠರೇ ಸರಿ. ಪಾತ್ರಗಳು ಮತ್ತು ದೇವರಿಲ್ಲದ ಗೋಡೆ ನಾಟಕಗಳು ಓದಿ ಸಂತೋಷ ಪಟ್ಟಿದ್ದೇನೆ. ರಂಗಕ್ಕೆ ಸೂಕ್ತ ನಾಟಕಗಳು.

ಎ. ಎಸ್.ಮೂರ್ತಿ



ಪುಸ್ತಕದ ಕೆಲಸ ಆರಂಭಿಸಿದ್ದು ಕೇಳಿ ತುಂಬಾ ಸಂತೋಷವಾಯಿತು. ಬೆಳೆಯುತ್ತಿರುವ ನಮ್ಮಂತಹವರಿಗೆ ಅನುಕೂಲ. ಸದಾ ಕ್ರಿಯಾತ್ಮಕವಾಗಿ ಯೋಚಿಸುವ ತಮ್ಮಂತಹವರಿಂದ ಒಂದಿಷ್ಟು ಕೆಲಸಗಳು ಸಾಧ್ಯ. ಅದು ಈ ನಾಡಿಗೆ ಕೊಡುಗೆಯೇ ಸರಿ.

ಶಿರಗಾನಹಳ್ಳಿ ಶಾಂತನಾಯ್ಕ



ಡೊಳ್ಳಹೋಗಿ ಬಾಲಬಂತು ಥುಂ ಥುಂ ಮಕ್ಕಳ ನಾಟಕ ಬರೆದಿದ್ದ ನನಗೆ ಬಿ.ವಿ. ಕಾರಂತ ರಂಗ ಪ್ರತಿಷ್ಠಾನಕ್ಕೆ ನಾಟಕ ಬರೆದಾ ಅದಕ್ಕೆ ಬಹುಮಾನವೂ ಬಂದಿತು. ಎಂಬುದು ನನಗೆ ಬಹಳ ಸಂತಸ ತಂದಿದೆ. ಮತ್ತಷ್ಟು ಬರೆಯುವ ಉತ್ಸಾಹ ಮೂಡಿ ಬಂದಿದೆ.

ದಮಯಂತಿ ನರೇಗಲ್ಲ

ಬೆಲೆ ರೂ. 60 /-

ಸುಂದರ ಪ್ರಕಾಶನ
43, ಚಿತ್ರಶ್ರೀ ಕಲಾಮಂದಿರ 5ನೇ ತಿರುವು ಅ.ನ. ಸುಬ್ಬರಾವ್‌ರಸ್ತೆ, ಹನುಮಂತನಗರ,
ಬೆಂಗಳೂರು 560 019